# ಅನುದಿನದ ಆಹಾರ

## ANUDHINADA AHARA - JULY 2015

ಜುಲೈ - 2015

ಮರ 16 ಹಣ್ಣು 7 Tree 16 Fruit 7

## ಬಿಡುಗಡೆಯೂ ಮಹಿಮೆಯೂ!

ಒಂದು ಸಬ್ಬತ್ ದಿನದಲ್ಲಿ ಆತನು ಒಂದು ಸಭಾ ಮಂದಿರದಲ್ಲಿ ಉಪದೇಶ ಮಾಡುತ್ತಿದ್ದನು. ಅಲ್ಲಿ ಹದಿನೆಂಟು ವರ್ಷಗಳಿಂದ ದೆವ್ವ ಬಡಿದು ನಡು ಬೊಗ್ಗಿ ಹೋಗಿದ್ದ ಒಬ್ಬ ಸ್ತ್ರೀಯೂ ಇದ್ದಳು. ಯೇಸು ಆಕೆಯನ್ನು ಹತ್ತಿರಕ್ಕೆ ಕರೆದು ಆಕೆಗೆ ಅಮ್ಮಾ ನಿನಗೆ ರೋಗ ಬಿಡುಗಡೆಯಾಯಿತು ಎಂದು ಹೇಳಿ ಆಕೆಯ ಮೇಲೆ ಕೈ ಇಟ್ಟ ಕೂಡಲೇ ಆಕೆ ನೆಟ್ಟಗಾದಳು. ಯೇಸು ಸಬ್ಬತ್ ದಿನದಲ್ಲಿ ಖಾಯಿಲೆ ಗುಣಪಡಿಸಿದ್ದನ್ನು ಕಂಡ ಸಭಾ ಅಧಿಕಾರಿಯು ಆಕ್ಷೇಪ ವ್ಯಕ್ತಪಡಿಸಿದಾಗ ಯೇಸುಕ್ರಿಸ್ತನು ಹದಿನೆಂಟು ವರ್ಷಗಳ ತನಕ ಸೈತಾನನು ಕಟ್ಟಿ ಹಾಕಿದವಳೂ ಅಬ್ರಹಾಮನ ವಂಶದವಳೂ ಆಗಿರುವ ಈಕೆಯನ್ನು ಈ ಕಟ್ಟಿನೊಳಗಿಂದ ಬಿಡಿಸಬಾರದೋ ಎಂದು ಉತ್ತರ ಕೊಟ್ಟನು (ಲೂಕ 13:10–14,16).

ಯೇಸುಕ್ರಿಸ್ತನು ಬಿಡುಗಡೆಯ ಸುವಾರ್ತೆಯನ್ನು ತಿಳಿಸುವದಕ್ಕಾಗಿ ಈ ಪ್ರಪಂಚಕ್ಕೆ ಬಂದನು. “ನನ್ನನ್ನು ಬಡವರಿಗೆ ಶುಭ ವರ್ತಮಾನವನ್ನು ಸಾರುವದಕ್ಕೆ ಅಭಿಷೇಕಿಸಿದನು” ಎಂದೂ ಯೆಶಾ 61:1 ಹಾಗೂ ಲೂಕ 4:18 ರಲ್ಲಿ ಓದುತ್ತೇವೆ ಮಾತ್ರವಲ್ಲ, ಮನ ಮುರಿದವರನ್ನು ಕಟ್ಟಿ ವಾಸಿಮಾಡುವದಕ್ಕೂ ಸೆರೆಯವರಿಗೆ ಬಿಡುಗಡೆಯಾಗುವದನ್ನು, ಬಂದಿಗಳಿಗೆ ಕದ ತೆರೆಯುವದನ್ನು ಪ್ರಸಿದ್ಧಿಪಡಿಸುವದಕ್ಕೂ ಆತನು ಬಂದನು (ಯೆಶಾ 61:1). ಯೇಸು ಅನುಗ್ರಹಿಸುವ ಬಿಡುಗಡೆಯ ಸುವಾರ್ತೆ, ಒಬ್ಬ ಮನುಷ್ಯನನ್ನು ಅವನ ಎಲ್ಲಾ ಕಟ್ಟುಗಳಿಂದ ಬಿಡುಗಡೆ ಮಾಡುವದು. ತಮ್ಮನ್ನು ತಾವೇ ಬಿಡಿಸಿಕೊಳ್ಳುವದು ಸಾಧ್ಯವಿಲ್ಲ. ಯೇಸುಕ್ರಿಸ್ತನ ಸುವಾರ್ತೆಯೇ ಕಟ್ಟುಗಳಿಂದ ಬಿಡುಗಡೆಗೊಳಿಸಲು ಶಕ್ತವಾದದ್ದು.

ಸುವಾರ್ತೆ ಎಂದರೆ ಶುಭ ಸಂದೇಶ ಎಂದು ಅರ್ಥ. ಕ್ರಿಸ್ತನೇ ಆ ಶುಭ ಸಂದೇಶದ ಮೂಲ ಕಾರಣನು ಆತನ ಹುಟ್ಟಿನಿಂದ ಹಿಡಿದು, ಆತನ ಎರಡನೇ ಬರೋಣದವರೆಗೂ ಸುವಾರ್ತೆಯು ಬೋಧಿಸಲ್ಪಡುತ್ತಲೇ ಇರುವದು.

ಯೇಸುಕ್ರಿಸ್ತನು ಜನಿಸಿದ್ದು ಒಂದು ಶುಭವರ್ತಮಾನವಾದರೂ, ಆತನ ಮುಖ್ಯ ಕಾರ್ಯ ಬಡವರಿಗೂ, ದರಿದ್ರರಿಗೂ, ಸುವಾರ್ತೆಯನ್ನು ತಿಳಿಸುವದಾಗಿತ್ತು. ಆ ಸುವಾರ್ತೆಯ ಅಂತ್ಯ ಪರಲೋಕ ರಾಜ್ಯದಾಗಿದೆ. ಆಂಗ್ಲ ಭಾಷೆಯಲ್ಲಿ ಸುವಾರ್ತೆ ಎಂಬ ಪದವನ್ನು Gospel ಎಂದು ಹೇಳುವರು. ಆ ಪದವನ್ನು ವಿಭಾಗಿಸಬಹುದು. Gospel ಅಂದರೆ "ಹೋಗಿ ಹೇಳು" ಎಂದು. ಯೇಸುಕ್ರಿಸ್ತನು ಪುನರುತ್ಥಾನ ಹೊಂದಿದ ಮೇಲೆ ತನ್ನ ಶಿಷ್ಯರಿಗೆ ಕಾಣಿಸಿಕೊಂಡು "ನೀವು ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ" (ಮಾರ್ಕ 16:15) ಎಂದು ಹೇಳಿದನು.

**ಬಿಡುಗಡೆಯ ಮೂರು ಸತ್ಯಗಳು!**

ಹೊಸ ಒಡಂಬಡಿಕೆಯನ್ನು ಧ್ಯಾನಿಸುವಾಗ ಅಲ್ಲಿ ಮೂರು ವಿಧವಾದ ಬಿಡುಗಡೆಯ ಸತ್ಯಗಳು ಕಾಣಲ್ಪಡುವವು.

1. ಮಗನು ನಿಮ್ಮನ್ನು ಬಿಡುಗಡೆ ಮಾಡಿದರೆ ನಿಜವಾಗಿ ನಿಮಗೆ ಬಿಡುಗಡೆಯಾಗುವದು (ಯೋಹಾನ 8:36). 2. ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವದು (ಯೋಹಾ 8:32). 3. ಕರ್ತನು ದೇವರಾತ್ಮನೇ. ಕರ್ತನ ಆತ್ಮನು ಯಾರಲ್ಲಿದ್ದಾನೋ ಅವರಿಗೆ ಬಿಡುಗಡೆ ಉಂಟು (2 ಕೊರಿಂ 3:17).

ಕರ್ತನು ನಿಮ್ಮನ್ನು ಎಲ್ಲಾ ಕಟ್ಟುಗಳಿಂದ ಬಿಡುಗಡೆ ಮಾಡುವನು. ನಂತರ ನಿಮ್ಮನ್ನು ಮಹಿಮೆಯೊಳಗೆ ಕರೆದುಕೊಂಡು ಹೋಗುವನು. ಹೌದು ಸುವಾರ್ತೆ ಎಲ್ಲಾ ಕಟ್ಟುಗಳನ್ನು ಮುರಿದು ಹಾಕುವದು. ಶಾಪದ ಸಂಕೋಲೆಯನ್ನು ಮುರಿಯುವದು. ಆದರೆ ಮಹಿಮೆಯ ಸುವಾರ್ತೆ ನಿಮ್ಮ ಆತ್ಮದಲ್ಲಿ ಆನಂದವನ್ನು, ಸಮಾಧಾನವನ್ನೂ ತರುವದು. ಒಟ್ಟಿನಲ್ಲಿ ಹೇಳುವದಾದರೆ ಪರಲೋಕವನ್ನೇ ನಿಮ್ಮೊಳಗೆ ತಂದು ಬಿಡುವದು. ಬಿಡುಗಡೆಯ ಸುವಾರ್ತೆ ಇಲ್ಲದೆ ಮಹಿಮೆಯ ಸುವಾರ್ತೆ ಇಲ್ಲ.

**ಬಿಡುಗಡೆಯಲ್ಲಿ ನೆಲೆಯಾಗಿ ನಿಲ್ಲಿರಿ!**

ಕರ್ತನು ನಿಮಗೆ ಬಿಡುಗಡೆ ಕೊಡುವಾಗ ಆ ಬಿಡುಗಡೆಯಲ್ಲಿ ನೀವು ನೆಲೆಯಾಗಿ ನಿಲ್ಲಬೇಕು. ಬಿಡುಗಡೆ ಹೊಂದಿದ ಕ್ರಿಸ್ತನ ಮಕ್ಕಳು ಸೈತಾನನಿಗೋ, ಅವನು ತರುವ ಆಶೆ, ಇಚ್ಛೆಗಳಿಗೂ, ಪಾಪ ಭೋಗಗಳಿಗೋ ಪುನಃ ಸ್ಥಳ ಕೊಡಬಾರದು. ದೇವರಿಗೆ ಒಳಗಾಗಿರಿ, ಸೈತಾನನನ್ನು ಎದುರಿಸಿರಿ. ಅವನು ನಿಮ್ಮನ್ನು ಬಿಟ್ಟು ಓಡಿಹೋಗುವನು (ಯಾಕೊ 4:7) ಎಂದು ಸತ್ಯವೇದ ಹೇಳುತ್ತದೆ. ನಿಮಗಾಗಿ ಶಿಲುಬೆಯಲ್ಲಿ ಜಜ್ಜಲ್ಪಟ್ಟ ಕ್ರಿಸ್ತನನ್ನು ನಿಮ್ಮ ಕೇವಲವಾದ ಪಾಪಗಳಿಂದ ಜಜ್ಜುತ್ತಲೇ ಇರಬಾರದು. ದೇವಕುಮಾರನನ್ನು ತುಳಿದು ಒಡಂಬಡಿಕೆಯನ್ನು ಸ್ಥಿರಪಡಿಸಿದಂಥ ತನ್ನನ್ನು ಪವಿತ್ರ ಮಾಡಿದಂತ ರಕ್ತವನ್ನು ಅಶುದ್ಧವೆಂದೆಣಿಸಿ ದೇವರ ಕೃಪಾವರವಾಗಿರುವ ಆತ್ಮನನ್ನು ತಿರಸ್ಕಾರ

ಮಾಡಿದ್ದಾನೋ ಅವನು ಇನ್ನೂ ಎಷ್ಟೋ ಕ್ರೂರವಾದ ದಂಡನೆಗೆ ಪಾತ್ರನಾಗಬೇಕೆಂಬದನ್ನು ಯೋಚಿಸಿ (ಇಬ್ರಿ 10:29) ಎಂದು ದೇವರ ವಾಕ್ಯ ಎಚ್ಚರಿಕೆ ನೀಡುತ್ತದೆ. ಒಬ್ಬ ಪಾಪಿಗೆ ಸುಲಭವಾಗಿ ಬಿಡುಗಡೆ ಉಂಟು. ಆದರೆ ಒಬ್ಬ ವಿಶ್ವಾಸಿ ಹಿಂಜಾರಿ ಹೋದರೆ ಅಷ್ಟು ಸುಲಭವಾಗಿ ಬಿಡುಗಡೆ ಹೊಂದಲಾಗದು. ಅವನು ಎಷ್ಟು ಮೇಲಕ್ಕೆ ಏರಿ ಕೆಳಕ್ಕೆ ಬಿದ್ದನೋ ಅಷ್ಟರಮಟ್ಟಿಗೆ ದೇವ ಸಮ್ಮುಖದಲ್ಲಿ ತನ್ನನ್ನು ತಗ್ಗಿಸಿಕೊಂಡು, ಉಪವಾಸವಿದ್ದು ಹರಕೆಗಳನ್ನು ಹೊತ್ತು, ತೀರ್ಮಾನಗಳನ್ನು ಮಾಡಿ ಬಿಡುಗಡೆ ಪಡೆಯಬೇಕು.

ಪಾಪಿಯಾದರೂ ಸರಿ, ಹಿಂಜಾರಿದವನಾದರೂ ಸರಿ ಬಿಡುಗಡೆ ಪಡೆದ ಮೇಲೆ, ಅವನ ಆಂತರ್ಯದಲ್ಲಿ ನಾನು ಕರ್ತನ ಬರುವಿಕೆಯಲ್ಲಿ ಕಾಣಲ್ಪಡಬೇಕು. ಪರಲೋಕ ರಾಜ್ಯವನ್ನು ಸ್ವಾಸ್ತ್ಯವಾಗಿ ಪಡೆಯಬೇಕು ಎಂಬ ಹಂಬಲ ಇರಬೇಕು.

**ಹಲವು ವಿಧವಾದ ಅಭಿಷೇಕಗಳು!**

ಒಬ್ಬ ವಿಶ್ವಾಸಿ ತನ್ನ ಪವಿತ್ರತೆಯನ್ನು ಕಾಪಾಡಿಕೊಳ್ಳಲು ಹಾಗೂ ಜಯಭರಿತವಾದ ಜೀವಿತವನ್ನು ಜೀವಿಸಲು, ಕರ್ತನು ಮೊದಲನೆಯದಾಗಿ, ಪವಿತ್ರಾತ್ಮನ ಅಭಿಷೇಕವನ್ನು ನೀಡುವನು. ಎರಡನೆಯದಾಗಿ, ಅವನಲ್ಲಿರುವ ಪಾಪ ಸ್ವಭಾವಗಳನ್ನು ದುರಭ್ಯಾಸಗಳನ್ನು ಸುಟ್ಟು ಹಾಕಲು ಸೈತಾನನನ್ನೂ, ಮಂತ್ರವಾದಿಗಳನ್ನೂ ಎದುರಿಸಿ ನಿಲ್ಲಲು, ಅಗ್ನಿಯ ಅಭಿಷೇಕವನ್ನು ನೀಡುವನು (ಲೂಕ 12:49, ಮತ್ತಾ 3:12). ಮೂರನೆಯದಾಗಿ, ಕರ್ತನನ್ನು ಆರಾಧಿಸಲು, ಸ್ತುತಿಸಲು, ಆತನಲ್ಲಿ ಸಂತೋಷಿಸಲು. ಆನಂದತೈಲ ಅಭಿಷೇಕವನ್ನು ನೀಡುವನು (ಕೀರ್ತ 45:7, ಇಬ್ರಿ 1:9). ನಾಲ್ಕನೆಯದು, ರೋಗಿಗಳನ್ನು ಗುಣಪಡಿಸಲು, ದೆವ್ವಗಳನ್ನು ಓಡಿಸಲು, ಸತ್ತವರನ್ನು ಎಬ್ಬಿಸುವ, ಶಕ್ತಿಯ ಅಭಿಷೇಕವನ್ನು ನೀಡುವನು (ಅ.ಕೃ. 10:38, ಯೆಶಾ 62:1).

ಇನ್ನೂ ಪ್ರೀತಿಯ ಅಭಿಷೇಕ (ರೋಮಾ 5:5) ಹಂಬಲಿಸಿ ಬೇಡುವ ಅಭಿಷೇಕ (ಜೆಕರ್ಯ 12:10) ಎಂದು ಹಲವು ರೀತಿಯ ಅಭಿಷೇಕವನ್ನು ಕರ್ತನು ಕೊಟ್ಟರೂ, ಕೊನೆಯದಾಗಿ ಆತನು ತನ್ನ ಮಕ್ಕಳಿಗೆ, ತನ್ನ ಮದುವಣಗಿತ್ತಿ ಸಭೆಗೆ ಮಹಿಮೆಯ ಅಭಿಷೇಕವನ್ನು ನೀಡುವನು. ಅದುವೇ ಕಡೆಯ ಅಭಿಷೇಕ ಆ ಅಭಿಷೇಕವು ಕರ್ತನ ಬರೋಣದಲ್ಲಿ ನಿಮ್ಮನ್ನು ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ಸೇರಿಸುವದು.

**ವಾಗ್ದಾನ ವಚನ**

"ಯೆಹೋವನು ನೀತಿವಂತರ ಕೂಗನ್ನು ಕೇಳಿ ಎಲ್ಲಾ ಕಷ್ಟಗಳಿಂದ ಅವರನ್ನು ಬಿಡಿಸುತ್ತಾನೆ. ಮುರಿದ ಮನಸ್ಸುಳ್ಳವರಿಗೆ ಯೆಹೋವನು ನೆರವಾಗುತ್ತಾನೆ. ಕುಗ್ಗಿ ಹೋದವರನ್ನು ಉದ್ಧಾರ ಮಾಡುತ್ತಾನೆ"

ಕೀರ್ತನೆ 34:17–18

# ಕರ್ತನಿಗೆ ಸ್ತೋತ್ರ

ದೇವಾಲಯದಲ್ಲಿ ನಡೆಯುತ್ತಿದ್ದ ಆರಾಧನೆಗಳಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿದ್ದಂಥ ಒಬ್ಬ ಯೌವನಸ್ಥನು ಆರಾಧನೆಯ ಸಮಯಗಳಲ್ಲಿ "ಕರ್ತನಿಗೆ ಸ್ತೋತ್ರ" ಎಂದು ದೊಡ್ಡ ಧ್ವನಿಯಿಂದ ಹೇಳುತ್ತಿದ್ದನಂತೆ, ಬೋಧಕರು ಅವನ ಉತ್ಸಾಹವನ್ನು ಕುಗ್ಗಿಸಲು ಇಷ್ಟವಿಲ್ಲದೆ ಸುಮ್ಮನಿದ್ದರು.

ಒಮ್ಮೆ ಬಿಷಪ್ ಅವರು ಆರಾಧನೆಯಲ್ಲಿ ಭಾಗವಹಿಸುವರೆಂದು ತಿಳಿದ ಬೋಧಕರು ಆ ಯುವಕನ ಬಳಿ ನಾಳೆಯ ದಿನ ಆರಾಧನೆಯಲ್ಲಿ "ಕರ್ತನಿಗೆ ಸ್ತೋತ್ರ" ಎಂದು ಎಡೆಬಿಡದೆ ಹೇಳುವದನ್ನು ನಿಲ್ಲಿಸಬೇಕು. ಏಕೆಂದರೆ ನಾಳೆ ನಮ್ಮ ಆಲಯಕ್ಕೆ ಬಿಷಪ್ಪರು ಬರುತ್ತಾರೆ; ಆದ್ದರಿಂದ ನೀನು ಮೌನವಾಗಿದ್ದರೆ ನಾನು ನಿನಗೆ ಒಂದು ಜೊತೆ "ಶೂ" ಗಳನ್ನು ಕೊಡಿಸುತ್ತೇನೆ ಎಂದರು. ಅದಕ್ಕೆ ಅವನು ಒಪ್ಪಿಕೊಂಡನು. ಬಿಷಪರು ಭಾಗವಹಿಸಿದ ಆರಾಧನೆಯಲ್ಲಿ ಆ ಯುವಕನು ತನ್ನನ್ನು ಅಡಗಿಸಿಕೊಂಡು ಮೌನವಾಗಿದ್ದನು. ಆದರೆ ಬಿಷೋಪ್ಪರು ಪ್ರಸಂಗದಲ್ಲಿ ಆತ್ಮೀಯವಾದ ವಿಷಯವನ್ನು ಹೇಳಿದಾಗ ಆ ಯುವಕನಿಗೆ ತನ್ನನ್ನು ಅಡಗಿಸಿಕೊಳ್ಳಲು ಆಗಲಿಲ್ಲ. ತನಗೆ "ಶೂ" ಸಿಕ್ಕಿದರೂ ಸರಿ ಸಿಗದಿದ್ದರೂ ಸರಿ "ಕರ್ತನಿಗೆ ಸ್ತೋತ್ರ" ಎಂದು ಉತ್ಸಾಹದಿಂದ ಸ್ತುತಿಸಲು ಪ್ರಾರಂಭಿಸಿದನು. ಆ ಯುವಕನೇ ಅನಂತರದ ದಿನಗಳಲ್ಲಿ ಪ್ರಪಂಚದಲ್ಲೇ ಸುಪ್ರಸಿದ್ದನಾದ ಸೌವಾರ್ತಿಕ ವೀರನಾಗಿ ಅಮೆರಿಕಾ ದೇಶದಲ್ಲಿ ಬೆಳಗಿದ "ಬಿಲ್ಲಿ ಸುಂಡೆ" (Billy Sunday)

## ನಿಮ್ಮ ಚಿಂತನೆಗಾಗಿ - 1

ಇಂದು ಬಹುಪಾಲು ವಿಶ್ವಾಸಿಗಳು ಕ್ರೈಸ್ತೀಯ ಜೀವಿತದಲ್ಲಿ ಅನೇಕ ಆತ್ಮೀಕ ಚಟುವಟಿಕೆಗಳಿಂದ ತುಂಬಿರುತ್ತಾರೆ. ಸತ್ಯವೇದದ ಪಾಂಡಿತ್ಯವನ್ನು ಹೊಂದಿರುತ್ತಾರೆ. ಬಿಡುವಿಲ್ಲದ ಸೇವೆಯಲ್ಲಿಯೂ ನಿರತರಾಗಿರುತ್ತಾರೆ. ಆದರೆ ಕರ್ತನು ಮತ್ತಾಯ 7:21–23 ರಲ್ಲಿ ತಿಳಿಸಿರುವಂತೆ, "ಪರಲೋಕದಲ್ಲಿರುವ ತಂದೆಯ ಚಿತ್ತದಂತೆ ನಡೆಯದೆ ಹೋದರೆ ಪರಲೋಕ ರಾಜ್ಯಕ್ಕೆ ಸೇರಲು ಸಾಧ್ಯವಾಗುವದಿಲ್ಲ". ಇಂತಹ ಜೀವಿತ ಎಷ್ಟರ ಮಟ್ಟಿಗೆ ಅಪಾಯಕಾರಿಯೆಂದರೆ ದೀಪವನ್ನು ಹೊತ್ತಿಸಿಕೊಂಡು (Torch Light) ನರಕಕ್ಕೆ ಹೋಗುವಷ್ಟರ ಮಟ್ಟಿಗೆ ಅಪಾಯಕಾರಿ.

# ದೀರ್ಘಾಯುಷ್ಯಕ್ಕಾಗಿ ದೇವ ಆಲೋಚನೆ

1. ತಂದೆ ತಾಯಿಗಳನ್ನು ಸನ್ಮಾನಿಸಿದರೆ ನಿನ್ನ ದೇವರಾದ ಯೆಹೋವನು ನಿನಗೆ ಅನುಗ್ರಹಿಸುವ ದೇಶದಲ್ಲಿ ನೀನು ಬಹುಕಾಲ ಇರುವಿ (ವಿಮೋ 20:12).
2. ನಿಮಗೆ ಕೊಡುವ ದೇಶದಲ್ಲಿ ನೀವು ಸದಾಕಾಲ ಬಾಳುವಂತೆ ಆತನ ಆಜ್ಞಾವಿಧಿಗಳನ್ನು ನೀವು ಅನುಸರಿಸಿ ನಡೆಯಬೇಕು (ಧರ್ಮೋ 4:40).
3. ನಿಮ್ಮ ದೇವರಾದ ಯೆಹೋವನಲ್ಲಿ ಭಯಭಕ್ತಿಯುಳ್ಳವರಾಗಿದ್ದುಕೊಂಡು, ಆತನ ಆಜ್ಞಾವಿಧಿಗಳನ್ನೆಲ್ಲಾ ಅನುಸರಿಸಬೇಕೆಂದೂ ನೀವು ಬಹುಕಾಲ ಬಾಳಬೇಕೆಂದೂ ಇವುಗಳನ್ನು ಆಜ್ಞಾಪಿಸಿದ್ದಾನೆ (ಧರ್ಮೋ 6:2).
4. ನಿಮ್ಮ ದೇವರಾದ ಯೆಹೋವನನ್ನು ಪ್ರೀತಿಸಿ, ಆತನು ಹೇಳಿದ ಮಾರ್ಗದಲ್ಲಿ ನಡೆದು ಆತನ ಆಜ್ಞಾವಿಧಿಗಳನ್ನು ಅನುಸರಿಸಿದರೆ ನೀವು ಬದುಕಿಕೊಂಡು ಹೆಚ್ಚುವಿರಿ (ಧರ್ಮೋ 30:16–18).
5. ಧರ್ಮಶಾಸ್ತ್ರದ ಎಲ್ಲಾ ವಾಕ್ಯಗಳನ್ನು ವಿಧಿಗಳನ್ನು ಅನುಸರಿಸುವದಕ್ಕೆ ಅಭ್ಯಾಸ ಮಾಡಿಕೊಳ್ಳಬೇಕು. ಅವನು ತನ್ನ ಜೀವಮಾನ ಕಾಲದ ದಿನಗಳೆಲ್ಲಾ ಅದನ್ನು ಓದಿಕೊಳ್ಳುತ್ತಾ ಇದ್ದರೆ, ಅವನೂ ಅವನ ಸಂತತಿಯವರೂ ಬಹು ಕಾಲ ಬದುಕುವರು (ಧರ್ಮೋ 17:19,20).

## ಏಳು ಇಚ್ಛೆಗಳು

1. ಕಣ್ಣುಗಳ ಇಚ್ಛೆ (ಆದಿ 3:6, ಮತ್ತಾ 5:8)
2. ಶರೀರಭಾವ, ವಿಷಯಾಭಿಲಾಶೆ, ಸ್ವೇಚ್ಛಾಭಿಲಾಶೆ (ಗಲಾ 5:24)
3. ದೇಹದ ಆಶೆ (ಇಚ್ಛೆ) (ರೋಮಾ 6:12, 1 ಕೊರಿಂ 9:27)
4. ವ್ಯಾಮೋಹ (ಕಾಮ ಸಂಬಂಧವಾದ) (2 ಸಮು 13:2, ರೋಮಾ 13:14)
5. ಲೋಕದ ಆಶೆ (ತೀತ 2:12)
6. ದುರಾಶೆ (2 ಪೇತ್ರ 3:3, ಕೀರ್ತ 78:29)
7. ಪಾಪ (ಮತ್ತಾ 5:28, ಆದಿ 4:7)

# ಹೋಗು ಇಲ್ಲದಿದ್ದರೆ ಕಳುಹಿಸು
## (ಸತ್ಯವೇದದಲ್ಲಿನ ಮಿಶಿನರಿ ಕರೆಯನ್ನು ಕೇಳಿರಿ)

- ಇದು ಶುಭವಾರ್ತೆಯ ದಿವಸವಾಗಿದೆ; ನಾವು ಇದನ್ನು ಪ್ರಕಟಿಸದಿರುವದು ಒಳ್ಳೆಯದಲ್ಲ. ತಡಮಾಡಿದರೆ ಶಿಕ್ಷೆಗೆ ಒಳಗಾಗುವೆವು (2 ಅರ 7:9).
- ಗಾಳಿಯನ್ನು ನೋಡುತ್ತಲೇ ಇರುವವನು ಬೀಜ ಬಿತ್ತನು; ಮೋಡಗಳನ್ನು ಗಮನಿಸುತ್ತಲೇ ಇರುವವನು ಪೈರು ಕೊಯ್ಯನು (ಪ್ರಸಂಗಿ 11:4).
- ಬೆಳೆಯು ಬಹಳ, ಕೆಲಸದವರು ಸ್ವಲ್ಪ; ಆದುದರಿಂದ ಬೆಳೆಯ ಯಜಮಾನನನ್ನು – ನಿನ್ನ ಬೆಳೆಗೆ ಕೆಲಸದವರನ್ನು ಕಳುಹಿಸಬೇಕೆಂದು ಬೇಡಿಕೊಳ್ಳಿರಿ (ಮತ್ತಾ 9:38).
- ಆಹಾ, ಶುಭಸಮಾಚಾರವನ್ನು ತಂದು ಸಮಾಧಾನವನ್ನು ಸಾರುವ ದೂತನ ಪಾದಗಳು ಪರ್ವತಗಳ ಮೇಲೆ ತ್ವರೆಪಡುತ್ತವೆ (ನಹೂಮ 1:15).
- ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ. ಆದ್ದರಿಂದ ನೀವು ಹೊರಟು ಹೋಗಿ ಎಲ್ಲಾ ದೇಶದ ಜನರನ್ನು ಶಿಷ್ಯರನ್ನಾಗಿ ಮಾಡಿರಿ (ಮತ್ತಾ 28:18,19).
- ಸುವಾರ್ತೆಯನ್ನು ಸಾರಲೇಬೇಕೆಂಬ ನಿರ್ಬಂಧ ನನಗುಂಟು. ಸಾರದಿದ್ದರೆ ನನ್ನ ಗತಿಯನ್ನು ಏನು ಹೇಳಲಿ (1 ಕೊರಿಂ 9:16).
- ಎಲ್ಲಾ ಮನುಷ್ಯರು ರಕ್ಷಣೆ ಹೊಂದಿ ಸತ್ಯದ ಜ್ಞಾನಕ್ಕೆ ಸೇರಬೇಕೆಂಬದು ಆತನ ಚಿತ್ತ. ದೇವರು ಒಬ್ಬನೇ, ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ; ಆತನು ಮನುಷ್ಯನಾಗಿರುವ ಕ್ರಿಸ್ತಯೇಸುವೇ (1 ತಿಮೊ 2:4–6).
- ದೇವರ ವಾಕ್ಯವನ್ನು ಸಾರು, ಅನುಕೂಲವಾದ ಕಾಲದಲ್ಲಿಯೂ ಅನುಕೂಲವಿಲ್ಲದ ಕಾಲದಲ್ಲಿಯೂ ಅದರಲ್ಲಿ ಆಸಕ್ತನಾಗಿರು; (2 ತಿಮೊ 4:2).
- ಒಬ್ಬ ಪಾಪಿಯನ್ನು ತಪ್ಪಾದ ಮಾರ್ಗದಿಂದ ತಿರುಗಿಸಿದವನು ಅವನ ಪ್ರಾಣವನ್ನು ಮರಣಕ್ಕೆ ತಪ್ಪಿಸಿ ಬಹುಪಾಪಗಳನ್ನು ಮುಚ್ಚಿದವನಾದವನೆಂದು ತಿಳುಕೊಳ್ಳಿರಿ (ಯಾಕೋ 5:20).
- ಸಾರುವವರ ಧ್ವನಿಯು ಭೂಮಿಯಲ್ಲೆಲ್ಲಾ ಪ್ರಸರಿಸಿತು. ಅವರ ನುಡಿಗಳು ಲೋಕದ ಕಟ್ಟಕಡೆಯವರೆಗೂ ವ್ಯಾಪಿಸಿದವು (ರೋಮಾ 10:18).

# ನೀನು ವ್ಯತ್ಯಾಸವಾದವನಾಗಿರು

a ಒಳ್ಳೆಯವರಿಂದ ನಿನಗೆ ಒಳ್ಳೆಯದೊಂದೂ ಸಿಕ್ಕದಿದ್ದರೂ ನೀನು ಅಂಥವರ ಸ್ನೇಹವನ್ನು ತಳ್ಳಬೇಡ

ಕೆಟ್ಟವರಿಂದ ಒಳ್ಳೆಯವು ಅನೇಕ ಸಿಕ್ಕಿದರೂ ಸಹ ಅಂಥವರ ಸಹವಾಸವನ್ನು ಬೆಳೆಸಬೇಡ

a ಸರಿಯಾದ ಮಾರ್ಗದಲ್ಲಿ ಶೋಧನೆಗಳು ಅನೇಕ ಬಂದರೂ ನೀನು ಹಿಂಜರಿದು ಹೋಗಬೇಡ; ತಪ್ಪಾದ ಮಾರ್ಗದಲ್ಲಿ ಅನೇಕ ಸಾಧನೆಗಳಿದ್ದರೂ ಸಹ ಅದರಲ್ಲಿ ತೊಡಗದಿರು

a ಸತ್ಯವನ್ನು ಬಯಸಿ ಕೇಳುವವರು ಯಾರೊಬ್ಬರೂ ಇಲ್ಲದಿದ್ದರೂ ನೀನು ಅದನ್ನು ಪದೇಪದೇ ಮಾತಾಡು

ಸುಳ್ಳನ್ನು ಕೇಳಲು ಅನೇಕರು ಕೂಡಿ ಬಂದರೂ ಅದನ್ನು ಪುನಃ ಒಮ್ಮೆಯಾದರೂ ಹೇಳದಿರು

a ದೀನತೆಯನ್ನು ಯಾರೂ ಗೌರವಿಸಲಿಲ್ಲವಾದರೂ ನೀನು ಅದನ್ನು ದೃಢವಾಗಿ ಹಿಡಿದುಕೋ

ಹೆಮ್ಮೆಯನ್ನು ವಿರೋಧಿಸುವವರು ಯಾರೂ ಇಲ್ಲದಿದ್ದರೂ ಅದು ಬೇಡವೆಂದು ಬಿಟ್ಟು ಅಗಲು

a ಒಳ್ಳೆ ಗುಣಗಳನ್ನು ಯಾರೂ ಹೊಗಳದಿದ್ದರೂ ಅದನ್ನೇ ದೃಢವಾಗಿ ಹಿಡಿದುಕೋ. ಕೆಟ್ಟ ಗುಣಗಳನ್ನು ಯಾರೊಬ್ಬರೂ ತೆಗಳದಿದ್ದರೂ ನೀನು ಅದನ್ನು ಹಿಂಬಾಲಿಸದಿರು.

a ಕರ್ತನು ಮಾಡುವಂತೆ ಹೇಳಿದ್ದನ್ನು ಪ್ರಪಂಚವೇ ಕೂಡಿ ಎದುರಿಸಿದರೂ, ನೀನು ಅದನ್ನು ಮಾಡು. ಕರ್ತನು ಹೇಳದೆ ಇರುವದನ್ನು ಪ್ರಪಂಚವೇ ಆಧರಿಸಿದರೂ ನೀನು ಅದನ್ನು ಮಾಡದಿರು.

## ನಿಮ್ಮ ಚಿಂತನೆಗಾಗಿ – 2

**ನಾವು ಕರ್ತನಿಗಾಗಿಯೂ ಆತನ ಚಿತ್ತದಂತೆಯೂ ಬಾಳುತ್ತಿರುವೆವು ಎಂಬ ಒಂದು ಉನ್ನತವಾದ ಚಿಂತನೆ ನಮ್ಮೊಳಗಿರುವದಾದರೆ – ಕೆಲವು ಭಾರಗಳನ್ನು ಹಗುರವಾಗಿಯೂ, ಕೆಲವು ಕೊರತೆಗಳನ್ನು ಮನರಮ್ಯವಾಗಿ ಸ್ವೀಕರಿಸಲು, ಕೆಲವು ನೋವುಗಳನ್ನೂ, ಬಾಧೆಗಳನ್ನೂ ಸಹಿಸಿಕೊಳ್ಳಲು ನಮ್ಮ ಮನಸ್ಸುಗಳನ್ನು ಪಕ್ವಗೊಳಿಸುವದು.**

# ನಮ್ಮ ದೇಶದ ಸುದ್ದಿಗಳು
## (INDIAN NEWS)

### 1. ಟೆಲಿಕಾಂ : ರೂ. 31 ಸಾವಿರ ಕೋಟಿ ನಷ್ಟ :

ದೂರ ಸಂಪರ್ಕ ನೀತಿಯಲ್ಲಿಯ ಲೋಪದೋಷ, ದೂರ ಸಂಪರ್ಕ ಇಲಾಖೆಯ ತಪ್ಪು ನಿರ್ಧಾರ ಮತ್ತು ಅವ್ಯವಹಾರಗಳಿಂದಾಗಿ ಸರ್ಕಾರದ ಬೊಕ್ಕಸಕ್ಕೆ ರೂ. 31 ಸಾವಿರ ಕೋಟಿ ನಷ್ಟವಾಗಿದೆ ಎಂದು ಮಹಾಲೇಖಪಾಲರ (ಸಿಎಜಿ) ವರದಿ ಬಹಿರಂಗ ಪಡಿಸಿದೆ.

### 2. 68 ಲಕ್ಷ ರೂ. ದಂಡ ವಸೂಲಿ :

ರಾಜ್ಯದಲ್ಲಿ ಅತಿ ಹೆಚ್ಚು ವಾಯುಮಾಲಿನ್ಯ ಹಾಗೂ ಶಬ್ದಮಾಲಿನ್ಯ ಉಂಟುಮಾಡುತ್ತಿದ್ದ 17,149 ವಾಹನಗಳ ವಿರುದ್ಧ ಪ್ರಕರಣ ದಾಖಲಿಸಿ, 68.32 ಲಕ್ಷ ರೂ. ದಂಡ ವಸೂಲಿ ಮಾಡಲಾಗಿದೆ ಎಂದು ಸಾರಿಗೆ ಆಯುಕ್ತರು ತಿಳಿಸಿದ್ದಾರೆ.

### 3. ಆಂಧ್ರದ 2400 ಗ್ರಾಮಗಳನ್ನು ದತ್ತು ಪಡೆದ ಎನ್‌ಆರ್‌ಐಗಳು :

ಅಮೆರಿಕದ ಹಲವು ಅನಿವಾಸಿ ಭಾರತೀಯರು ಸೇರಿ ಆಂಧ್ರಪ್ರದೇಶದ 2400ಕ್ಕೂ ಹೆಚ್ಚು ಗ್ರಾಮಗಳನ್ನು ದತ್ತು ಪಡೆದು ಅಭಿವೃದ್ಧಿಪಡಿಸಲು ನಿರ್ಧರಿಸಿದ್ದಾರೆ.

ಈ ಹಳ್ಳಿಗಳನ್ನು 'ಸುಂದರ ಗ್ರಾಮ ಸುಂದರ ವಾರ್ಡ್' ಕಾರ್ಯಕ್ರಮದಡಿ ಸಮಗ್ರವಾಗಿ ಅಭಿವೃದ್ಧಿಪಡಿಸಲಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

### 4. ಮೌಂಟ್ ಎವರೆಸ್ಟ್ ತಳದಲ್ಲಿ ಚೀನಾದಿಂದ ರೈಲು ಮಾರ್ಗ :

ಚೀನಾದಿಂದ ಭಾರತಕ್ಕೆ ಮತ್ತೊಂದು ಕಂಟಕ ಎದುರಾಗಿದೆ. ಪರ್ವತಗಳ ರಾಜ ಮೌಂಟ್ ಎವರೆಸ್ಟ್ ಅಡಿಯಲ್ಲಿ ಸುರಂಗ ಕೊರೆದು ನೇಪಾಳ ಮತ್ತು ಟಿಬೆಟ್ ನಡುವೆ ಸೈಸ್ಪೀಡ್ ರೈಲು ಸಂಪರ್ಕ ಕಲ್ಪಿಸಲು ಚೀನಾ ಮುಂದಾಗಿದೆ.

### 5. ಅಮೆರಿಕದ ಕಲಾ–ವಿಜ್ಞಾನಗಳ ಅಕಾಡೆಮಿ 4 ಭಾರತೀಯರ ಆಯ್ಕೆ :

ಅಮೆರಿಕದ ಪ್ರತಿಷ್ಠಿತ ಕಲಾ ಮತ್ತು ವಿಜ್ಞಾನ ಅಕಾಡೆಮಿಗೆ ಆಯ್ಕೆಯಾದ 197 ಹೊಸ ಸದಸ್ಯರಲ್ಲಿ ಬೆಂಗಳೂರು ವ್ಯಕ್ತಿ ಸೇರಿದಂತೆ ನಾಲ್ವರು ಭಾರತೀಯರು ಸೇರಿದ್ದಾರೆ.

### 6. ವಿದ್ಯುತ್ ಕ್ಷೇತ್ರದಲ್ಲಿ ಖಾಸಗಿ ಪಾಲುದಾರಿಕೆ ಭಾರತ–ಬಾಂಗ್ಲಾ ಒಪ್ಪಂದ :

ವಿದ್ಯುತ್ ಉತ್ಪಾದನೆಯಲ್ಲಿ ಖಾಸಗಿ ವಲಯದ ಪಾಲುದಾರಿಕೆಗೆ ಮುಕ್ತ ಅವಕಾಶ ನೀಡಲು ಭಾರತ ಮತ್ತು ಬಾಂಗ್ಲಾದೇಶ ಒಪ್ಪಿಗೆ ನೀಡಿವೆ.



# ಹೊರ ದೇಶದ ಸುದ್ದಿಗಳು
## (FOREIGN NEWS)

### 1. ನಡಾಲ್‌ಗೆ ಡಾಕ್ಟರೇಟ್ ಪದವಿ :

ಸ್ಪೇನ್‌ನ ಟೆನಿಸ್ ಆಟಗಾರ ರಫೆಲ್ ನಡಾಲ್‌ಗೆ ಮ್ಯಾಡ್ರಿಡ್‌ನ ಯೂರೋಪ್ ವಿಶ್ವವಿದ್ಯಾಲಯ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ. ವಿಶ್ವ ಕ್ರಮಾಂಕಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿರುವ ನಡಾಲ್‌ಗೆ ಈ ಗೌರವ ಪ್ರಧಾನ ಮಾಡಲಾಯಿತು.

### 2. ಬ್ಯಾಟರಿ ಚಾಲಿತ ವಿಮಾನ ಯಶಸ್ವಿ ಹಾರಾಟ :

ನಾಸಾ ಅಭಿವೃದ್ಧಿಗೊಳಿಸಿದ 10 ಎಂಜಿನನ್ನು ಒಳಗೊಂಡ ಬ್ಯಾಟರಿ ಚಾಲಿತ ವಿಮಾನದ ಪ್ರಯೋಗಾತ್ಮಕ ಹಾರಾಟ ಯಶಸ್ವಿಯಾಗಿದೆ.

ಜಿಎಲ್–10 ಮಾದರಿ ವಿಮಾನ (ಗ್ರೀಸ್ಡ್ ಲೈಟಿಂಗ್) ರನ್‌ವೇ ಅಗತ್ಯವಿಲ್ಲದೆ ಹೆಲಿಕಾಪ್ಟರ್‌ನಂತೆಯೇ ಮೇಲೇರುತ್ತದೆ ಮತ್ತು ಇಳಿಯುತ್ತದೆ ಹಾಗೂ ವಿಮಾನದಂತೆ ಸಮರ್ಥವಾಗಿ ಹಾರಾಡುತ್ತದೆ ಎಂದು ನಾಸಾ ತಿಳಿಸಿದೆ.

### 3. 2014 ರಲ್ಲಿ ಉಗ್ರರಿಂದ ಮಿತಿಮೀರಿದ ಅತ್ಯಾಚಾರ ಪ್ರಕರಣ:

2014ನೇ ವರ್ಷದಲ್ಲಿ ಉಗ್ರರಿಂದ ಬೆಚ್ಚಿಬೀಳಿಸುವಷ್ಟು ಅತ್ಯಾಚಾರ, ಲೈಂಗಿಕ ದೌರ್ಜನ್ಯ ಮತ್ತು ಬಲವಂತದ ಮದುವೆಗಳು ನಡೆದಿವೆ ಎಂದು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಬಾನ್ ಕಿ ಮೂನ್ ತಿಳಿಸಿದ್ದಾರೆ.

### 4. ಜಪಾನ್ : ಪಿಂಚಣಿ ವ್ಯವಸ್ಥೆಗೆ ಮತ್ತೆ ಕನ್ನ?

ಸಾರ್ವಜನಿಕ ಪಿಂಚಣಿ ಸೇವಾ ವ್ಯವಸ್ಥೆಯಲ್ಲಿ 2007 ರಲ್ಲಿ ನಡೆದ ಭಾರಿ ಅಕ್ರಮದಿಂದಾಗಿ ಭಾರಿ ತೊಂದರೆ ಅನುಭವಿಸಿದ್ದ ಜಪಾನ್ ಅದರಿಂದ ಚೇತರಿಸಿಕೊಳ್ಳುತ್ತಿರುವಾಗಲೇ ಪಿಂಚಣಿ ವ್ಯವಸ್ಥೆಗೆ ಮತ್ತೆ ಕನ್ನ ಬಿದ್ದಿರುವ ಶಂಕೆ ವ್ಯಕ್ತವಾಗಿದೆ.

### 5. ರಕ್ಷಣಾ ಸಾಮಗ್ರಿ ಭಾರತದ ವಿರುದ್ಧ ಬಳಕೆ :

ಜೆಹಾದಿಗಳನ್ನು ಹತ್ತಿಕ್ಕಲು ಅಮೆರಿಕ ನೀಡಿರುವ ಸುಮಾರು ರೂ.628 ಕೋಟಿ ಮೌಲ್ಯದ ಹೆಲಿಕಾಪ್ಟರ್‌ಗಳು, ಕ್ಷಿಪಣಿ ಮತ್ತು ಇತರೆ ರಕ್ಷಣಾ ಸಾಮಗ್ರಿಗಳನ್ನು ಪಾಕಿಸ್ತಾನವು ಭಾರತದ ವಿರುದ್ಧದ ಹೋರಾಟಕ್ಕೆ ಬಳಸಿಕೊಳ್ಳಲು ಮುಂದಾಗಿದೆ ಎಂದು ಪಾಕ್‌ನ ಮಾಜಿ ರಾಜತಾಂತ್ರಿಕರೊಬ್ಬರು ಹೇಳಿದ್ದಾರೆ.

### 6. 2 ವರ್ಷಗಳಲ್ಲಿ ಪುನರ್‌ನಿರ್ಮಾಣ :

ಭೂಕಂಪದಲ್ಲಿ ನೆಲಸಮವಾಗಿರುವ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಕಟ್ಟಡಗಳನ್ನು ಇನ್ನು 2 ವರ್ಷಗಳಲ್ಲಿ ಮರು ನಿರ್ಮಾಣ ಮಾಡಲಾಗುವುದು ಎಂದು ನೇಪಾಳದ ಪ್ರಧಾನಿ ಸುಶಿಲ್ ಕೊಯಿರಾಲಾ ಹೇಳಿದ್ದಾರೆ.

| ಜುಲೈ 1 | ದೇವ ಮಹಿಮೆ! | ಬೆಳಿಗ್ಗೆ : ಯೋಬ 20:21<br>ಸಂಜೆ : ಅ.ಕೃ. 10:24-48 |
|---|---|---|

"ಅವನನ್ನು ದೇವದೂತರಿಗಿಂತ ಸ್ವಲ್ಪವೇ ಕಡಿಮೆಯಾಗಿ ಮಾಡಿದ್ದಿಯಲ್ಲಾ ಪ್ರಭಾವವನ್ನೂ ಮಾನವನ್ನೂ ಅವನಿಗೆ ಕಿರೀಟವಾಗಿ ಇಟ್ಟಿ" (ಕೀರ್ತ 8:5).

ಏದೆನ್ ತೋಟದಲ್ಲಿ ಕರ್ತನು ಮನುಷ್ಯನನ್ನು ಇಟ್ಟಾಗ ಅವನಿಗೆ ಮಹಿಮಾವಸ್ತ್ರವನ್ನು ನೀಡಿದ್ದನು. ಆದುದರಿಂದ ಮಹಿಮೆಯ ರಾಜನು ಏದೆನ್ ತೋಟದಲ್ಲಿ ಸಂಚರಿಸಲು ಬಂದಾಗ ಅವರು ಸಂತೋಷವಾಗಿ ಆತನೊಂದಿಗೆ ಸಂಚರಿಸಿದರು. ಆತನ ಮಡಿಲಲ್ಲಿ ಮುದ್ದು ಮಕ್ಕಳಂತೆ ಇದ್ದರು. ಆದರೆ ಅವರು ಕರ್ತನ ಮಾತಿಗೆ ವಿಧೇಯರಾಗದೆ, ಪಾಪ ಮಾಡಿದಾಗ ದೇವ ಮಹಿಮೆಯು ಅವರನ್ನು ಬಿಟ್ಟು ಅಗಲಿತು. ಅವರು ತಾವು ಬೆತ್ತಲೆಯಾಗಿರುವದನ್ನು ಅರಿತರು. ತಮ್ಮ ಬೆತ್ತಲೆತನವನ್ನು ಮುಚ್ಚಿಕೊಳ್ಳಲು ಅಂಜೂರ ಮರದ ಎಲೆಗಳನ್ನು ಹುಡುಕಿದರು.

ಪಾಪವು ಕಠೋರವಾದದ್ದು. ಇಂದು ಮಾನವ ಕುಲದ ಸ್ಥಿತಿ ಏನು? ಎಲ್ಲರೂ ಪಾಪ ಮಾಡಿ ದೇವ ಮಹಿಮೆಯನ್ನು ಕಳೆದುಕೊಂಡಿರುವರು (ರೋಮಾ 3:23). ದೇವ ಮಹಿಮೆಯು ಪಾಪದೊಂದಿಗೆ ಎಂದಿಗೂ ಸೇರಿ ನಡೆಯಲು ಸಾಧ್ಯವೇ ಇಲ್ಲ. ಆದರೆ ದೇವರ ಕೃಪೆಯನ್ನು ನೋಡಿರಿ, ಏದೆನಿನಲ್ಲಿ ಮನುಷ್ಯನು ಕಳೆದುಕೊಂಡ ಮಹಿಮೆಯನ್ನು ಅವನಿಗೆ ಹಿಂದಕ್ಕೆ ಕೊಡಬೇಕೆಂದು ತೀರ್ಮಾನಿಸಿ, ಅದಕ್ಕಾಗಿ ತನ್ನ ಒಬ್ಬನೇ ಮಗನನ್ನು ಕಲ್ವಾರಿಯಲ್ಲಿ ಯಜ್ಞವಾಗಿ ಅರ್ಪಿಸಿದನು. ಆತನ ಪ್ರೀತಿಭರಿತವಾದ ತ್ಯಾಗದಿಂದ ಇಂದು ನಾವು ದೇವಮಹಿಮೆಯನ್ನು ಪಡೆದಿರುವೆವು. ನಿಮ್ಮ ಜೀವಿತದಲ್ಲಿ ಪಾಪವನ್ನು ಬಿಟ್ಟು, ಪರಿಶುದ್ಧ ಮಾರ್ಗದಲ್ಲಿ ಕಾಲಿಡುವಾಗ ದೇವ ಮಹಿಮೆ ನಿಮ್ಮಲ್ಲಿ ಉದಯಿಸಲು ಪ್ರಾರಂಭವಾಗುವದು. ನೀವು ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ಎತ್ತಲ್ಪಡುತ್ತಾ, ಕರ್ತನ ಮಹಿಮೆಯ ದೇಶದಲ್ಲಿ ಕಾಣಲ್ಪಡಬೇಕೆಂಬುದೇ ನಿಮ್ಮನ್ನು ಕುರಿತಾದ ಕರ್ತನ ಅನಾದಿ ಸಂಕಲ್ಪವಾಗಿದೆ.

ದೇವಜನರೇ, ಸತ್ಯವೇದದಲ್ಲಿನ ಕಾಲವು ವಾರ್ತೆಗಳು, ಸುವಾರ್ತೆಗಳಾಗಿ ಇರುವದು. ಕೆಲವು ವಾರ್ತೆಗಳು ನಿಮ್ಮನ್ನು ಸ್ವಪರೀಕ್ಷೆ ಮಾಡಿಕೊಳ್ಳಲು ಸಹಾಯಕವಾಗಿರುವದು. ಕೆಲವು ವಾರ್ತೆಗಳು ನಿಮ್ಮಲ್ಲಿ ಉಜ್ಜೀವನ ಉಂಟುಮಾಡಿ ದೇವರೊಂದಿಗಿನ ಸಾಮೀಪ್ಯವನ್ನು ಹೊಂದುವಂತೆ ಮಾಡುವದು. ಇನ್ನು ಕೆಲವು ವಾರ್ತೆಗಳು ನಿಮ್ಮನ್ನು ಆಳವಾದ ಆತ್ಮೀಕ ಅನುಭವದೊಳಗೆ ನಡೆಸುವದು. ಆದರೆ ಕೆಲವು ವಾರ್ತೆಗಳು ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ನಡೆಸುವದು. ಪ್ರಿಯರೇ, ಕ್ರಿಸ್ತನೊಂದಿಗೆ ರೂಪಾಂತರ ಬೆಟ್ಟದಲ್ಲಿನ ಅನುಭವವನ್ನು ಬಯಸಿರಿ. ಆಸಕ್ತಿಯಿಂದ ಪ್ರಾರ್ಥಿಸಿ, ದೈವೀಕ ಬಲವನ್ನೂ, ದೈವೀಕ ಪ್ರೀತಿಯನ್ನೂ ಪಡೆದುಕೊಳ್ಳಿರಿ.

***ನೆನಪಿಗೆ : ಅನ್ಯಜನಗಳ ವಿಷಯವಾದ ಈ ಮರ್ಮದ ಮಹಿಮಾತಿಶಯವು ಎಷ್ಟೆಂಬುದನ್ನು ದೇವರು ತನ್ನ ಜನರಿಗೆ ತಿಳಿಸಲಿಕ್ಕೆ ಮನಸ್ಸು ಮಾಡಿಕೊಂಡನು. ಈ ಮರ್ಮವು ಏನೆಂದರೆ, ಕ್ರಿಸ್ತನು ನಿಮ್ಮಲ್ಲಿದ್ದು ಪ್ರಭಾವದ ನಿರೀಕ್ಷೆಗೆ ಆಧಾರಭೂತನಾಗಿರುವದೇ (ಕೊಲೊ 1:27).***

| ಜುಲೈ 2 | **ನೀಗಿಸುವನು!** | ಬೆಳಿಗ್ಗೆ : ಯೋಬ 22:23,24<br>ಸಂಜೆ : ಅ.ಕೃ. 11 |
|---|---|---|

"ನನ್ನ ದೇವರು ಕ್ರಿಸ್ತಯೇಸುವಿನ ಮೂಲಕ ತನ್ನ ಪ್ರಭಾವದ ಐಶ್ವರ್ಯಕ್ಕೆ ತಕ್ಕ ಹಾಗೆ ನಿಮ್ಮ ಪ್ರತಿಯೊಂದು ಕೊರತೆಯನ್ನು ನೀಗಿಸುವನು" (ಫಿಲಿಪ್ಪಿ 4:19).

ಸೈತಾನನು ಯಾವಾಗಲೂ ಕೊರತೆಗಳನ್ನೂ, ತಡೆಗಳನ್ನೂ ತಂದು ಹಾಕಿ ಮನಸ್ಸಮಾಧಾನವನ್ನು ಕೆಡಿಸಲು ಬಯಸುವನು. ಆದರೆ ದೇವರಾದರೋ, ಕೃಪೆಯಲ್ಲಿ ಐಶ್ವರ್ಯವಂತನಾಗಿದ್ದು, ನಿಮ್ಮ ಕೊರತೆಯನ್ನೆಲ್ಲಾ ನೀಗಿಸಿ, ಸಂತೋಷದಿಂದಲೂ, ಸಮಾಧಾನದಿಂದಲೂ ತುಂಬಿಸುವವನಾಗಿರುವನು. ರಕ್ಷಣೆಯ ಸಂತೋಷವನ್ನೂ, ಪವಿತ್ರಾತ್ಮನ ಬಲವನ್ನೂ ನಿಮಗೆ ಅನುಗ್ರಹಿಸುವನು.

ಈ ಪ್ರಪಂಚದಲ್ಲಿ ಕೊರತೆ ಇಲ್ಲದ ಮನುಷ್ಯನು ಒಬ್ಬನೂ ಇಲ್ಲ. ಪ್ರತಿಯೊಬ್ಬರಿಗೂ ಯಾವುದಾದರೂ ಒಂದು ಕೊರತೆ. ಬಡವನಿಗೆ ಆಹಾರದ ಕೊರತೆ, ಐಶ್ವರ್ಯವಂತನಿಗೆ ಆರೋಗ್ಯದ ಕೊರತೆ. ನಿಮ್ಮ ಎಲ್ಲಾ ಕೊರತೆಗಳ ಮಧ್ಯದಲ್ಲಿ ಕರ್ತನನ್ನು ಆಶ್ರಯಿಸುವಿರಾದರೆ, ನಿಮ್ಮ ಕೊರತೆಗಳೆಲ್ಲಾ ನೀಗುವವು. ಸಂಪೂರ್ಣವಾದದ್ದು ಬಂದಾಗ ಅಪೂರ್ಣವಾದದ್ದು ಇಲ್ಲದಂತಾಗುವದು (1 ಕೊರಿಂ 13:10). ಅಂದು ಕಾನಾ ಊರಿನ ಮದುವೆಯಲ್ಲಿ ದ್ರಾಕ್ಷಾರಸದ ಕೊರತೆ ಉಂಟಾದಾಗ, ಕ್ರಿಸ್ತಯೇಸು ಅಲ್ಲಿ ಇದ್ದದ್ದರಿಂದ ನೀರನ್ನು ದ್ರಾಕ್ಷಾರಸವನ್ನಾಗಿ ಮಾರ್ಪಡಿಸಿ ಕೊರತೆಯನ್ನು ನೀಗಿಸಿದನು. ಅದ್ಭುತ ಮಾಡಿದನು. ಬೆಥೆಸ್ದಾ ಕೊಳದ ಬಳಿ 38 ವರುಷಗಳಿಂದ ವ್ಯಾಧಿಪೀಡಿತನಾಗಿ ಮಲಗಿದ್ದವನನ್ನು ಪ್ರೀತಿಯೂ ಕೃಪೆಯೂ ತುಂಬಿದವನಾದ ರಕ್ಷಕನಾದ ಕ್ರಿಸ್ತನು ಮುಟ್ಟಿ ಕ್ಷಣ ಮಾತ್ರದಲ್ಲಿ ಸ್ವಸ್ಥತೆ ನೀಡಿ "ನಿನ್ನ ಹಾಸಿಗೆಯನ್ನು ಎತ್ತಿಕೊಂಡು ನಡೆ" (ಯೋಹಾ 5:8) ಎಂದು ಹೇಳಿದನು. ಮನುಷ್ಯನಲ್ಲಿ ಆತ್ಮ, ಪ್ರಾಣ, ಶರೀರ ಎಂದು ಮೂರು ಭಾಗಗಳಿರುವವು. (1 ಥೆಸ 5:23). ಕರ್ತನೋ ಈ ಮೂರರಲ್ಲಿ ಯಾವ ಕೊರತೆ ಇದ್ದರೂ, ಅವುಗಳನ್ನೆಲ್ಲಾ ನಿವಾರಣೆ ಮಾಡಲು ಕಾತರದಿಂದ ಕಾದಿರುವನು. ಕೆಲವರಿಗೆ ತೀರದ ವ್ಯಾಧಿ, ಕೆಲವರ ಜೀವಿತದಲ್ಲಿ ಅತಿಯಾದ ಶಾಪಗಳು. ಕೆಲವರಿಗೆ ಸೈತಾನನ ಕಟ್ಟುಗಳು. ಯಾವದೇ ಅಗಿದ್ದರು ಕ್ರಿಸ್ತನು ತನ್ನ ಪ್ರೀತಿಯಿಂದ, ಕೃಪೆಯಿಂದ, ಕನಿಕರದಿಂದ, ಅದ್ಭುತ ಮಾಡಿ, ಕೊರತೆಗಳನ್ನೆಲ್ಲಾ ನಿವಾರಣೆ ಮಾಡುವನು.

ದೇವಜನರೇ, ಇಂದು ಯೇಸುಕ್ರಿಸ್ತನನ್ನೇ ದೃಷ್ಟಿಸಿರಿ. "ದಾವೀದ ಕುಮಾರನೇ, ನಜರೇತಿನ ಯೇಸುವೇ, ನನಗೆ ಅದ್ಭುತವನ್ನು ಮಾಡು" ಎಂದು ಕೂಗಿ ಕರೆಯಿರಿ. ಮಹಿಮೆಯಾದ ಕರ್ತನು ಇಂದೇ ನಿಮ್ಮನ್ನು ಮುಟ್ಟಿ ಸ್ವಸ್ಥಪಡಿಸುವನು. ನಿಮ್ಮ ಕೊರತೆಗಳನ್ನೆಲ್ಲಾ ನೀಗಿಸುವನು.

*ನೆನಪಿಗೆ : ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿಕೊಂಡರೂ ಪ್ರಾಣನಷ್ಟ ಪಟ್ಟರೆ ಅವನಿಗೆ ಪ್ರಯೋಜನವೇನು? (ಮತ್ತಾಯ 16:26).*

| ಜುಲೈ 3 | ಪಾದಸನ್ನಿಧಿಯ ವೈಭವ | ಬೆಳಗ್ಗೆ : ಯೋಬ 25:26,27<br>ಸಂಜೆ : ಅ.ಕೃ. 12 |
|---|---|---|

"ನನ್ನ ಪಾದಸನ್ನಿಧಿಯ ಮಂದಿರವನ್ನು ವೈಭವಪಡಿಸುವೆನು" (ಯೆಶಾ 60:13).

ಆಕಾಶವು ಆತನಿಗೆ ಸಿಂಹಾಸನ, ಭೂಮಿ ಆತನಿಗೆ ಪಾದಪೀಠ. ಆತನು ಪಾದ ಊರುವ ಈ ಭೂಮಿಯಲ್ಲಿ ನಮ್ಮನ್ನು ಇಟ್ಟಿರುವನು, ನಮ್ಮನ್ನು ಆಶೀರ್ವದಿಸಿರುವನು. ನೀವು ಎಲ್ಲೇ ಇದ್ದರೂ ನಾನು ಕರ್ತನ ಪಾದಸನ್ನಿಧಿಯಲ್ಲಿರುವೆನು ಎಂದು ನಿಮ್ಮಿಂದ ಹೇಳಲು ಸಾಧ್ಯ. ನೀವು ಆತನ ಪಾದಸನ್ನಿಧಿಯಲ್ಲಿ ಕುಳಿತು ಸ್ತುತಿ ಸಲ್ಲಿಸಿ "ಅಪ್ಪಾ ತಂದೆಯೇ" ಎಂದು ಕರೆದು, ಆತನ ನಾಮವನ್ನು ಘನಪಡಿಸುವಾಗ ಆತನು ಸಂತೋಷಿಸುವನು.

ಒಂದು ದಿನ ಕರ್ತನು ಪ್ರವಾದಿಯಾದ ಯೆಹೆಜ್ಕೇಲನನ್ನು ಆತ್ಮಪರವಶನನ್ನಾಗಿಸಿ, ದೇವಾಲಯಕ್ಕೆ ಕರೆದುಕೊಂಡು ಹೋದಾಗ, ಅಲ್ಲಿ ಕರ್ತನ ಪ್ರಸನ್ನತೆ ದೇವಾಲಯವನ್ನು ತುಂಬಿರುವದನ್ನು ಕಂಡನು (ಯೆಹೆ 43:4–7). ಅರಸನಾದ ದಾವೀದನು ಇಸ್ರಾಯೇಲ್ಯರಿಗೆ– "ಯೆಹೋವನ ನಿಬಂಧನ ಮಂಜೂಷಕ್ಕೋಸ್ಕರವೂ ನಮ್ಮ ದೇವರ ಪಾದಪೀಠಕ್ಕೋಸ್ಕರವೂ ಆಲಯವನ್ನು ಕಟ್ಟಿಸಬೇಕೆಂದು ಮನಸ್ಸು ಮಾಡಿ ಅದಕ್ಕಾಗಿ ಎಲ್ಲವನ್ನೂ ಸಿದ್ಧಪಡಿಸಿದೆನು" (1 ಪೂ.ವೃ. 28:2) ಎಂದು ಹೇಳಿದನು. ಆದರೆ ದಾವೀದನು ಮಹಾಯುದ್ಧಗಳನ್ನು ನಡೆಸಿ ಬಹಳ ರಕ್ತವನ್ನು ಸುರಿಸಿದ್ದರಿಂದ, ಅವನ ಮಗನಾದ ಸೊಲೊಮೋನನ ಕೈಯಿಂದ ಆಲಯವನ್ನು ಕಟ್ಟಿಸಬೇಕೆಂದು ದೇವರು ನಿಶ್ಚಯಿಸಿದನು. ಆದುದರಿಂದ ಸೊಲೊಮೋನನ ಕಾಲದಲ್ಲಿ ದೇಶದಲ್ಲಿ ವಿಶ್ರಾಂತಿಯೂ, ಸಮಾಧಾನವು ನೆಲೆಗೊಂಡಿತ್ತು. ಯುದ್ಧ ನಿಂತು ಹೋಗಿತ್ತು. ಸೊಲೊಮೋನನು ಕರ್ತನಿಗೆಂದು ವೈಭವಪೂರಿತವಾದ ದೇವಾಲಯವನ್ನು ಕಟ್ಟಿ ಮುಗಿಸಿದನು. ಕರ್ತನ ಪ್ರಸನ್ನತೆ ಆಲಯದಲ್ಲಿ ಬಂದು ತಂಗಿತು. ಆದ್ದರಿಂದಲೇ ಅಂದು ದೇವಭಕ್ತರು ಪ್ರಪಂಚದ ಯಾವ ಮೂಲೆಯಲ್ಲಿದ್ದರೂ, ಕರ್ತನ ಪ್ರಸನ್ನತೆಯಿಂದ ತುಂಬಿದ ಯೆರೂಸಲೇಮಿನ ಆಲಯದ ದಿಕ್ಕಿಗೆ ಮುಖ ಮಾಡಿ ಪ್ರಾರ್ಥಿಸಿದರು. ದಾನಿಯೇಲನು ಬ್ಯಾಬಿಲೋನ್ ದೇಶದಲ್ಲಿ ವಾಸಿಸುತ್ತಿದ್ದಾಗ, ಯೆರೂಸಲೇಮಿನ ಕಡೆಗೆ ಮುಖ ಮಾಡಿ ದಿನಕ್ಕೆ ಮೂರಾವರ್ತಿ ಪ್ರಾರ್ಥಿಸುತ್ತಿದ್ದನು.

ದೇವಜನರೇ, ಹೊಸ ಒಡಂಬಡಿಕೆಯ ಕಾಲದಲ್ಲಿರುವ ನಾವು, ಪವಿತ್ರಾತ್ಮನಾಗಿರುವ ದೇವರನ್ನು ಎಲ್ಲಾ ಕಡೆಗಳಲ್ಲೂ ಆರಾಧಿಸುವವರಾಗಿದ್ದೇವೆ. ಇಬ್ಬರು ಮೂವರು ಎಲ್ಲಿ ನನ್ನ ಹೆಸರಿನಲ್ಲಿ ಕೂಡಿ ಬರುವರೋ ಅಲ್ಲಿ ಆತನು ಇಳಿದು ಬರುವನು ಎಂಬುದು ಆತನ ವಾಗ್ದಾನ. ನಾವು ಯಾವಾಗೆಲ್ಲಾ ಆತನನ್ನು ಆರಾಧಿಸುವೆವೋ ಆಗಲೆಲ್ಲಾ ನಮ್ಮ ಸಮೀಪದಲ್ಲಿಯೇ ಇರುವನು. ನಾನು ನನ್ನ ಹೆಸರನ್ನು ನಿಮ್ಮ ಜ್ಞಾಪಕಕ್ಕೆ ಬರುವಂತೆ ಮಾಡುವ ಎಲ್ಲಾ ಸ್ಥಳಗಳಲ್ಲಿಯೂ ನಿಮ್ಮ ಬಳಿಗೆ ಬಂದು ನಿಮ್ಮನ್ನು ಆಶೀರ್ವದಿಸುವೆನು (ವಿಮೋ 20:24) ಎಂದು ಹೇಳುವನು. ಆತನ ಪ್ರಸನ್ನತೆ ಇಳಿದು ಬರುವಾಗ ಆತನ ಪಾದಗಳನ್ನು ಹಿಡಿದು ನಿಮ್ಮ ಎಲ್ಲಾ ದುಃಖ ಸಂಕಟ ಅಗತ್ಯತೆಗಳನ್ನು ಆತನ ಬಳಿ ಅರಿಕೆ ಮಾಡಿಕೊಳ್ಳಿರಿ.

***ನೆನಪಿಗೆ : ಆಗ ಜನರು – ಕಾಡಾಗಿದ್ದ ಈ ದೇಶವು ಏದೆನ್ ಉದ್ಯಾನದಂತೆ ಕಳಕಳಿಸುತ್ತದೆ. ಬಿದ್ದು ಹೋಗಿ ಹಾಳುಪಾಳಾದ ಪಟ್ಟಣಗಳು ಕೋಟೆಕೊತ್ತಲಗಳಿಂದ ಕೂಡಿ ಜನಭರಿತವಾಗಿವೆಯಲ್ಲಾ ಎಂದು ಹೇಳುವರು (ಯೆಹೆ 36:35).***

| ಜುಲೈ 4 | ಕಳೆದುಕೊಂಡದ್ದನ್ನು! | ಬೆಳಗ್ಗೆ : ಯೋಬ 28-29<br>ಸಂಜೆ : ಅ.ಕೃ. 13:1-25 |
|---|---|---|

"ಮನುಷ್ಯಕುಮಾರನು ಕೆಟ್ಟು ಹೋಗಿರುವದನ್ನು ಹುಡುಕಿ ರಕ್ಷಿಸುವದಕ್ಕೆ ಬಂದನು" ಎಂದು ಹೇಳಿದನು (ಲೂಕ 19:10).

ಮಾನವಕುಲದ ಮೇಲೆ ಕೃಪೆ ತೋರಿಸಿದ ಕರ್ತನು ಮನುಷ್ಯನು ಕಳೆದುಕೊಂಡದ್ದನ್ನೆಲ್ಲಾ ಅವನಿಗೆ ಹಿಂದಿರುಗಿಸಲು, ಆತನು ಈ ಭೂಮಿಗೆ ಇಳಿದು ಬಂದನು. ಪರಲೋಕದ ಮಹಿಮೆಯಾದ ಆಶೀರ್ವಾದಗಳೆಲ್ಲವನ್ನೂ ಹೊತ್ತು ತಂದನು. ಪ್ರಪಂಚವು ಕೊಡುವದಕ್ಕೂ ತೆಗೆದುಕೊಳ್ಳುವದಕ್ಕೂ ಆಗದಂಥ ಸಂತೋಷದಿಂದಲೂ, ಸಮಾಧಾನದಿಂದಲೂ ತುಂಬಿಸಿದನು. ಇಂದಿಗೂ ಆತನು ನಿಮಗೆ ಮಹಿಮೆಯಾದ ಕಾರ್ಯಗಳನ್ನು ಮಾಡುವನು.

ಹಾಗಾದರೆ ನಿಮ್ಮ ಕರ್ತವ್ಯ ಏನು? ಜನರನ್ನು ರಕ್ಷಣೆಯೊಳಗೆ ನಡೆಸುವದು, ದೀಕ್ಷಾಸ್ನಾನ ಕೊಡುವದು. ದೈವೀಕ ಸ್ವಸ್ಥತೆಯನ್ನು ಆರೋಗ್ಯವನ್ನು ಪಡೆದುಕೊಳ್ಳುವಂತೆ ಬೋಧಿಸುವದು. ಮಾತ್ರವಲ್ಲ ಅವರನ್ನು ಕ್ರಿಸ್ತನ ಮಹಿಮೆಯೊಳಗೆ ನಡೆಸುವದು. ಮನುಷ್ಯನು ಏದೆನಿನಲ್ಲಿ ಕಳೆದುಕೊಂಡ ಮಹಿಮೆಯನ್ನು ಕ್ರಿಸ್ತಯೇಸುವಿನ ಮೂಲಕವಾಗಿಯೇ ಹಿಂದೆ ಪಡೆಯಲು ಸಾಧ್ಯ. ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಸೇರಲು ಸಾಧ್ಯವಿಲ್ಲ. ನಾನೇ ಮಾರ್ಗವೂ, ಸತ್ಯವೂ, ಜೀವವೂ ಆಗಿದ್ದೇನೆ ಎಂದು ಕ್ರಿಸ್ತನು ಹೇಳಿರುವನಲ್ಲವೇ! ನಾನೂ ನೀವೂ ಆತನ ಮೂಲಕವಾಗಿಯೇ ತಂದೆಯ ಕೃಪಾಸನದ ಬಳಿಗೆ ಹೋಗಲು ಸಾಧ್ಯ. ಆದಾಮನಿಂದ ತೆಗೆಯಲ್ಪಟ್ಟ ದೇವ ಮಹಿಮೆಯನ್ನು ಇಸ್ರಾಯೇಲ್ಯರು ಅರಣ್ಯ ಪ್ರಯಾಣದಲ್ಲಿದ್ದಾಗ ಮೇಘಸ್ತಂಭದಲ್ಲಿ ಕಂಡರು. ಅವರು ಅರಣ್ಯದ ಕಡೆಗೆ ನೋಡಲಾಗಿ ಮೇಘದಲ್ಲಿ ಯೆಹೋವನ ತೇಜಸ್ಸು ಅವರಿಗೆ ಕಾಣಿಸಿತು (ವಿಮೋ 16:10) ಎಂದು ಸತ್ಯವೇದ ತಿಳಿಸುತ್ತದೆ. ದೇವರು ತನ್ನ ಮಹಿಮೆಯನ್ನು ಪ್ರಕಟಿಸಬೇಕಾದರೆ ಜನರು ಪ್ರಪಂಚವೆಂಬ ಐಗುಪ್ತವನ್ನು ಬಿಟ್ಟು ಹೊರಗೆ ಬರಬೇಕು. ಕೆಂಪು ಸಮುದ್ರವಾದ ದೀಕ್ಷಾಸ್ನಾನದ ಮಾರ್ಗವಾಗಿ ನಡೆದು ಬರಬೇಕು. ಇಸ್ರಾಯೇಲ್ಯರು ಪೂರ್ಣವಾಗಿ ಕರ್ತನನ್ನೇ ಆಶ್ರಯಿಸಿಕೊಂಡು ಅರಣ್ಯದಲ್ಲಿ ಆತನೊಂದಿಗೆ ಇದ್ದ ಸಂದರ್ಭದಲ್ಲಿಯೇ ಕರ್ತನ ಮಹಿಮೆ ಮೇಘಸ್ತಂಭದಲ್ಲಿ ತೋರಿ ಬಂತು.

ದೇವಜನರೇ, ಸ್ವಲ್ಪ ಚಿಂತಿಸಿ ನೋಡಿರಿ. ಮೇಲೆ ನೀತಿಸೂರ್ಯನಾದ ದೇವರು ಇರುವನು. ಕೆಳಗೆ ಭೂಮಿಯಲ್ಲಿ ಪಾಪಿಯಾದ ಮನುಷ್ಯನಿರುವನು. ನಡುವೆ ಮೇಘದಂತೆ ಮಧ್ಯಸ್ಥನಾಗಿ ಯೇಸುಕ್ರಿಸ್ತನಿರುವನು. ದೇವರ ಕೋಪಾಗ್ನಿ ಪಾಪಿಯಾದ ಮನುಷ್ಯನ ಮೇಲೆ ಇಳಿದು ಬರದಂತೆ ತನ್ನ ಮೇಲೆ ತೆಗೆದುಕೊಂಡು ಮಧ್ಯಸ್ತಿಕೆ ಮಾಡುತ್ತಿರುವನು. ಆತನ ಮೂಲಕವಾಗಿಯೇ ನೀವು ಮಹಿಮೆಯ ಮೇಲೆ ಮಹಿಮೆ ಹೊಂದಲು ಸಾಧ್ಯ.

***ನೆನಪಿಗೆ : "ದೇವರು ಒಬ್ಬನೇ, ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ. ಆತನು ಮನುಷ್ಯನಾಗಿರುವ ಕ್ರಿಸ್ತಯೇಸುವೇ. ಆತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿ ಬಿಟ್ಟನು" (1 ತಿಮೊ 2:5,6).***

| ಜುಲೈ 5 | ದೇವದರ್ಶನ ಗುಡಾರದಲ್ಲಿ! | ಬೆಳಗ್ಗೆ : ಯೋಬ 30,31<br>ಸಂಜೆ : ಅ.ಕೃ. 3:26-52 |
|---|---|---|

"ಆಗ ಮೇಘವು ದೇವದರ್ಶನದ ಗುಡಾರವನ್ನು ಮುಚ್ಚಿತು; ಯೆಹೋವನ ತೇಜಸ್ಸು ಗುಡಾರವನ್ನು ತುಂಬಿತು" (ವಿಮೋ 40:34).

ಆದಾಮನು ಕಳೆದುಕೊಂಡ ಮಹಿಮೆಯನ್ನು ಕರ್ತನು ಹಂತಹಂತವಾಗಿ ಮನುಷ್ಯನೊಳಗೆ ತುಂಬಲು ನಿಶ್ಚಯಿಸಿದನು. ಮೊದಲು ದೇವ ಮಹಿಮೆ ಮೇಘದೊಳಗೆ ಕಾಣಿಸಲ್ಪಟ್ಟಿತು. ಎರಡನೆಯದಾಗಿ ಮೋಶೆ ದೇವರು ಹೇಳಿದ ರೀತಿಯಲ್ಲಿ ದೇವದರ್ಶನ ಗುಡಾರವನ್ನು ಮಾಡಿ ಮುಗಿಸಿದ ಮೇಲೆ ದೇವ ಮಹಿಮೆ ದೇವದರ್ಶನ ಗುಡಾರದೊಳಗೆ ಬಂದು, ಗುಡಾರವನ್ನು ಮುಚ್ಚಿತು. ಅರಣ್ಯ ಪ್ರಯಾಣದಲ್ಲಿ, ಇಸ್ರಾಯೇಲ್ಯರಿಗೆ ದೇವರು ತನ್ನ ಮಹಿಮೆಯನ್ನು ತೋರಿಸುವಂತೆ ನಿಶ್ಚಯಿಸಿದನು. ಅದಕ್ಕಾಗಿ ಆತನು ಮೋಶೆಯನ್ನು ನೋಡಿ, ನಾನು ಅವರ ಮಧ್ಯದಲ್ಲಿ ವಾಸಿಸುವದಕ್ಕೆ ಒಂದು ದೇವಸ್ಥಾನವನ್ನು ಕಟ್ಟಿಸಬೇಕು (ವಿಮೋ 25:8) ಎಂದು ಹೇಳಿದನು.

ದೇವರು ಮನುಷ್ಯರ ಮಧ್ಯದಲ್ಲಿ ವಾಸಿಸಲು ಬಯಸಿದ್ದು ಎಷ್ಟು ಆಶ್ಚರ್ಯಕರವಾದ ಸಂಗತಿ ಅಲ್ಲವೇ? ಹೌದು ಆತನು ಇಮ್ಮಾನುವೇಲನು. ಆತನು ನಮ್ಮೊಂದಿಗಿರುವನು. ಅದಕ್ಕಾಗಿಯೇ ಕರ್ತನು ದೇವದರ್ಶನ ಗುಡಾರವನ್ನು ನಿರ್ಮಿಸಲು ಮೋಶೆಗೆ ಆಜ್ಞಾಪಿಸಿದನು. ಅದನ್ನು ನಿರ್ಮಿಸುವ ವಿಧಿ ವಿಧಾನಗಳನ್ನು ತಿಳಿಸಿದನು. ಅಂದು ವರುಷದಲ್ಲಿ ಒಂದು ಸಾರಿ ಮಾತ್ರ. ಮಹಾಯಾಜಕನು ತನ್ನನ್ನು ಶುದ್ಧೀಕರಿಸಿಕೊಂಡು, ಜನರಿಗಾಗಿ ಬಲಿಗಳನ್ನು ಅರ್ಪಿಸಿ, ಸುಗಂಧದ್ರವ್ಯಗಳೊಂದಿಗೆ ದೇವಮಹಿಮೆ ಇರುವ ಮಹಾಪರಿಶುದ್ಧ ಸ್ಥಳದೊಳಗೆ ಪ್ರವೇಶಿಸುವನು. ಆ ಮಹಾಯಾಜಕನ ಕಾಲುಗಳಿಗೆ ಹಗ್ಗಗಳನ್ನು ಕಟ್ಟಿ ಒಳಗೆ ಕಳುಹಿಸುತ್ತಿದ್ದರು. ಹಗ್ಗದ ಮತ್ತೊಂದು ತುದಿ ಮಹಾಪರಿಶುದ್ಧ ಸ್ಥಳದ ಹೊರಗೆ ಇರುತ್ತಿತ್ತು. ಒಂದು ವೇಳೆ ಅಲ್ಲಿರುವ ದೇವ ಮಹಿಮೆಯನ್ನು ತಾಳಿಕೊಳ್ಳಲಾರದೆ ಬಿದ್ದು ಸತ್ತು ಹೋದರೆ, ಹೊರಕ್ಕೆ ಎಳೆಯಲು ಆ ಹಗ್ಗ ಸಹಾಯವಾಗುವದು.

ದೇವಮಕ್ಕಳೇ, ನಿಮ್ಮೊಳಗೆ ಆತ್ಮ, ಪ್ರಾಣ, ಶರೀರವೆಂದು ಮೂರು ಭಾಗಗಳಿರುವವು. ಆ ಆತ್ಮದ ಭಾಗದಲ್ಲಿಯೇ ಕರ್ತನು ತನ್ನ ಮಹಿಮೆಯಿಂದ ತುಂಬಲು ಬಯಸುವನು. ವೇದಪಂಡಿತರು ಹೇಳುವರು. ದೇವರು ಮನುಷ್ಯನ ಆತ್ಮದಲ್ಲಿ ಒಂದು ಜಯದ ಸ್ಥಳವನ್ನು ಇಟ್ಟಿರುವನು. ಮನುಷ್ಯನನ್ನು ಸೃಷ್ಟಿಸಿದಾಗ ಆ ಸ್ಥಳ ದೇವ ಮಹಿಮೆಯಿಂದ ತುಂಬಿತ್ತು. ಆದರೆ ಈಗಲಾದರೋ ಬರಿದಾಗಿದೆ. ಆದ್ದರಿಂದಲೇ ಮನುಷ್ಯನು ದೇವರನ್ನು ಹುಡುಕುತ್ತಾ ಪುಣ್ಯಕ್ಷೇತ್ರಗಳಿಗೆ ಹೋಗಿ ದೇವರನ್ನು ಕಾಣಲು ಸಾಧ್ಯವಾ? ಎಂದು ಹಾತೊರೆಯುತ್ತಿರುವನು. ಸಂತ ಅಗಸ್ಟೀನ್ ಒಮ್ಮೆ ಹೀಗೆ ಹೇಳಿದರು. ನನ್ನ ಆಂತರ್ಯ ವಿಶ್ರಾಂತಿಯಿಲ್ಲದೆ ತೊಯಾಡುತ್ತಲಿತ್ತು. ಯೇಸುವನ್ನು ಅಂಗೀಕರಿಸಿಕೊಂಡಾಗ ನನ್ನಲ್ಲಿ ವಿಶ್ರಾಂತಿ ನೆಲಸಿತು ಎಂದು ಪ್ರಿಯರೇ, ನಿಮ್ಮ ಆಂತರ್ಯವನ್ನು ದೇವರಾತ್ಮನು ತುಂಬಿಸಲಿ.

***ನೆನಪಿಗೆ : ಮನುಷ್ಯನ ಆತ್ಮವು ಯೆಹೋವನ ದೀಪವಾಗಿದೆ. ಅದು ಅಂತರಂಗವನ್ನೆಲ್ಲಾ ಶೋಧಿಸುತ್ತದೆ (ಜ್ಞಾನೋಕ್ತಿ 20:27).***

| ಜುಲೈ 6 | ಆಲಯದಲ್ಲಿ ಮಹಿಮೆ! | ಬೆಳಗ್ಗೆ : ಯೋಬ 32-33<br>ಸಂಜೆ : ಅ.ಕೃ. 14 |
|---|---|---|

"ಸೊಲೊಮೋನನು ಪ್ರಾರ್ಥಿಸುವದನ್ನು ಮುಗಿಸಿದ ಕೂಡಲೆ ಆಕಾಶದಿಂದ ಬೆಂಕಿ ಬಿದ್ದು ಸರ್ವಾಂಗಹೋಮದ್ರವ್ಯಗಳನ್ನು ಯಜ್ಞಮಾಂಸವನ್ನೂ ದಹಿಸಿಬಿಟ್ಟಿತು. ಯೆಹೋವನ ತೇಜಸ್ಸು ಆಲಯದಲ್ಲಿ ತುಂಬಿಕೊಂಡಿತು" (2 ಪೂ.ವೃ. 7:1).

ಆದಿ ತಂದೆ ತಾಯಿಗಳು ಕಳೆದುಕೊಂಡ ದೇವ ಮಹಿಮೆ ಮೊದಲು ಮೇಘದ ಮೇಲೆ ಕಾಣಲ್ಪಟ್ಟಿತು. ನಂತರ ದೇವದರ್ಶನದ ಗುಡಾರವನ್ನು ಆ ಮೇಘ ತುಂಬಿತು. ಅರಣ್ಯ ಮಾರ್ಗವಾಗಿ ಇಸ್ರಾಯೇಲ್ಯರನ್ನು ನಾಲ್ವತ್ತು ವರುಷಗಳು ಪ್ರಯಾಣಿಸುವಂತೆ ಮಾಡಿದಾಗ ದೇವಮಹಿಮೆ ದೇವದರ್ಶನ ಗುಡಾರದಲ್ಲಿ ಇತ್ತು.

ಅರಸನಾದ ಸೊಲೊಮೋನನು ದೇವಾಲಯವನ್ನು ಕಟ್ಟಿ ಪ್ರತಿಷ್ಠಿಸಿದಾಗ, ಆ ದೇವ ಮಹಿಮೆ ಆ ದೇವಾಲಯದ ಒಳಗೆ ಪ್ರವೇಶಿಸಿ ಆಲಯವನ್ನು ಮುಚ್ಚಿತು. ದೇವದರ್ಶನದ ಗುಡಾರ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ತೆಗೆದುಕೊಂಡು ಹೋಗುವ ಗುಡಾರವಾಗಿತ್ತು. ಆದರೆ ದೇವಾಲಯವೋ ಒಂದೇ ಸ್ಥಳದಲ್ಲಿ ನೆಲೆಯಾಗಿ ನಿಂತಿತು. ನಿಮ್ಮ ಆತ್ಮೀಕ ಜೀವಿತದಲ್ಲೂ, ದೇವ ಸೇವೆಯಲ್ಲೂ ಕೆಲವು ಸಮಯಗಳಲ್ಲಿ ಸ್ಥಳ ಬದಲಾಯಿಸಬೇಕಾಗಿ ಬರುವದು. ಸೇವೆಗಳನ್ನೂ, ಸೇವಾಕ್ಷೇತ್ರಗಳನ್ನೂ ಮಾರ್ಪಡಿಸಿಕೊಳ್ಳಬೇಕಾಗುವದು. ಆದರೆ ಒಂದು ನಿರ್ದಿಷ್ಟವಾದ ಕಾಲ ಬರುವಾಗ ಕರ್ತನು ಒಂದು ಸ್ಥಳದಲ್ಲಿ ನೆಲೆಗೊಳಿಸುವನು. ನನ್ನ ಸೇವೆಯ ಪ್ರಾರಂಭ ಕಾಲಗಳಲ್ಲಿ ಹಲವಾರು ಸೇವೆಗಳನ್ನು ಮಾಡುತ್ತಾ ಬಂದೆನು. ನಸುಕಿನಲ್ಲಿ ಬೀದಿಯಲ್ಲಿ ನಿಂತು, ಬೀದಿ ಪ್ರಸಂಗವನ್ನು ಮಾಡಿದೆ. ಬೆಳಗಿನ ಸಮಯದಲ್ಲಿ ರೈಲ್ವೆ ನಿಲ್ದಾಣಗಳಲ್ಲಿ ಸುವಾರ್ತಾ ಕರಪತ್ರಗಳನ್ನು ಹಂಚಿದೆ. ಸಾಯಂಕಾಲ ವೇಳೆಯಲ್ಲಿ ಆಸ್ಪತ್ರೆ ಸೇವೆ ಮಾಡಿದೆ. ವ್ಯಾಧಿಗ್ರಸ್ಥರನ್ನು ಸಂಧಿಸಿ ಅವರನ್ನು ರಕ್ಷಣೆಯ ಮಾರ್ಗಕ್ಕೆ ನಡೆಸುತ್ತಿದ್ದೆ. ಒಂದು ದಿನ ಒಬ್ಬ ದೇವ ಸೇವಕರು ಹೇಳಿದರು. ಈಗ ಕರ್ತನು ಕೊಟ್ಟಿರುವ ಸೇವೆಯನ್ನು ಪೂರ್ಣ ಬಲದಿಂದ ಮಾಡು. ಕಾಲ ಬಂದಾಗ ಒಂದು ನಿರ್ದಿಷ್ಟವಾದ ಸೇವೆಗೆ ಕರ್ತನು ನಡೆಸುವನು. ಆಗ ಆ ಸೇವೆಯನ್ನು ದೃಢವಾಗಿ ಹಿಡಿದುಕೋ ಎಂದು. ಹಾಗೆಯೇ ಒಂದು ದಿನ ಕರ್ತನು ನನ್ನೊಂದಿಗೆ ಪುಸ್ತಕ ಸೇವೆಯ ಕುರಿತು ಮಾತನಾಡಿದನು. ದೇವಜನರಿಗೆ ಆತ್ಮೀಕ ಆಹಾರವನ್ನು ನೀಡುವದು ಅವಶ್ಯವೆಂದು ತಿಳಿಸಿದನು. ಅದರಲ್ಲಿ ನಾನು ದೃಢವಾಗಿ ನಿಂತೆ.

ದೇವಮಕ್ಕಳೇ, ಇಂದು ನೀವೇ ದೇವರ ಆಲಯವಾಗಿರುವಿರಿ. ಆದ್ದರಿಂದ ಕರ್ತನ ಪ್ರೀತಿ, ಕರುಣೆ, ತ್ಯಾಗವನ್ನು ಅಧಿಕವಾಗಿ ನೆನಸಿಕೊಳ್ಳಿರಿ. ಆತನ ಮಹಿಮೆ ನಿಮ್ಮೊಳಗೆ ಸದಾ ನೆಲೆಸಿರುವಂತೆ. ಆತ್ಮ ಶರೀರಗಳನ್ನು ಶುದ್ಧವಾಗಿ ಇಟ್ಟುಕೊಳ್ಳಿರಿ.

***ನೆನಪಿಗೆ : ''ಯೆಹೋವನು ಒಳ್ಳೆಯವನು, ಆತನ ಕೃಪೆಯು ಶಾಶ್ವತವಾಗಿರುವದು ಎಂದು ಕೃತಜ್ಞತಾ ಸ್ತುತಿ ಮಾಡುವವರ ಸ್ವರವೂ ಕೇಳಿಸಿದೊಡನೆ ಮೇಘವು ಯೆಹೋವನ ಆಲಯದಲ್ಲಿ ತುಂಬಿಕೊಂಡಿತು'' (2 ಪೂ.ವೃ. 5:13).***

| ಜುಲೈ 7 | ದೇವಕುಮಾರನಲ್ಲಿ ಮಹಿಮೆ! | ಬೆಳಗ್ಗೆ : ಯೋಬ 34,35<br>ಸಂಜೆ : ಅ.ಕೃ. 15:1-21 |
|---|---|---|

"ನಾವು ಆತನ ಮಹಿಮೆಯನ್ನು ನೋಡಿದೆವು. ಆ ಮಹಿಮೆಯು ತಂದೆಯ ಬಳಿಯಿಂದ ಬಂದ ಒಬ್ಬನೇ ಮಗನಿಗೆ ಇರತಕ್ಕ ಮಹಿಮೆ" (ಯೋಹಾ 1:14).

ಆದಾಮ ಹವ್ವಳಿಂದ ತೆಗೆಯಲ್ಪಟ್ಟ ದೇವ ಮಹಿಮೆ ಮೊದಲು, ಮೇಘಸ್ತಂಭದಲ್ಲಿ ಕಾಣಲ್ಪಟ್ಟಿತು. ನಂತರ ದೇವ ದರ್ಶನ ಗುಡಾರದಲ್ಲಿ ಆನಂತರ, ಸೊಲೊಮೋನನು ಕಟ್ಟಿದ ದೇವಾಲಯದೊಳಗೆ ಬಂದಿತು. ಆ ಮೇಲೆ ಆ ದೇವಮಹಿಮೆಯು ಯೇಸುಕ್ರಿಸ್ತನೊಳಗೆ ಬಂದಿತು.

ಪರಲೋಕದ ಮಹಿಮೆಯಿಂದ ತುಂಬಿದವನಾದ ಯೇಸುಕ್ರಿಸ್ತನು, ಭೂಮಿಗೆ ಶರೀರಧಾರಿಯಾಗಿ ದಾಸನರೂಪದಲ್ಲಿ ಮನುಷ್ಯಕುಮಾರನಾಗಿ ಬಂದನು. ಬಡ ಕುಟುಂಬದಲ್ಲಿ ಗೋದಲಿಯೊಳಗೆ ಜನಿಸಿದಂದಿನಿಂದ, ಅರಿಮಥಾಯದವನಾದ, ಯೋಸೇಫನಿಗೆ ಸೇರಿದ ಸಮಾಧಿಯಲ್ಲಿ ಹೂಣಿಡುವವರೆಗೂ ಆತನಿಗೆ ತಲೆಯಿಡುವಷ್ಟು ಸ್ಥಳವು ಸಿಗಲಿಲ್ಲವಾದರೂ, ಆತನಲ್ಲಿ ದೇವ ಮಹಿಮೆ ನೆಲೆಗೊಂಡಿತ್ತು. ಸರ್ವಲೋಕಗಳ ಒಡೆಯನಾದ ದೇವರು ಕೈಗಳಿಂದ ಕಟ್ಟಲ್ಪಟ್ಟ ಆಲಯಗಳಲ್ಲಿ ವಾಸ ಮಾಡುವಾತನಲ್ಲ (ಅ.ಕೃ. 7:48). ಆಕಾಶವು ನನ್ನ ಸಿಂಹಾಸನ, ಭೂಮಿಯು ನನ್ನ ಪಾದಪೀಠ. ನೀವು ನನಗೆ ಎಂಥ ಮನೆಯನ್ನು ಕಟ್ಟಿ ಕೊಡುವಿರಿ? ನನಗೆ ವಿಶ್ರಾಂತಿ ಸ್ಥಳ ಯಾವದು? ಎಂದು ಕರ್ತನು ಕೇಳುತ್ತಾನೆ (ಅ.ಕೃ. 7:49). ಹೌದು ಆತನು ಕೈಗಳಿಂದ ಕಟ್ಟಿದ ಗುಡಿಗೋಪುರಗಳಲ್ಲಿ ವಾಸಿಸುವವನಲ್ಲ. ಸೊಲೊಮೋನನು ಕಟ್ಟಿದ ಆಲಯ ನೆಬೂಕದ್ನೆಚ್ಚರನ ಕಾಲದ ನಂತರ ಬಿದ್ದುಹೋಯಿತು. ಜೆರುಬ್ಬಾಬೆಲ, ಎಜ್ರ, ನೆಹೆಮೀಯರು ಕಟ್ಟಿದ ಆಲಯಗಳು ಕೆಲವು ವರುಷಗಳೊಳಗೆ ಹಾಳಾದವು. ಹೆರೋದನು 46 ವರುಷಗಳು ಕಟ್ಟಿದ ಆಲಯ ಕ್ರಿ.ಶ. 70 ರಲ್ಲಿ ತೀತರಾಯನಿಂದ ನಾಶಗೊಂಡಿತು. ಹೊರನೋಟಕ್ಕೆ ಯೇಸುಕ್ರಿಸ್ತನು ಮನುಷ್ಯಕುಮಾರನಾಗಿ ಇದ್ದರೂ, ತಂದೆ ದೇವರ ಮಹಿಮೆಯನ್ನು ಆತನು ಆಗಾಗ್ಗೆ ಪ್ರಕಟಿಸುತ್ತಲೇ ಇದ್ದನು. "ಈತನು (ಯೇಸುಕ್ರಿಸ್ತನು) ದೇವರ ಪ್ರಭಾವದ ಪ್ರಕಾಶವೂ ಆತನ ತತ್ವದ ಮೂರ್ತಿಯೂ ತನ್ನ ಶಕ್ತಿಯ ವಾಕ್ಯದಿಂದ ಸಮಸ್ತಕ್ಕೆ ಆಧಾರವೂ ಆಗಿದ್ದು, ಪಾಪವಿಶುದ್ಧಿ ಮಾಡಿದ ಮೇಲೆ ಉನ್ನತ ಲೋಕದೊಳಗೆ ಮಹತ್ವವುಳ್ಳ ದೇವರ ಬಲಗಡೆಯಲ್ಲಿ ಆಸನಾರೂಢನಾದನು" (ಇಬ್ರಿ 1:3) ಎಂದು ಸತ್ಯವೇದ ಹೇಳುತ್ತದೆ.

ದೇವಜನರೇ, ಆ ಕ್ರಿಸ್ತನೇ ನಿಮ್ಮನ್ನು ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ನಡೆಸುವನು. ಆತನೇ ನಿಮ್ಮನ್ನು ತನ್ನ ಸಾರೂಪ್ಯದಲ್ಲಿ ರೂಪಾಂತರಿಸುವವನಾಗಿರುವನು.

*ನೆನಪಿಗೆ : "ನಾವು ಒಂದಾಗಿರುವ ಪ್ರಕಾರ, ಅವರು ಒಂದಾಗಿರಬೇಕೆಂದು ನೀನು ನನಗೆ ಕೊಟ್ಟಿರುವ ಮಹಿಮೆಯನ್ನು ನಾನು ಅವರಿಗೆ ಕೊಟ್ಟಿದ್ದೇನೆ" (ಯೋಹಾನ 17:22).*

| ಜುಲೈ 8 | ನಮ್ಮೊಳಗೆ ದೇವ ಮಹಿಮೆ! | ಬೆಳಗ್ಗೆ : ಯೋಬ 36-37<br>ಸಂಜೆ : ಅ.ಕೃ. 15:22-41 |
|---|---|---|

"ಪ್ರಭಾವ ಹೊಂದುವದಕ್ಕೆ ತಾನು ಮುಂದಾಗಿ ಸಿದ್ಧ ಮಾಡಿದ ಕರುಣಾಪಾತ್ರದಲ್ಲಿ ತನ್ನ ಮಹಿಮಾತಿಶಯವನ್ನು ತೋರ್ಪಡಿಸಿದ್ದಾನೆ" (ರೋಮಾ 9:23).

ಪ್ರಪ್ರಥಮವಾಗಿ ಮೇಘದ ಮೇಲೆ ಬಂದಿಳಿದ ದೇವ ಮಹಿಮೆಯು ಹಂತ ಹಂತವಾಗಿ, ದೇವದರ್ಶನದ ಗುಡಾರದೊಳಗೂ, ದೇವಾಲಯದೊಳಗೂ, ಕ್ರಿಸ್ತನೊಳಗೂ ಬಂದು ಕಡೆಯದಾಗಿ ನಮ್ಮೊಳಗೆ ಬಂದು ನೆಲೆಸಿರುವದು. ದೇವರು ತನ್ನ ಮಹಿಮೆಯ ಐಶ್ವರ್ಯವನ್ನೆಲ್ಲಾ ಮಣ್ಣಿನ ಘಟವಾದ ನಮ್ಮ ಶರೀರದೊಳಗೆ ಇಡಲು ನಿಶ್ಚಯಿಸಿದನು. ದೇವರು ನಮಗೆ ಕೊಡುವ ಹೆಸರನ್ನು ಸ್ವಲ್ಪ ಚಿಂತಿಸಿ ನೋಡಿರಿ. "ಪ್ರಭಾವ ಹೊಂದುವದಕ್ಕೆ ಸಿದ್ಧವಾಗಿರುವ ಕರುಣಾಪಾತ್ರರು" "ಹಲ್ಲೆಲೂಯ!" ಪರಲೋಕದ ನಿಕ್ಷೇಪವು ನಮ್ಮ ಶರೀರವೆಂಬ ಮಣ್ಣಿನ ಘಟಗಳಲ್ಲಿ ಇಟ್ಟಿರುವದು ಎಷ್ಟು ಆಶ್ಚರ್ಯಕರವಾದದ್ದು (2 ಕೊರಿಂ 4:7).

ನಮ್ಮ ಶರೀರವು ಮಣ್ಣಿನ ಮಡಿಕೆಯೇ. ಅದು ಮಣ್ಣಿನಿಂದ ಮಾಡಲ್ಪಟ್ಟದ್ದು. ವ್ಯಾಧಿಗಳು ಉಂಟಾಗುವಾಗ ಅದು ಬಲಹೀನಗೊಳ್ಳುವದು. ಮನುಷ್ಯನ ಆಯುಷ್‌ಕಾಲವು ಸ್ವಲ್ಪವೇ. ನರಜಾತಿಯೆಲ್ಲಾ ಹುಲ್ಲಿನ ಹಾಗಿದೆ. ಅದರ ಪ್ರಭಾವವೆಲ್ಲಾ ಹುಲ್ಲಿನ ಹೂವಿನಂತಿದೆ. ಹುಲ್ಲು ಒಣಗಿ ಹೋಗುವದು. ಹೂವು ಉದುರಿ ಹೋಗುವದು" (1 ಪೇತ್ರ 1:24). ಎಂದು ಸತ್ಯವೇದ ಹೇಳುತ್ತದೆ. ಮನುಷ್ಯನು ಸತ್ತ ಮೇಲೆ ಶರೀರ ಕೊಳೆತು ಹುಳುಗಳಿಗೆ ಆಹಾರವಾಗಿ ಹೋಗುವದು. ಯಾರೂ ಕನಿಷ್ಠವಾದದ್ದರಲ್ಲಿ, ಅಮೂಲ್ಯವಾದದ್ದನ್ನು ಇಡುವದಿಲ್ಲ. ತನ್ನ ಅಮೂಲ್ಯವಾದ ದೇವ ಮಹಿಮೆಯೆಂಬ ನಿಕ್ಷೇಪವನ್ನು ಇಂಥಹ ನಶ್ವರವಾದ ಶರೀರದಲ್ಲಿ ಇಟ್ಟದ್ದರಿಂದ ಆ ಶರೀರವನ್ನು ಪುನರುಜ್ಜೀವಿಸ ಮಾಡಲು ಒಂದು ದೊಡ್ಡ ಕ್ರಯವನ್ನು ತೆತ್ತನು. ಪೂರ್ಣಾಂಗವಾದ ನಿಷ್ಕಳಂಕ ಯಜ್ಞದ ಕುರಿಯ ರಕ್ತದಿಂದಲೋ ಎಂಬಂತೆ ಕ್ರಿಸ್ತನ ಅಮೂಲ್ಯವಾದ ರಕ್ತದಿಂದ ವಿಮೋಚಿಸಿದನು" (1 ಪೇತ್ರ 1:19). ಇದರಿಂದಾಗಿ ನೀವು ಕರ್ತನ ದೃಷ್ಟಿಯಲ್ಲಿ ಅಮೂಲ್ಯರಾಗಿರುವಿರಿ.

ದೇವಜನರೇ, ಪರಲೋಕದ ಅರಸನು, ಮಹಿಮೆಯ ಐಶ್ವರ್ಯವಾಗಿ ನಿಮ್ಮೊಳಗೆ ನೆಲೆಸಿರುವದರಿಂದ ಆತನ ಬರೋಣದಲ್ಲಿ, ನೀವು ಪ್ರಭಾವದಿಂದ ಪ್ರಭಾವಕ್ಕೆ ನಡೆಸಲ್ಪಟ್ಟು ರೂಪಾಂತರಗೊಳ್ಳುವಿರಿ. ಆದ್ದರಿಂದ, ದೇವರ ಸಾರೂಪ್ಯದಂತೆ ಮಾರ್ಪಟ್ಟು ದೇವರೊಂದಿಗಿರುವೆನು ಎಂದು ಹಾಡಿ ಆನಂದಿಸಿರಿ. ಘನಮಾನಗಳನ್ನು ಆತನಿಗೇ ಸಲ್ಲಿಸಿರಿ.

*ನೆನಪಿಗೆ : ''ನೀವು ದೇವರ ಆಲಯವಾಗಿದ್ದೀರೆಂದೂ ದೇವರ ಆತ್ಮನು ನಿಮ್ಮಲ್ಲಿ ವಾಸ ಮಾಡುತ್ತಾನೆಂದೂ ನಿಮಗೆ ಗೊತ್ತಿಲ್ಲವೋ?'' (1 ಕೊರಿಂ 3:16).*

| ಜುಲೈ 9 | ಮುಂದೆ ಬರುವ ಮಹಿಮೆ! | ಬೆಳಗ್ಗೆ : ಯೋಬ 38,39,40<br>ಸಂಜೆ : ಅ.ಕೃ. 16:1-18 |
|---|---|---|

"ನಮಗೋಸ್ಕರ ಮುಂದಿನ ಕಾಲದಲ್ಲಿ ಪ್ರತ್ಯಕ್ಷವಾಗುವ ಮಹಿಮ ಪದವಿಯನ್ನು ಆಲೋಚಿಸಿ, ಈಗಿನ ಕಾಲದ ಕಷ್ಟಗಳು ಅಲ್ಪವೇ ಸರಿ ಎಂದು ಎಣಿಸುತ್ತೇನೆ" **(ರೋಮಾ 8:18).**

ಒಂದು ದೊಡ್ಡ ಮಹಿಮೆ ನಿಮ್ಮ ಮೇಲೆ ಪ್ರತ್ಯಕ್ಷವಾಗಲಿರುವದು. ಇದುವರೆಗೆ ಪ್ರತ್ಯಕ್ಷವಾದ ಎಲ್ಲಾ ಮಹಿಮೆಗಿಂತಲೂ ಇನ್ನು ಪ್ರತ್ಯಕ್ಷವಾಗಲಿರುವ ಮಹಿಮೆ ಶ್ರೇಷ್ಠವಾದದ್ದು. ನಿತ್ಯವಾದದ್ದು ಆಗಿರುವದು. ಅದು ಈಗಿನ ಕಷ್ಟಗಳಿಗೆ ಸಾಟಿಯಿಲ್ಲದ್ದು. ಇನ್ನು ಬರಲಿರುವ ಮಹಿಮೆ ಎಂಥದ್ದು? ನಾವೆಲ್ಲರೂ ಮುಸುಕು ತೆಗೆದಿರುವ ಮುಖದಿಂದ ಕರ್ತನ ಪ್ರಭಾವವನ್ನು ದರ್ಪಣದಲ್ಲಿ ಕಾಣಿಸುತ್ತದೋ ಎಂಬಂತೆ ದೃಷ್ಟಿಸುವವರಾಗಿದ್ದು ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ಹೋಗುತ್ತಾ ಆ ಪ್ರಭಾವದ ಸಾರೂಪ್ಯವುಳ್ಳವರೇ ಅಗುತ್ತೇವೆ (2 ಕೊರಿಂ 3:18) ಎಂದು ಸತ್ಯವೇದ ಹೇಳುತ್ತದೆ.

ಶಾಲೆಯಲ್ಲಿ ಓದುವ ಮಕ್ಕಳು, ಒಂದನೇ ತರಗತಿಯಿಂದ ಓದಿ, ಪ್ರೌಢಶಾಲೆ, ಕಾಲೇಜು ಹೀಗೆ ಹಂತಹಂತವಾಗಿ ಮೇಲೇರಿ ಉತ್ತಮವಾದ ಭವಿಷ್ಯವನ್ನು ರೂಪಿಸಿಕೊಳ್ಳುವರು. ಅದಕ್ಕಾಗಿ ಹಗಲಿರುಳು ಪ್ರಯಾಸಪಡುವರು. ಅದರಂತೆಯೇ ಒಬ್ಬ ವಿಶ್ವಾಸಿಯು ಮುಂದೆ ಪ್ರತ್ಯಕ್ಷವಾಗುವ ಮಹಿಮೆಯ ಪದವಿಯನ್ನು ನಿರೀಕ್ಷಿಸಿ ಈಗಿನ ಕಾಲದ ಕಷ್ಟಗಳನ್ನು ಸಂತೋಷದಿಂದ ಸಹಿಸಿಕೊಳ್ಳಬೇಕು. ಪ್ರಸವಕ್ಕಾಗಿ ಆಸ್ಪತ್ರೆಯಲ್ಲಿ ಸೇರಿಸಲ್ಪಡುವ ತಾಯಿ ಮುಂದೆ ಕಾಣಲಿರುವ ತನ್ನ ಮಗುವಿನ ಮುಖವನ್ನು ನಿರೀಕ್ಷಿಸಿ, ಭಯಂಕರವಾದ ಪ್ರಸವ ವೇದನೆಯನ್ನು ಸಹಿಸಿಕೊಳ್ಳುವಳು ಅಲ್ಲವೇ? ಅದೇ ಪ್ರಕಾರ ದೇವಮಹಿಮೆಯನ್ನು ಎದುರು ನೋಡುವ ಪ್ರತಿಯೊಬ್ಬ ವಿಶ್ವಾಸಿಯು ಶೋಧನೆಗಳ ಕಷ್ಟದ ಹಾದಿಯೊಳಗೆ ಸಾಗಿ ಬರಲೇಬೇಕು. ಯೇಸುಕ್ರಿಸ್ತನು ತನ್ನನ್ನು ನಂಬುವವರಿಗೆ ಕ್ರೈಸ್ತ ಮಾರ್ಗ ಹೂವಿನ ಹಾಸಿಗೆ ಎಂದು ಎಂದಿಗೂ ಹೇಳಲಿಲ್ಲ. ಈ ಲೋಕದಲ್ಲಿ ನಿಮಗೆ ಕಷ್ಟ ಉಂಟು. ಆದರೆ ನಾನು ಲೋಕವನ್ನು ಜಯಿಸಿದ್ದೇನೆ ಎಂದು ಹೇಳಿ ತನ್ನನ್ನು ನಂಬುವವರನ್ನು ಬಲಪಡಿಸುವನು. ನಾನು ಹೋಗಿ ನಿಮಗೆ ಬೇರೊಬ್ಬ ಸಹಾಯಕನನ್ನು ನಿಮ್ಮ ಬಳಿಗೆ ಕಳುಹಿಸುತ್ತೇನೆ ಎಂದು ಶಿಷ್ಯರಿಗೆ ವಾಗ್ದಾನ ಮಾಡಿದನು. ಅದರಂತೆಯೇ ಪಂಚಾಶತ್ತಮ ದಿನದಂದು ಪವಿತ್ರಾತ್ಮನನ್ನು ಕಳುಹಿಸಿದನು. ಆ ದೇವರಾತ್ಮನಿಂದ ಬಲ ಹೊಂದಿದ ಶಿಷ್ಯರು ಕರ್ತನಿಗೆ ಸಾಕ್ಷಿಗಳಾಗಿ ನಿಂತರು.

ದೇವಜನರೇ, ಕ್ರಿಸ್ತನು ಎಷ್ಟು ಕಷ್ಟ ಅನುಭವಿಸಿದನೋ ಅಷ್ಟೇ ಅಧಿಕವಾಗಿ ದೇವ ಮಹಿಮೆ ಆತನನ್ನು ಆವರಿಸಿಕೊಂಡಿತು. ಎಲ್ಲಿ ಶಿಲುಬೆ ಇಲ್ಲವೋ ಅಲ್ಲಿ ಮಹಿಮೆ ಇಲ್ಲ. (If There is no cross, there is no Glory)

***ನೆನಪಿಗೆ : "ಕ್ರಿಸ್ತನಲ್ಲಿ ನಿಮ್ಮನ್ನು ತನ್ನ ನಿತ್ಯ ಪ್ರಭಾವಕ್ಕೆ ಕರೆದ ಕೃಪಾಪೂರ್ಣನಾದ ದೇವರು ತಾನೇ ನೀವು ಸ್ವಲ್ಪಕಾಲ ಬಾಧೆಪಟ್ಟ ಮೇಲೆ ನಿಮ್ಮನ್ನು ಯೋಗ್ಯ ಸ್ಥಿತಿಗೆ ತಂದು ನೆಲೆಗೊಳಿಸಿ ಬಲಪಡಿಸುವನು" (1 ಪೇತ್ರ 5:10).***

| ಜುಲೈ 10 | ಅಬ್ರಹಾಮನೂ, ಇನ್ನು ಮುಂದೆ ಬರುವ ಮಹಿಮೆಯೂ! | ಬೆಳಿಗ್ಗೆ : ಯೋಬ 41-42<br>ಸಂಜೆ : ಅ.ಕೃ. 16:19-40 |
|---|---|---|

"ಅಬ್ರಹಾಮನು ಖಾರಾನಿನಲ್ಲಿ ವಾಸ ಮಾಡುವದಕ್ಕಿಂತ ಮುಂಚೆ ಮೆಸೊಪೊತಾಮ್ಯ ದಲ್ಲಿದ್ದಾಗ ಪ್ರಭಾವ ಸ್ವರೂಪನಾದ ದೇವರು ಅವನಿಗೆ ಕಾಣಿಸಿಕೊಂಡನು" (ಅ.ಕೃ. 7:2).

ಪ್ರಭಾವ ಸ್ವರೂಪನಾದ ದೇವರು ಮೊದಲು ಮೆಸೊಪೊತಾಮ್ಯದಲ್ಲಿ ಅಬ್ರಹಾಮನಿಗೆ ದರ್ಶನ ನೀಡಿದನು. ಅಬ್ರಹಾಮನಿಗಿಂತ ಮೊದಲು ಜೀವಿಸಿದ ಹನೋಕ, ನೋಹ ಮುಂತಾದ ದೇವಭಕ್ತರು ದೇವರೊಂದಿಗೆ ಸಂಚರಿಸಿದರೂ, ತನ್ನ ಸ್ನೇಹಿತನಾದ ಅಬ್ರಹಾಮನಿಗೇ ಪ್ರಭಾವ ಸ್ವರೂಪನಾದ ದೇವರಾಗಿ ದರ್ಶನ ನೀಡಿದನು. ಹೇಗೆ ಅಬ್ರಹಾಮನ ಸಂತತಿ ಪ್ರಭಾವವುಳ್ಳ ನಕ್ಷತ್ರಗಳಾಗಿ ಪ್ರಕಾಶಿಸಲಿರುವರು? ಎಂಬುದನ್ನು ದೇವರು ಪ್ರಕಟಿಸಿದನು. ಅದಕ್ಕೆ ಮೊದಲು ಯಾರಿಗೂ ಆ ರೀತಿಯಾದ ಪ್ರಕಟನೆಗಳು ಸಿಕ್ಕಿರಲಿಲ್ಲ.

ಅಬ್ರಹಾಮನನ್ನು ಆಶೀರ್ವದಿಸಲು ನಿಶ್ಚಯಿಸಿದ ದೇವರು, ಅವನ ಸಂತತಿಯನ್ನು ಆಕಾಶದ ನಿತ್ಯತ್ವದ, ಪ್ರಭಾವವುಳ್ಳ ನಕ್ಷತ್ರಗಳಾಗಿ ಕಂಡನು. ಕರ್ತನು ಅಬ್ರಹಾಮನನ್ನು ಹೊರಗೆ ಕರೆದುಕೊಂಡು ಹೋಗಿ – "ಆಕಾಶದ ಕಡೆಗೆ ನೋಡು, ನಕ್ಷತ್ರಗಳನ್ನು ಲೆಕ್ಕಿಸುವದು ನಿನ್ನಿಂದಾದರೆ ಲೆಕ್ಕಿಸು; ನಿನ್ನ ಸಂತಾನವು ಅಷ್ಟಾಗುವದು ಅಂದನು" (ಆದಿ 15:5). ಅಬ್ರಹಾಮನು ನಕ್ಷತ್ರಗಳಂತೆ ಮಹಿಮೆಯಾಗಿ ಕಾಣಲ್ಪಟ್ಟ ಆ ಮಕ್ಕಳನ್ನು ನೋಡುತ್ತಿರುವಾಗ, ಇದ್ದಕ್ಕಿದ್ದಂತೆ ಅವನ ಕಣ್ಣುಗಳು ಒಂದು ವಿಶೇಷವಾದ ನಕ್ಷತ್ರವನ್ನು ದೃಷ್ಟಿಸಿ ನೋಡಿತು. ಆ ವಿಶೇಷವಾದ ನಕ್ಷತ್ರ ಯಾರು ಗೊತ್ತೇ? ಆತನೇ ದಾವೀದನ ವಂಶದವನು ಆದ ಯೇಸುಕ್ರಿಸ್ತನು (ಮತ್ತಾ 1:11) (ಪ್ರಕ 22:16). ಆತನೇ ಅನೇಕರನ್ನು ಮಹಿಮೆಗೆ ಸೇರಿಸುವಾತನು. ಯೇಸುಕ್ರಿಸ್ತನ ಮೂಲಕ ನಾವೆಲ್ಲರೂ, ಪರಲೋಕದ ಸಂತತಿಯಾಗುವೆವು. ಅಬ್ರಹಾಮನ ಕೆಲವು ಸಂತತಿಗಳು ಲೋಕದಲ್ಲಿ ಬಾಳಿ ಮಣ್ಣಾಗಿ ಹೋದರು. ಆದರೆ ಯೇಸುಕ್ರಿಸ್ತನ ಸಂತತಿ, ಎಂದೆಂದಿಗೂ ಪ್ರಕಾಶಿಸುವ ನಕ್ಷತ್ರಗಳಂತೆ ಇರುವರು. ಯೇಸುಕ್ರಿಸ್ತನು ಈ ಭೂಮಿಗೆ ಬಂದಾಗ, ಅಂದು ಇದ್ದ ಯೆಹೂದ್ಯರನ್ನು ನೋಡಿ, ನಿಮ್ಮ ಮೂಲ ಪುರುಷನಾದ ಅಬ್ರಹಾಮನು ನನ್ನ ದಿನವನ್ನು ತಾನು ನೋಡೇನೆಂದು ಉಲ್ಲಾಸಪಟ್ಟನು; ಅದನ್ನು ನೋಡಿ ಸಂತೋಷಗೊಂಡನು ಅಂದನು" (ಯೋಹಾನ 8:56).

ದೇವಜನರೇ, ಅಬ್ರಹಾಮನಂತೆ, ನಾವೂ ಕರ್ತನ ವಾಕ್ಯಗಳ ಮೇಲೆ ಭರವಸೆ ಇಟ್ಟು ನಿತ್ಯರಾಜ್ಯದ ಮಹಿಮೆಯನ್ನು ಕಾಣಲು ನಮ್ಮನ್ನು ಸಿದ್ಧಪಡಿಸಿಕೊಳ್ಳೋಣ.

***ನೆನಪಿಗೆ : "ಇದಾದ ಮೇಲೆ ಪರಲೋಕದಲ್ಲಿ ದೊಡ್ಡ ಗುಂಪಿನ ಮಹಾ ಶಬ್ದವೋ ಎಂಬಂತೆ ಒಂದು ಶಬ್ದವನ್ನು ಕೇಳಿದೆನು. ಅವರು ಹಲ್ಲೆಲೂಯಾ ಜಯವೂ ಪ್ರಭಾವವೂ ಶಕ್ತಿಯೂ ನಮ್ಮ ದೇವರಲ್ಲಿ ಉಂಟು. ಆತನ ನ್ಯಾಯತೀರ್ಪುಗಳು ಸತ್ಯವೂ ನ್ಯಾಯವೂ ಆಗಿವೆ" (ಪ್ರಕ 19:1,2).***

| ಜುಲೈ 11 | ಪುನರಾಗಮನದಲ್ಲಿ ಮಹಿಮೆ! | ಬೆಳಿಗ್ಗೆ : ಕೀರ್ತ 1,2,3<br>ಸಂಜೆ : ಅ.ಕೃ. 17:1-15 |
|---|---|---|

"ಯೇಸು ಸತ್ತು ಜೀವಿತನಾಗಿ ಎದ್ದನೆಂದು ನಾವು ನಂಬಿದ ಮೇಲೆ ಅದರಂತೆ ಯೇಸುವಿನಲ್ಲಿದ್ದುಕೊಂಡು ನಿದ್ರೆ ಹೋಗುವವರನ್ನು ಸಹ ದೇವರು ಆತನೊಡನೆ ಕರೆದುಕೊಂಡು ಬರುವನು" (1 ಥೆಸ 4:14).

ಪ್ರಪಂಚದಲ್ಲಿ ನಡೆಯುತ್ತಿರುವ ಒಂದೊಂದು ಸಂಭವಗಳನ್ನು ನೋಡುವಾಗ, ಕರ್ತನ ಬರೋಣವು ಹತ್ತಿರವಾಗಿದೆ ಎಂದು ತಿಳಿಸುತ್ತಲೇ ಇರುವದು. ಪ್ರಧಾನ ದೇವದೂತನ ತುತೂರಿಯ ಶಬ್ದ ಕೇಳುವಾಗ ಕ್ರಿಸ್ತನಲ್ಲಿದ್ದುಕೊಂಡು ಸತ್ತವರು ಮೊದಲು ಮಹಿಮೆಯ ಸಾರೂಪ್ಯವಾಗಿ ಎಬ್ಬಿಸಲ್ಪಟ್ಟಿರುವರು. ಸತ್ತವರಿಗಾಗುವ ಪುನರುತ್ಥಾನವು ಅದೇ ಪ್ರಕಾರವಾಗಿರುವದು. "ದೇಹವು ಲಯಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ. ನಿರ್ಲಯಾವಸ್ಥೆಯಲ್ಲಿ ಎದ್ದು ಬರುವದು. ಹೀನಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ. ಮಹಿಮೆಯಲ್ಲಿ ಎದ್ದು ಬರುವದು; ನಿರ್ಬಲಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ. ಬಲಾವಸ್ಥೆಯಲ್ಲಿ ಎದ್ದು ಬರುವದು. ನಾವು ಮಣ್ಣಿನಿಂದ ಹುಟ್ಟಿದವನ ಸಾರೂಪ್ಯವನ್ನು ಧರಿಸಿಕೊಂಡಿರುವ ಪ್ರಕಾರ, ಪರಲೋಕದಿಂದ ಬಂದಾತನ ಸಾರೂಪ್ಯವನ್ನೂ ಧರಿಸಿಕೊಳ್ಳಬೇಕು (1 ಕೊರಿಂ 15:42,43,49) ಎಂದು ಸತ್ಯವೇದ ಹೇಳುತ್ತದೆ.

ಕ್ರಿಸ್ತನೊಳಗೆ ಸತ್ತವರನ್ನು ನಾವು ಹೂಳುವದಿಲ್ಲ, ಬಿತ್ತುತ್ತೇವೆ. ರೈತನು ಬೀಜಗಳನ್ನು ತೆಗೆದುಕೊಂಡು ಹೋಗಿ ಬಿತ್ತುವಾಗ, ತಾನು ಬಿತ್ತುವ ಬೀಜ ಒಂದು ದಿನ ಮೊಳೆತು ಎದ್ದೇಳುವದು ಎಂಬ ನಂಬಿಕೆಯೊಂದಿಗೆ ಬಿತ್ತುತ್ತಾನೆ. ಹಾಗೆಯೇ, ಕ್ರಿಸ್ತನಲ್ಲಿ ಸತ್ತವರನ್ನು ಬಿತ್ತುವಾಗ, ಮುಂದೆ ಬರಲಿರುವ ಮಹಿಮೆಯನ್ನು ನೆನಸಿ ಬಿತ್ತುತ್ತೇವೆ. ತುತೂರಿಯ ಶಬ್ದ ಕೇಳಲ್ಪಡುವಾಗ, ಬೀಜದಿಂದ ಗಿಡ ಮೊಳೆತು ಏಳುವಂತೆ ಯೇಸುಕ್ರಿಸ್ತನ ಸಾರೂಪ್ಯವನ್ನು ನಾವು ಧರಿಸಿಕೊಳ್ಳುತ್ತೇವೆ. ಯೇಸುಕ್ರಿಸ್ತನನ್ನು ಯಾರು ಜೀವದಿಂದ ಎಬ್ಬಿಸಿದರು? ಶಿಷ್ಯರು ಕದ್ದುಕೊಂಡು ಹೋಗಲಿಲ್ಲ. ದೇವದೂತರು ಆತನನ್ನು ಏಳುವಂತೆ ಮಾಡಲಿಲ್ಲ. ಪವಿತ್ರಾತ್ಮನೇ ಆತನನ್ನು ಜೀವದಿಂದ ಎಬ್ಬಿಸಿದನು. "ಯೇಸುವನ್ನು ಸತ್ತವರೊಳಗಿಂದ ಜೀವಿತನಾಗಿ ಎಬ್ಬಿಸಿದಾತನ ಆತ್ಮನು ನಿಮ್ಮಲ್ಲಿ ವಾಸವಾಗಿದ್ದರೆ ಕ್ರಿಸ್ತ ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದಾತನು ನಿಮ್ಮಲ್ಲಿ ವಾಸವಾಗಿರುವ ತನ್ನ ಆತ್ಮನ ಮೂಲಕ ನಿಮ್ಮ ಮರ್ತ್ಯದೇಹಗಳನ್ನು ಸಹ ಬದುಕಿಸುವನು" (ರೋಮಾ 8:11) ಎಂದು ಸತ್ಯವೇದ ಹೇಳುತ್ತದೆ.

ದೇವಜನರೇ, ಪವಿತ್ರಾತ್ಮನು ನಿಮ್ಮನ್ನು ಜೀವದಿಂದ ಎಬ್ಬಿಸುವಾತನಾಗಿರುವದರಿಂದ, ಯಾವಾಗಲೂ ಪವಿತ್ರಾತ್ಮನಲ್ಲಿ ನೆಲೆಗೊಂಡಿರ್ರಿ. ಆತ್ಮೀಕ ಸಭೆಗಳೊಂದಿಗೆ ಅನ್ಯೋನ್ಯತೆಯಿಂದ ಇರ್ರಿ. ನಿಮ್ಮ ಆಂತರ್ಯ ಯಾವಾಗಲೂ ಪವಿತ್ರಾತ್ಮನಿಂದ ತುಂಬಿ ಹೊರಸೂಸಲಿ.

***ನೆನಪಿಗೆ : "ಕ್ರಿಸ್ತನು ಪ್ರತ್ಯಕ್ಷನಾದರೆ ನಾವು ಆತನ ಹಾಗಿರುವೆವೆಂದು ಬಲ್ಲೆವು; ಯಾಕೆಂದರೆ ಆತನಿರುವ ಪ್ರಕಾರವೇ ಆತನನ್ನು ನೋಡುವೆವು" (1 ಯೋಹಾನ 3:2).***

| ಜುಲೈ 12 | ಸಾವಿರ ವರುಷ ಆಳ್ವಿಕೆ! | ಬೆಳಗ್ಗೆ : ಕೀರ್ತನೆ 4,5,6<br>ಸಂಜೆ : ಅ.ಕೃ. 17:16-34 |
|---|---|---|

"ಭೂಮಂಡಲವೆಲ್ಲಾ ಆತನ ಪ್ರಭಾವದಿಂದ ತುಂಬಿದೆ ಎಂದು ಕೂಗಿ ಹೇಳಿದನು" (ಯೆಶಾ 6:3).

ಯೇಸುಕ್ರಿಸ್ತನು ಮೊದಲಿನಂತೆ, ಮರಿಯಳ ಮಗನಾಗಿ ಬಾಲಕನಾಗಿ ಇನ್ನು ಮುಂದೆ ಬರುವದಿಲ್ಲ. ರಾಜಾಧಿರಾಜನಾಗಿ, ಕರ್ತಾಧಿಕರ್ತನಾಗಿ ತಂದೆಯ ಮಹಿಮೆಯನ್ನು ಪಡೆದವನಾಗಿ ಮಹಿಮೆಯಾದ ದೇವದೂತರೊಂದಿಗೆ ಬರುವನು. "ಮನುಷ್ಯಕುಮಾರನು ಬಲದಿಂದಲೂ ಬಹು ಮಹಿಮೆಯಿಂದಲೂ ಆಕಾಶದ ಮೇಘಗಳ ಮೇಲೆ ಬರುವದನ್ನು ಕಾಣುವರು" (ಮತ್ತಾ 24:30) ಎಂದು ಸತ್ಯವೇದವು ಹೇಳುವದು. ಆದ್ದರಿಂದಲೇ ದಾವೀದನು ಹೇಳುತ್ತಾನೆ – "ದ್ವಾರಗಳೇ ಉನ್ನತವಾಗಿರ್ರಿ; ಪುರಾತನವಾದ ಕದಗಳೇ, ತೆರೆದುಕೊಂಡಿರ್ರಿ; ಮಹಾ ಪ್ರಭಾವವುಳ್ಳ ಅರಸನು ಆಗಮಿಸುತ್ತಾನೆ" ಎಂದು (ಕೀರ್ತನೆ 24:7).

ಯೇಸುಕ್ರಿಸ್ತನು ಈ ಭೂಮಿಗೆ ಬರುವಾಗ ಹೇಗೆ ಸಮುದ್ರವು ನೀರಿನಿಂದ ತುಂಬಿರುವದೋ, ಹಾಗೆಯೇ ಈ ಪ್ರಪಂಚವು ಕರ್ತನನ್ನು ಅರಿಯುವ ಜ್ಞಾನದಿಂದಲೂ, ಮಹಿಮೆಯಿಂದಲೂ, ತುಂಬಿರುವದು. ಯೇಸುಕ್ರಿಸ್ತನು ಮಹಿಮೆಯ ರಾಜನಾಗಿ ಸಾವಿರ ವರುಷ ಆಳ್ವಿಕೆ ನಡೆಸುವನು. ನಾವೆಲ್ಲರೂ ಆತನ ಕುಮಾರರೂ, ಕುಮಾರಿಯರೂ ಆಗಿ ರೂಪಾಂತರಗೊಳ್ಳುವೆವು. ಮಹಿಮ ಶರೀರದೊಂದಿಗೆ ಕ್ರಿಸ್ತನೊಂದಿಗೆ ಸಾವಿರ ವರುಷ ಆಳ್ವಿಕೆ ಮಾಡುವೆವು. ಆ ವರುಷಗಳಲ್ಲಿ ಸೈತಾನನು ಕಟ್ಟಲ್ಪಟ್ಟಿರುವದರಿಂದ ಕ್ರಿಸ್ತನ ಆಳ್ವಿಕೆಗೆ ಯಾವ ತೊಡಕೂ ಇರುವದಿಲ್ಲ. "ಪಿಶಾಚನೂ ಸೈತಾನನೂ ಆಗಿರುವ ಪುರಾತನ ಸರ್ಪನೆಂಬ ಘಟಸರ್ಪನನ್ನು ಹಿಡಿದು ಸಾವಿರ ವರುಷ ಬಂಧನದಲ್ಲಿಟ್ಟನು. ಆ ಸಾವಿರ ವರುಷ ತೀರುವ ತನಕ ಸೈತಾನನು ಇನ್ನೂ ಜನಗಳನ್ನು ಮರುಳುಗೊಳಿಸದ ಹಾಗೆ ದೇವದೂತರು ಅವನನ್ನು ಅಧೋಲೋಕದಲ್ಲಿ ದೊಬ್ಬಿ ಬಾಗಿಲು ಮುಚ್ಚಿ ಅದಕ್ಕೆ ಮುದ್ರೆ ಹಾಕಿದನು" ಎಂದು ಪ್ರಕಟನೆ ಗ್ರಂಥ 20:2,3 ನೇ ವಾಕ್ಯಗಳಲ್ಲಿ ಓದುತ್ತೇವೆ. ಯೆಶಾಯನ ಪ್ರವಾದನಾ ಗ್ರಂಥ 11 ಹಾಗೂ 35ನೇ ಅಧ್ಯಾಯಗಳನ್ನು ಓದಿ ನೋಡಿ. ಆ ಸಾವಿರ ವರುಷ ಆಳ್ವಿಕೆಯಲ್ಲಿ ಪ್ರಪಂಚವು ಎಷ್ಟು ಸಂತೋಷದಿಂದಿರುವದೆಂದು ತಿಳಿಯುವಿರಿ.

ದೇವಜನರೇ, ರಾಜಾಧಿರಾಜನಾದ ಕ್ರಿಸ್ತನೊಂದಿಗೆ ನೀವು ಆಳ್ವಿಕೆ ನಡೆಸಲಿರುವಿರಿ. ಆದಾಮನಿಂದ ಏಳನೇ ತಲೆಮಾರಿನಲ್ಲಿ ಹುಟ್ಟಿದ ಹನೋಕನೂ ದೇವರೊಂದಿಗೆ ಸಂಚರಿಸುತ್ತಿದ್ದಂತೆ, ನಾನೂ, ನೀವೂ ದೇವರೊಂದಿಗೆ ಸಂಚರಿಸಿ ಆನಂದಿಸೋಣ. ಆತನ ಮಹಿಮೆಯಿಂದ ಯಾವಾಗಲೂ ತುಂಬಲ್ಪಟ್ಟವರಾಗಿ ಆತನೊಂದಿಗೆ ಆಳ್ವಿಕೆ ನಡೆಸುವದು ಎಷ್ಟೊಂದು ಮಹಿಮೆಯಾದ ಅನುಭವವಾಗಿರುವದು.

*ನೆನಪಿಗೆ : "ದೇವಪುತ್ರರ ಮಹಿಮೆಯು ಯಾವಾಗ ಪ್ರತ್ಯಕ್ಷವಾದೀತೆಂದು ಜಗತ್ತು ಬಹು ಲವಲವಿಕೆಯಿಂದ ಎದುರು ನೋಡುತ್ತಿರುವದು. (ರೋಮಾ 8:19).*

| ಜುಲೈ 13 | ಪರಲೋಕದಲ್ಲಿ ಮಹಿಮೆ! | ಬೆಳಿಗ್ಗೆ : ಕೀರ್ತ 7,8,9<br>ಸಂಜೆ : ಅ.ಕೃ. 18 |
|---|---|---|

"ಯೆರೂಸಲೇಮೆಂಬ ಪರಿಶುದ್ದ ಪಟ್ಟಣವು ದೇವರ ತೇಜಸ್ಸುಳ್ಳದ್ದಾಗಿ ಪರಲೋಕದೊಳಗಿಂದ ದೇವರ ಕಡೆಯಿಂದ ಇಳಿದು ಬರುವದನ್ನು ನನಗೆ ತೋರಿಸಿದನು" (ಪ್ರಕ 21:10).

ಸಾವಿರ ವರುಷ ಆಳ್ವಿಕೆಯ ನಂತರ, ಈ ಪ್ರಪಂಚವು ಅಗ್ನಿಗೆ ಆಹುತಿಯಾಗುವದು. ಅದರ ನಂತರ ನಾವು ದೇವರ ನ್ಯಾಯಾಸನದ ಮುಂದೆ ನಿಂತು, ಆತನು ಕೊಡುವ ಹಲವು ರೀತಿಯ ಸನ್ಮಾನಗಳನ್ನು ಪಡೆಯುವೆವು. ಕೆಲವರಿಗೆ ಬಾಡದ ಜಯಮಾಲೆ, ಕೆಲವರಿಗೆ ಜೀವವೆಂಬ ಜಯಮಾಲೆ, ಕೆಲವರಿಗೆ ಮಹಿಮೆಯೆಂಬ ಜಯಮಾಲೆ, ಹೀಗೆ ಅವನವನ ನಡತೆಗೆ ತಕ್ಕಂತೆ ಪ್ರತಿಫಲವನ್ನು ಕೊಡುವನು (ಪ್ರಕ 22:12).

ಮಹಿಮೆ ಹೊಂದಿದ ಪರಿಶುದ್ಧ ನಗರವಾದ ಪರಮ ಯೆರೂಸಲೇಮಿಗೆ ಕರ್ತನು ನಮ್ಮನ್ನು ಕರೆದುಕೊಂಡು ಹೋಗುವನು. ಅದು ತನ್ನ ಪತಿಗಾಗಿ ಅಲಂಕರಿಸಿಕೊಂಡ ಮದಲಗಿತ್ತಿಯಂತೆ ಶೃಂಗರಿಸಲ್ಪಟ್ಟಿರುವದು. ಮಹಿಮೆ ಹೊಂದಿದ ಭಕ್ತರು ಅಲ್ಲಿ ಬಹಳ ಸಂತೋಷದಿಂದ ಕೂಡಿದವರಾಗಿ ಬರುವರು. ಪರಲೋಕ ರಾಜ್ಯವೆಲ್ಲಾ ಪೂರ್ಣಪಟ್ಟ ಭಕ್ತರಿಂದ ತುಂಬಿರುವದು. ಅಲ್ಲಿಯ ಸ್ತುತಿ ಆರಾಧನೆಗಳನ್ನು ಸ್ತೋತ್ರ ಆರಾಧನೆಗಳನ್ನು ಬಾಯಿಂದ ವರ್ಣಿಸಲಾಗದು. ನಂತರ ಯೇಸುಕ್ರಿಸ್ತನು ತಾನೇ ನಮಗಾಗಿ ಸಿದ್ಧ ಮಾಡಿದ ಮಹಿಮೆಯಾದ ವಾಸ ಸ್ಥಳಗಳಿಗೆ ಕರೆದುಕೊಂಡು ಹೋಗುವನು. ಈ ಭೂಮಿಯಲ್ಲಿ ನಾವು ಸ್ವಲ್ಪ ಕಾಲ ಕರ್ತನಿಗಾಗಿ ಕಷ್ಟಗಳನ್ನು, ಉಪದ್ರವಗಳನ್ನು, ನಿಂದೆಗಳನ್ನೂ, ಅವಮಾನಗಳನ್ನೂ ಅನುಭವಿಸಬಹುದು. ಆದರೂ, ಈ ಕಾಲದ ಸಂಕಟಗಳು ಇನ್ನು ಮುಂದೆ ಕಾಣಲ್ಪಡಲಿರುವ ಮಹಿಮೆಗೆ ಸಾಟಿಯಾದವುಗಳಲ್ಲ. ಪಟ್ಟಣಕ್ಕೆ ಬೆಳಕನ್ನು ಕೊಡುವದಕ್ಕಾಗಿ ಸೂರ್ಯನಾಗಲಿ, ಚಂದ್ರನಾಗಲಿ ಬೇಕಾಗಿಲ್ಲ. ಅದಕ್ಕೆ ದೇವರ ಪ್ರಭಾವವೇ ಬೆಳಕನ್ನು ಕೊಟ್ಟಿತು. ಯಜ್ಞದ ಕುರಿಯಾದಾತನೇ ಅದರ ದೀಪವು" (ಪ್ರಕ 21:23) ಎಂದು ಸತ್ಯವೇದ ಹೇಳುತ್ತದೆ. ಮಹಿಮೆಯ ಅರಸನಾದ ಕರ್ತನ ಕುಟುಂಬ ಬಹಳ ದೊಡ್ಡದು. ಅಲ್ಲಿ ಮಹಿಮೆಯಾದ ಕೆರೂಬಿಗಳೂ, ಸೆರಾಫಿಗಳೂ, ದೇವದೂತರೂ ಇರುವರು. ಹಳೆ ಒಡಂಬಡಿಕೆಯ, ಹೊಸ ಒಡಂಬಡಿಕೆಯ ಭಕ್ತರು ಅಲ್ಲಿ ಹಾಡಿಪಾಡಿ ಆನಂದಿಸುವರು. ಯಜ್ಞದ ಕುರಿಯಾದಾತನ ಮಹಿಮೆ. ಅಲ್ಲಿ ಪ್ರಕಾಶಿಸುವದು ಮಾತ್ರವಲ್ಲ, ನೀತಿವಂತರು ತಮ್ಮ ತಂದೆಯ ರಾಜ್ಯದಲ್ಲಿ ಸೂರ್ಯನಂತೆ ಪ್ರಕಾಶಿಸುವರು (ಮತ್ತಾ 13:43).

ದೇವಜನರೇ, ಅನೇಕರೊಂದಿಗೆ ನನ್ನನ್ನೂ ತನ್ನ ಮಹಿಮೆಯಲ್ಲಿ ಸೇರಿಸುವಂತೆ ಆತನು ನನಗಾಗಿ ಶ್ರಮೆಯನ್ನು ತಾಳಿದನು (ಇಬ್ರಿ 2:10)."ಆತನ ಕಷ್ಟಗಳ ಫಲದಿಂದ ಪರಲೋಕದಲ್ಲಿರುವೆನು" ಎಂದು ಅರಿತು ಕರ್ತನನ್ನು ಸ್ತುತಿಸಿ ಆನಂದಿಸೋಣ.

***ನೆನಪಿಗೆ : "ಸೂರ್ಯನ ಮಹಿಮೆ ಒಂದು ವಿಧ. ಚಂದ್ರನ ಮಹಿಮೆ ಮತ್ತೊಂದು ವಿಧ. ನಕ್ಷತ್ರಗಳ ಮಹಿಮೆ ಇನ್ನೊಂದು ವಿಧ. ಮಹಿಮೆಯಲ್ಲಿ ಒಂದು ನಕ್ಷತ್ರಕ್ಕೂ ಇನ್ನೊಂದು ನಕ್ಷತ್ರಕ್ಕೂ ಹೆಚ್ಚು ಕಡಿಮೆಯುಂಟಷ್ಟೆ' (1 ಕೊರಿಂ 15:41).***

| ಜುಲೈ 14 | ಪೂರ್ಣ ಮಹಿಮೆ! | ಬೆಳಿಗ್ಗೆ : ಕೀರ್ತನೆ 10,11,12<br>ಸಂಜೆ : ಅ.ಕೃ. 19:1-20 |
|---|---|---|

"ಅಂತಃಪುರದಲ್ಲಿ ರಾಜಕುಮಾರಿಯು ಎಷ್ಟೋ ವೈಭವದಿಂದಿದ್ದಾಳೆ. ಆಕೆಯು ಜರತಾರಿಯ ವಸ್ತ್ರವನ್ನು ಧರಿಸಿಕೊಂಡಿದ್ದಾಳೆ" (ಕೀರ್ತನೆ 45:13).

ದಾವೀದನ ಕೀರ್ತನೆಗಳಲ್ಲಿ 45ನೇ ಕೀರ್ತನೆ ಒಂದು ವಿಶೇಷವಾದ ಕೀರ್ತನೆಯಾಗಿದೆ. ಇದು ಕ್ರಿಸ್ತನನ್ನು ಕುರಿತು ಮದುವಣಗಿತ್ತಿಯಾದ ಸಭೆಯನ್ನು ಕುರಿತು ಪ್ರವಾದನೆಯ ಕೀರ್ತನೆಯಾಗಿದೆ. ಇದರಲ್ಲಿ ಕ್ರಿಸ್ತನನ್ನೂ, ಮದುವಣಗಿತ್ತಿಯನ್ನೂ, ಪೂರ್ಣ ಮಹಿಮೆಯುಳ್ಳವರಾಗಿ ಕಾಣುತ್ತೇವೆ. ಈ ಕೀರ್ತನೆ ನಮ್ಮನ್ನು ಕ್ರಿಸ್ತನ ಪೂರ್ಣತೆಯೊಳಗೂ, ಸಂಪೂರ್ಣತೆಯೊಳಗೂ ಬೆಳೆಯಲು ಮಾರ್ಗ ತೋರಿಸುವದು.

"ಶೂರನೇ, ಮಹಿಮ ಪ್ರಭಾವಗಳನ್ನು ಧರಿಸಿಕೊಂಡು ಸೊಂಟಕ್ಕೆ ಪಟ್ಟದ ಕತ್ತಿಯನ್ನು ಕಟ್ಟಿಕೋ. ಸತ್ಯತೆ ದೈನ್ಯ ನೀತಿಗಳನ್ನು ಸ್ಥಾಪಿಸುವದಕ್ಕಾಗಿ ಆಡಂಬರದಿಂದ ವಾಹನಾರೂಢನಾಗಿ ವಿಜಯೋತ್ಸವದೊಡನೆ ಹೊರಡೋಣವಾಗಲಿ" (ಕೀರ್ತ 45:3–4) ಎಂದು ಕೀರ್ತನೆಗಾರನು ವರ್ಣಿಸುತ್ತಾನೆ. ಕ್ರಿಸ್ತನು ತನ್ನ ಅಂತರಂಗ ಜೀವಿತದಲ್ಲೂ ಬಾಹ್ಯ ಜೀವಿತದಲ್ಲೂ, ಮಹಿಮೆಯಿಂದ ಕೂಡಿದವನಾಗಿದ್ದನು. ರೂಪಾಂತರ ಬೆಟ್ಟದಲ್ಲಿ ಆತನು ಪ್ರಾರ್ಥಿಸಿದಾಗ, ಪರಲೋಕದ ಮಹಿಮೆ ಆತನಲ್ಲಿ ಇಳಿದು ಬಂತು. ಆತನ ಮುಖವು ಸೂರ್ಯನಂತೆ ಪ್ರಕಾಶಿಸಿತು. ಆತನ ಪುನರಾಗಮನದಲ್ಲಿ ಆತನು ತಂದೆಯ ಮಹಿಮೆಯಿಂದ ಕೂಡಿದವನಾಗಿ ಬರುವನು. ಮಹಿಮೆಯಾದ ದೇವದೂತರೊಂದಿಗೆ ಬರುವನು. ಆ ಮಹಿಮೆಯ ಪ್ರಕಾಶ ಎಷ್ಟು ದೊಡ್ಡದಾಗಿರುವದು! ಕ್ರಿಸ್ತನನ್ನು ಮಹಿಮೆಯ ರಾಜನನ್ನಾಗಿ ಸಂಧಿಸಲಿರುವ ಮದುವಣಗಿತ್ತಿ ಎಷ್ಟು ಮಹಿಮೆಯಿಂದ ಕೂಡಿದವಳಾಗಿರಬೇಕು! ಪ್ರಕಟನೆ ಗ್ರಂಥ 19:7 ರಲ್ಲಿ "ಯಜ್ಞದ ಕುರಿಯಾದಾತನ ವಿವಾಹ ಕಾಲವು ಬಂತು; ಆತನಿಗೆ ವಿವಾಹವಾಗುವ ಕನ್ಯೆ ತನ್ನನ್ನು ಸಿದ್ಧಪಡಿಸಿಕೊಂಡಿದ್ದಾಳೆ" ಎಂದು ಬರೆಯಲ್ಪಟ್ಟಿದೆ. ನಿಮ್ಮ ಆತ್ಮ ಪ್ರಾಣಗಳಲ್ಲಿ ಕೆಲವು ಅಶುದ್ಧತೆಗಳು ಸೇರಿಕೊಂಡಿರಬಹುದು. ಕೆಲವು ಕೊರತೆಗಳು ಇರಬಹುದು. ನಿಮ್ಮ ಆಂತರ್ಯ ಪೂರ್ಣ ಮಹಿಮೆಯನ್ನು ಬಯಸಲಿ. ದೇವಮಕ್ಕಳ ಆಂತರ್ಯದಾಳದಲ್ಲಿ "ಕಿಸ್ತನಂತೆ ಮಹಿಮೆಯ ಮೇಲೆ ಮಹಿಮೆ ಹೊಂದಬೇಕು. ಕ್ರಿಸ್ತನ ಸಾರೂಪ್ಯವನ್ನು ಹೊಂದಬೇಕು ಎಂಬ ದಾಹವೂ, ನಿರೀಕ್ಷೆಯೂ ಇರಬೇಕಾದದ್ದು ಅವಶ್ಯ.

ದೇವಜನರೇ ನೀವು ಪೂರ್ಣ ಮಹಿಮೆಯಿಂದ ಕಾಣಲ್ಪಡುವ ಮದುವಣಗಿತ್ತಿಯಾಗಿರುವಂತೆ ಕರೆಯಲ್ಪಟ್ಟಿರುವಿರಿ. ನೀವೂ ಪೂರ್ಣ ಮಹಿಮೆಯನ್ನು ಬಯಸಿ ಅನುದಿನವೂ ಕರ್ತನ ಮಾರ್ಗದಲ್ಲಿ ಸಾಗಿರಿ. ನಿಮ್ಮ ಆತ್ಮೀಕ ಕಣ್ಣುಗಳು ಮಹಿಮೆ ಹೊಂದಿದ ಹೊಸ ಯೆರೂಸಲೇಮನ್ನು ದೃಷ್ಟಿಸಲಿ. ಯಾಕೆಂದರೆ ನಿಮ್ಮ ವಾಸಸ್ಥಳವೋ ಪರಲೋಕದಲ್ಲಿರುವದು (ಫಿಲಿ 3:20).

***ನೆನಪಿಗೆ : "ನನ್ನ ಜೀವಮಾನದಲ್ಲೆಲ್ಲಾ ಯೆಹೋವನ ಮನೆಯಲ್ಲಿ ವಾಸ ಮಾಡುತ್ತಾ, ಆತನ ಪ್ರಸನ್ನತೆಯನ್ನು ನೋಡುವದಕ್ಕೂ ಆತನ ಮಂದಿರದಲ್ಲಿ ಧ್ಯಾನ ಮಾಡುವದಕ್ಕೂ ನನಗೆ ಅಪ್ಪಣೆಯಾಗಬೇಕೆಂಬ ಒಂದೇ ವರವನ್ನು ಯೆಹೋವನಿಂದ ಕೇಳಿಕೊಂಡು ಅದನ್ನೇ ಎದುರು ನೋಡುತ್ತಿರುವೆನು" (ಕೀರ್ತ 27:4).***

| ಜುಲೈ 15 | ದಯ ಮಾಡಿ ತೋರಿಸು! | ಬೆಳಗ್ಗೆ : ಕೀರ್ತನೆ 13,14,15<br>ಸಂಜೆ : ಅ.ಕೃ. 19:21-41 |
|---|---|---|

"ಅದಕ್ಕೆ ಮೋಶೆ – ನಿನ್ನ ಮಹಿಮೆಯನ್ನು ದಯಮಾಡಿ ನನಗೆ ತೋರಿಸು ಎಂದು ಕೇಳಿದನು" (ವಿಮೋ33:18).

ಇಸ್ರಾಯೇಲ್ಯರನ್ನು ಮಾರ್ಗ ನಡಿಸಿದ ಮೋಶೆಯ ಹೃದಯದ ಹಂಬಲ ದೇವರ ಮಹಿಮೆಯನ್ನು ಕಾಣಬೇಕೆಂಬುದೇ ಆಗಿತ್ತು. ಆ ದೇವ ಮಹಿಮೆಯನ್ನು ನೋಡಬೇಕು, ಅನುಭವಪೂರ್ವಕವಾಗಿ ರುಚಿಸಬೇಕೆಂಬುದು ಅವನ ಆಶೆಯಾಗಿತ್ತು.

ಮೋಶೆ ಐಗುಪ್ತದಲ್ಲಿ ದೇವರ ಬಲವಾದ ಅದ್ಭುತಗಳನ್ನು ಸೂಚಕಕಾರ್ಯಗಳನ್ನು ಕಂಡಿದ್ದನು. ಕೆಂಪು ಸಮುದ್ರವು ಇಬ್ಭಾಗವಾಗಿ ಇಸ್ರಾಯೇಲ್ಯರಿಗೆ ದಾರಿ ಮಾಡಿಕೊಟ್ಟಿದ್ದನ್ನೂ, ಅದೇ ಸಮುದ್ರ ಐಗುಪ್ತ್ಯರನ್ನು ಮುಳುಗಿಸಿಬಿಟ್ಟದ್ದನ್ನೂ ಕಂಡಿದ್ದನು. ನಂತರ ಮೇಘ ಸ್ತಂಭ, ಅಗ್ನಿ ಸ್ತಂಭಗಳನ್ನು, ಆಕಾಶದಿಂದ ಮನ್ನ ಸುರಿದದ್ದನ್ನೂ, ಬಂಡೆಯೊಳಗಿಂದ ನೀರು ಉಕ್ಕಿ ಬಂದದ್ದನ್ನೂ ಕಂಡು ಸಂತೋಷಿಸಿದ್ದನು. ಆದರೆ ದೇವರ ಮಹಿಮೆಯನ್ನು ಕಾಣಲು ಅವನ ಆತ್ಮ ತುಡಿಯುತ್ತಿತ್ತು. ಯಾವ ಒಬ್ಬ ಮನುಷ್ಯನೂ ದೇವರ ಪ್ರಭಾವವನ್ನು ನೋಡಿ ಜೀವದಿಂದ ಇರುವದು ಸಾಧ್ಯವಿಲ್ಲ. ಆ ಮಹಿಮೆಯನ್ನು ತಾಳಿಕೊಳ್ಳುವ ಶಕ್ತಿ ಮನುಷ್ಯನ ಕಣ್ಣುಗಳಿಗೆ ಇಲ್ಲ. ಒಬ್ಬ ಮನುಷ್ಯನು ಸೂರ್ಯನನ್ನು ಐದು ನಿಮಿಷಗಳ ಕಾಲ ಎಡೆಬಿಡದೆ ಒಂದೇ ಸಮನೆ ನೋಡಿದರೆ ಸಾಕು. ಅವನ ಕಣ್ಣುಗಳು ಕುರುಡಾಗಿ ಬಿಡುವದು. ಹಾಗಾದರೆ ನೀತಿಸೂರ್ಯನಾದ ದೇವರ ಮಹಿಮೆಯನ್ನು ಮನುಷ್ಯನು ನೋಡಿ ಜೀವದಿಂದಿರುವದು ಹೇಗೆ ಸಾಧ್ಯ? ಆದ್ದರಿಂದಲೇ ಕರ್ತನ ಮುಂದೆ ನಿಂತಿದ್ದ ಸೆರಾಫಿಯರು, ತಮ್ಮ ಎರಡು ರೆಕ್ಕೆಗಳಿಂದ ತಮ್ಮ ಮುಖಗಳನ್ನು ಮುಚ್ಚಿಕೊಂಡಿದ್ದರು (ಯೆಶಾ 6:2). ಕರ್ತನು ಮೋಶೆಗೆ ತನ್ನ ಮಹಿಮೆಯನ್ನು ತೋರಿಸಲು ನಿಶ್ಚಯಿಸಿದಾಗ, ತನ್ನ ಮಹಿಮೆಯನ್ನು ತಾನೇ ಮೊಟಕುಗೊಳಿಸಿ, ಒಂದು ರೀತಿಯ ಮಹಿಮೆಯನ್ನು ತೋರಿಸಿದನು. ದೇವಭಕ್ತರು, ತಮ್ಮ ಆತ್ಮೀಕ ಬೆಳಕಿಗೆ ತಕ್ಕಂತೆ ದೇವ ಮಹಿಮೆಯನ್ನು ದರ್ಶಿಸುವರು. ಕರ್ತನು ಮೋಶೆಯ ಬಳಿ "ನನ್ನ ಸರ್ವೋತ್ತಮತ್ವವನ್ನು ನಿನ್ನೆದುರಾಗಿ ದಾಟಿ ಹೋಗುವಂತೆ ಮಾಡುವೆನು; ಯೆಹೋವನ ನಾಮದ ಮಹತ್ವವನ್ನು ನಿನ್ನೆದುರಾಗಿ ಪ್ರಕಟಿಸುವೆನು. ಯಾವನ ಮೇಲೆ ದಯೆಯಿಡುವೆನೋ ಅವನ ಮೇಲೆ ದಯ ಇಡುವೆನು; ಯಾರನ್ನು ಕರುಣಿಸುವೆನೋ ಅವರನ್ನು ಕರುಣಿಸುವೆನು ಅಂದನು" (ವಿಮೋ 33:19). ಕರ್ತನು ತನ್ನ ಮಹಿಮೆಯನ್ನು ಮೋಶೆಗೆ ತೋರಿಸುವ ಮೊದಲು ತನ್ನ ದಯೆಯೆಲ್ಲವೂ ಸಾಗಿ ಹೋಗುವಂತೆ ಮಾಡಿದನು. ಇದು ಮೊದಲನೆಯ ಮಹಿಮೆ. ಕರ್ತನ ನಾಮ ಎರಡನೇ ಮಹಿಮೆ. ಆತನ ಕೃಪೆ ಮೂರನೇ ಮಹಿಮೆ. ನಾಲ್ಕನೆಯ ಮಹಿಮೆ ದೇವರ ಕರುಣೆ ಅಥವಾ ಕನಿಕರ.

ದೇವಜನರೇ, ನಿಮ್ಮ ಪ್ರಾರ್ಥನೆಯ ಎದುರಾಗಿ ಈ ನಾಲ್ಕು ಮಹಿಮೆಯೂ ನಿಮ್ಮನ್ನು ಆವರಿಸಿಕೊಳ್ಳಲಿ. ಸಾಕಷ್ಟು ಕರ್ತನ ಮಹಿಮೆ ಇಳಿದು ಬರುವ ಮೊದಲು ಆತನ ಪ್ರಸನ್ನತೆ ನಿಮ್ಮ ಮೇಲೆ ಇಳಿದು ಬರುವದು. ಆಗ ಆತನ ನಾಲ್ಕು ಮಹಿಮೆಗಳನ್ನು ಅನುಭವಿಸುವಿರಿ.

***ನೆನಪಿಗೆ : ''ಯೆಹೋವನು ಮೋಶೆಯ ಎದುರಾಗಿ ಹೋಗುತ್ತಾ....., ಯೆಹೋವ ಯೆಹೋವ ಕನಿಕರವೂ ದಯೆಯೂ ಉಳ್ಳ ದೇವರು ದೀರ್ಘ ಶಾಂತನೂ, ಪ್ರೀತಿಯೂ, ನಂಬಿಕೆಯೂ ಉಳ್ಳವನು'' (ವಿಮೋ 34:6).***

| ಜುಲೈ 16 | ಒಂದು ಸ್ಥಳವಿದೆ! | ಬೆಳಿಗ್ಗೆ : ಕೀರ್ತನೆ 16,17<br>ಸಂಜೆ : ಅ.ಕೃ. 20:1-12 |
|---|---|---|

"ಇಲ್ಲಿ ನನ್ನ ಸಮೀಪದಲ್ಲೇ ಒಂದು ಸ್ಥಳವಿದೆ; ನೀನು ಈ ಬಂಡೆಯ ಮೇಲೆಯೇ ನಿಂತಿರಬೇಕು. ನನ್ನ ಪ್ರಭಾವವು ನಿನ್ನೆದುರಾಗಿ ದಾಟಿ ಹೋಗುವ ಕಾಲದಲ್ಲಿ ನಾನು ಈ ಬಂಡೆಯ ಸಂದಿನಲ್ಲಿ ನಿನ್ನನ್ನು ಇರಿಸಿ ನಿನ್ನ ಮುಂದೆ ದಾಟಿ ಹೋಗುವ ತನಕ ನಿನ್ನ ಮೇಲೆ ಕೈ ಮುಚ್ಚುವೆನು" (ವಿಮೋ 33:21,22).

ದೇವರು ಮೋಶೆಗೆ ತನ್ನ ಪ್ರಭಾವವನ್ನು ತೋರಿಸಿದಾಗ ತನ್ನ ತ್ರಯೇಕತ್ವವನ್ನು ಪ್ರಕಟಿಸಿದನು. ಇಲ್ಲಿ ಮೊದಲನೆಯದಾಗಿ ಬಂಡೆಯಾದ ತಂದೆ ದೇವರನ್ನು ನೋಡುತ್ತೇವೆ. ಎರಡನೆಯದಾಗಿ ಕೈಗಳನ್ನು ಮುಚ್ಚುವ ದೇವರನ್ನು ನೋಡುತ್ತೇವೆ. ಮೂರನೆಯದಾಗಿ ಪ್ರಭಾವದಿಂದ ದಾಟಿ ಹೋಗುವ ದೇವರನ್ನು ನೋಡುತ್ತೇವೆ. ಈ ಮೂಲಕ ಕರ್ತನು ಮೋಶೆಗೆ ಪ್ರಭಾವದ ಪ್ರಕಟನೆ ನೀಡಲು ನಿಶ್ಚಯಿಸಿದನು.

ಕರ್ತನು ಯಾವಾಗಲೂ ನಿಮ್ಮ ಬಳಿ, "ನನ್ನ ಮಗನೇ, ಮಗಳೇ, ನನ್ನ ಬಳಿ ಒಂದು ಸ್ಥಳವಿದೆ, ನೀನು ಆ ಬಂಡೆಯ ಮೇಲೆ ನಿಲ್ಲು" ಎಂದು ಪ್ರೀತಿಯಿಂದ ಕರೆಯುವನು. ಸಮಸ್ಯೆಗಳ, ಹೋರಾಟಗಳ ಮಧ್ಯದಲ್ಲೂ ಕರ್ತನ ಬಳಿ ನಿಮಗೆ ನಿಶ್ಚಯವಾಗಿ ಒಂದು ಸ್ಥಳ ಉಂಟು. ನಿಮಗೆ ಆಶ್ರಯ ಉಂಟು. ಆ ಬಂಡೆ ಕ್ರಿಸ್ತನೇ ಎಂದು 1 ಕೊರಿಂಥ 10:4 ರಲ್ಲಿ ಓದುತ್ತೇವೆ. ಆ ಬಂಡೆ ಜೀವ ಜಲವನ್ನು ಹರಿಸಿದ ದೈವೀಕ ಬಂಡೆ. ಬಂಡೆಯ ಸೀಳು ಎಂಬುದು ಕ್ರಿಸ್ತನ ಗಾಯಗಳಾಗಿದೆ. ನಿಮ್ಮನ್ನು ತನ್ನೊಳಗೆ ಮರೆ ಗಾಯಗಳೊಳಗೆ ಇರುವದಾದರೆ ಮಾತ್ರ ಆತನ ರಕ್ತದ ಪುಣ್ಯದ ಮೂಲಕವಾಗಿ ದೇವರ ಪ್ರಭಾವದ ಹತ್ತಿರ ಸೇರಲು ಸಾಧ್ಯ. ಆತನು ನಿಮ್ಮನ್ನು ಬಹಳವಾದ ಪ್ರೀತಿಯಿಂದ ಬಂಡೆಯ ಬಿರುಕುಗಳಲ್ಲಿಯೂ, ಜರಿಯ ಮರೆಯಲ್ಲಿರುವ ನನ್ನ ಪಾರಿವಾಳವೇ! ಎಂದು ಕರೆಯುವನು (ಪ.ಗೀ. 2:14). ಸೈನಿಕರಲ್ಲಿ ಒಬ್ಬನು ಯೇಸುಕ್ರಿಸ್ತನ ಪಕ್ಕೆಗೆ ಈಟಿಯಿಂದ ತಿವಿದಾಗ, ಆತನ ಪಕ್ಕೆ ಸೀಳಲ್ಪಟ್ಟು ಕೂಡಲೇ, ನೀರು, ರಕ್ತ ಹೊರ ಬಂದಿತು. ಹೌದು ದೇವ ಮಹಿಮೆಯನ್ನು ಕಾಣಲು ಅಲ್ಲಿ ನಿಮಗೆ ಒಂದು ಸ್ಥಳವಿದೆ. ನೀವು ಕ್ರಿಸ್ತನ ಗಾಯಗಳನ್ನು ಧ್ಯಾನಿಸಿ ಕಲ್ವಾರಿ ಪ್ರೀತಿಯೊಳಗೆ ಹೋಗುವಾಗ ಆತನು ತನ್ನ ಮಹಿಮೆಯನ್ನು ನಿಮಗೆ ತೋರ್ಪಡಿಸುವನು.

ದೇವಜನರೇ, ತಂದೆಯಾದ ದೇವರು ನಿಮ್ಮನ್ನು ಪ್ರೀತಿಯ ಕರಗಳಿಂದ ಮುಚ್ಚುವನು. ತೇಜೋಮಯನಾದ ಆತ್ಮನಾಗಿರುವ ದೇವರಾತ್ಮನು ನಿಮ್ಮಲ್ಲಿ ನೆಲೆಗೊಂಡಿರುವನು (1 ಪೇತ್ರ 4:14). ಆದ್ದರಿಂದ ದೇವ ಮಹಿಮೆಯನ್ನು ಕಾಣಲು ಬಯಸುವ ದೇವ ಮಕ್ಕಳಿಗೆ, ತಂದೆಯಾದ ದೇವರು, ಕುಮಾರನಾದ ದೇವರು, ಪವಿತ್ರಾತ್ಮನೂ ಕೂಡಿ ತಮ್ಮ ಮಹಿಮೆಯನ್ನು ಪ್ರಕಟಿಸುವರು.

*ನೆನಪಿಗೆ : "ಇಗೋ ಕತ್ತಲು ಭೂಮಿಯನ್ನು ಆವರಿಸಿದೆ. ಕಾರ್ಗತ್ತಲು ಜನಾಂಗಗಳನ್ನು ಮುಚ್ಚಿದೆ. ನಿನ್ನ ಮೇಲಾದರೋ ಯೆಹೋವನು ಉದಯಿಸುವನು. ಆತನ ತೇಜಸ್ಸು ನಿನ್ನಲ್ಲಿ ಕಾಣಿಸುವದು (ಯೆಶಾಯ 60:2).*

| ಜುಲೈ 17 | ಪ್ರತಿಬಿಂಬಿಸುವ ಅನುಭವ! | ಬೆಳಗ್ಗೆ : ಕೀರ್ತನೆ 18,19<br>ಸಂಜೆ : ಅ.ಕೃ. 20:13-38 |
|---|---|---|

"ಆ ಪ್ರಭಾವದಿಂದ ಮೋಶೆಯ ಮುಖಕ್ಕೆ ಬಂದ ಪ್ರಕಾಶವು ಕುಂದಿ ಹೋಗುವಂಥದಾಗಿದ್ದರೂ ಅದರ ನಿಮಿತ್ತ ಇಸ್ರಾಯೇಲ್ಯರು ಅವನ ಮುಖವನ್ನು ನೋಡಲಾರದೆ ಇದ್ದರು" (2 ಕೊರಿಂ 3:7).

ದೇವರ ಮಹಿಮೆಯನ್ನು ಅಥವಾ ತೇಜಸ್ಸನ್ನು ಕಾಣುವದರೊಂದಿಗೆ ನೀವು ನಿಂತು ಬಿಡಬಾರದು. ನಂತರದ ಅನುಭವದ ಮಹಿಮೆಯನ್ನು ಪ್ರತಿಬಿಂಬಿಸುವವರಾಗಿರಬೇಕು. ಮೋಶೆ ಅದನ್ನು ಕುರಿತು ಏನೂ ತಿಳಿಯದವನಾಗಿದ್ದರೂ ಸಹ ಕರ್ತನ ಆಜ್ಞೆಯಂತೆ ಸೀನಾಯ್ ಬೆಟ್ಟವನ್ನು ಹತ್ತಿ ನಾಲ್ವತ್ತು ದಿನಗಳು ಹಗಲೂ ರಾತ್ರಿ ದೇವಪ್ರಸನ್ನತೆಯಲ್ಲಿ ಎಡೆಬಿಡದೆ ನೆಲೆಗೊಂಡಿದ್ದನು. ಆಗ ಅವನಿಗೆ ತಿಳಿಯದಂತೆಯೇ ಅವನ ಮುಖ ಪ್ರಕಾಶಗೊಂಡಿತು. ಅವನು ಬೆಟ್ಟದಿಂದ ಕೆಳಕ್ಕೆ ಇಳಿದು ಬರುವಾಗ, ಇಸ್ರಾಯೇಲ್ ಜನರು ಅವನ ಮುಖ ಪ್ರಕಾಶಿಸುತ್ತಿರುವದನ್ನು ಕಂಡರು (ವಿಮೋ 34:35).

ಮನುಷ್ಯನ ಮುಖದಲ್ಲಿ ಸ್ವಾಭಾವಿಕವಾದ ಮಹಿಮೆಯೇ ಪ್ರಕಾಶವೋ ಇರುವದಿಲ್ಲ. ಯಾಕೆಂದರೆ ಎಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ (ರೋಮಾ 3:23) ಎಂದು ಸತ್ಯವೇದ ಹೇಳುತ್ತದೆ. ಆದರೆ ಒಬ್ಬ ಮನುಷ್ಯ ಹಗಲೂ ರಾತ್ರಿ ದೇವಸಮ್ಮುಖದಲ್ಲಿ ಇರುವಾಗ, ದೇವಮಹಿಮೆ ಅವನ ಮುಖದಲ್ಲಿ ಪ್ರಕಾಶಿಸುವಂತೆ ಮಾಡುವದು. ಪ್ರಕೃತಿಸಹಜವಾಗಿ ಚಂದ್ರನಲ್ಲಿ ಬೆಳಕಿಲ್ಲದಿದ್ದರೂ ಅದು ಸೂರ್ಯನ ಬೆಳಕನ್ನು ಪಡೆದುಕೊಂಡು ರಾತ್ರಿಯಲ್ಲಿ ಬೆಳದಿಂಗಳಾಗಿ ಬೆಳಕು ಚೆಲ್ಲುವದು. ಅದರಂತೆ ಮಹಿಮೆಯ ರಾಜನಾದ ಕ್ರಿಸ್ತನೊಂದಿಗಿನ ಸಂಪರ್ಕದಿಂದ ನೀವೂ ಆತನ ಮಹಿಮೆಯನ್ನು ಪಡೆದುಕೊಳ್ಳಿರಿ. ಆತನನ್ನೇ ದೃಷ್ಟಿಸಿದವರು ಪ್ರಕಾಶವನ್ನು ಹೊಂದಿದರು (ಕೀರ್ತ 34:5) ಎಂದು ದಾವೀದನು ಬರೆಯುತ್ತಾನೆ. ಯೇಸುಕ್ರಿಸ್ತನು ಲೋಕದ ಜನರೊಂದಿಗೆ ಜೀವಿಸಿದರೂ ಹಗಲಿರುಳು ಸೇವೆ ಮಾಡಿದರೂ, ತಂದೆಯೊಂದಿಗೆ ಏಕಾಂತದಲ್ಲಿರಲು ನಸುಕಿನಲ್ಲಿಯೇ ಎದ್ದು ಅಡವಿಯ ಸ್ಥಳಕ್ಕೆ ಹೋಗಿ ಪ್ರಾರ್ಥಿಸುತ್ತಿದ್ದನು (ಮಾರ್ಕ 1:35). ರಾತ್ರಿಯಲ್ಲಿ ಬೆಟ್ಟವನ್ನೇರಿ ರಾತ್ರಿಯೆಲ್ಲಾ ಪ್ರಾರ್ಥಿಸಿದನು. ಆದ್ದರಿಂದ ಆತನ ಜೀವಿತ ಪ್ರಕಾಶಿಸಿತು. ನನ್ನನ್ನು ನೋಡಿದವನು ತಂದೆಯನ್ನು ನೋಡಿರುವನು ಎಂದು ಹೇಳಿದನು. "ಈತನು ದೇವರ ಪ್ರಭಾವದ ಪ್ರಕಾಶವೂ ಆತನ ತತ್ವದ ಮೂರ್ತಿಯೂ ಆಗಿದ್ದನು" (ಇಬ್ರಿ 1:3).

ದೇವಜನರೇ, ನೀವು ಕ್ರಿಸ್ತನೊಂದಿಗಿದ್ದರೆ, ಆತನು ನಿಮ್ಮೊಂದಿಗಿದ್ದು, ನಿಮ್ಮ ಮುಖವನ್ನು ಮಹಿಮೆಯುಳ್ಳ ಮುಖವಾಗಿ ಮಾರ್ಪಡಿಸುವನು.

***ನೆನಪಿಗೆ : "ಇಗೋ, ಇಸ್ರಾಯೇಲಿನ ದೇವರ ತೇಜಸ್ಸು ಮೂಡಣ ಮಾರ್ಗವಾಗಿ ಬಂತು. ಆತನ ಧ್ವನಿಯು ಜಲಪ್ರವಾಹದ ಘೋಷದಂತಿತ್ತು. ಆತನ ತೇಜಸ್ಸಿನಿಂದ ಭೂಮಿಯು ಬೆಳಗಿತು" (ಯೆಹೆಜ್ಕೇಲ 43:2).***

| ಜುಲೈ 18 | ತುಂಬಲ್ಪಡುವ ಅನುಭವ! | ಬೆಳಿಗ್ಗೆ : ಕೀರ್ತನೆ 20,21,22<br>ಸಂಜೆ : ಅ.ಕೃ. 21:1-16 |
|---|---|---|

"ಆಗ ಮೇಘವು ದೇವದರ್ಶನದ ಗುಡಾರವನ್ನು ಮುಚ್ಚಿತು; ಯೆಹೋವನ ತೇಜಸ್ಸು ಗುಡಾರವನ್ನು ತುಂಬಿತು" (ವಿಮೋ 40:34).

ದೇವಮಹಿಮೆಯ ಹಲವು ಅನುಭವಗಳನ್ನು ಧ್ಯಾನಿಸುತ್ತಾ ಬಂದಿರುವೆವು. 1) ಕರ್ತನ ಮಹಿಮೆಯನ್ನು ಕಾಣುವ ಅನುಭವ. 2) ಕರ್ತನ ಮಹಿಮೆಯನ್ನು ಪ್ರತಿಬಿಂಬಿಸುವ ಅನುಭವ. 3) ಕರ್ತನ ಮಹಿಮೆಯಿಂದ ತುಂಬುವ ಅನುಭವ. ಹೌದು, ಹಳೆಯ ಒಡಂಬಡಿಕೆಯಲ್ಲಿ ಕರ್ತನ ಮಹಿಮೆ ದೇವದರ್ಶನ ಗುಡಾರವನ್ನು ತುಂಬಿತು. ಹಾಗೆಯೇ ಸೊಲೊಮೋನನು ಕಟ್ಟಿದ ದೇವಾಲಯವನ್ನು ತುಂಬಿತು. ಆದರೆ ಹೊಸ ಒಡಂಬಡಿಕೆಯಲ್ಲಿ ನಾವೇ ದೇವರ ಆಲಯವಾಗಿರುವೆವು. ಕರ್ತನ ಚಿತ್ತದಂತೆ, ನಿಮ್ಮ ಜೀವಿತವನ್ನು ನಡಿಸುವಾಗ, ದೇವ ಮಹಿಮೆ ನಿಮ್ಮನ್ನು ತುಂಬಿ ಹೊರಸೂಸುವದು.

ದೇವರ ಮಾತಿನಂತೆ, ದೇವರು ಕೊಟ್ಟ ಅಳತೆಯ ಪ್ರಕಾರ ಮೋಶೆ ದೇವ ದರ್ಶನ ಗುಡಾರವನ್ನು ಕಟ್ಟಿದನು. ಅದರಲ್ಲಿ ಯಾವದೇ ಮಾರ್ಪಾಟು ಮಾಡಲಿಲ್ಲ. ಹೀಗೆ ಪೂರ್ಣವಾಗಿ ದೇವರ ಚಿತ್ತವನ್ನು ನೆರವೇರಿಸುವಾಗ ನಿಶ್ಚಯವಾಗಿ ನಿಮ್ಮ ಜೀವಿತವನ್ನು ದೇವ ಮಹಿಮೆ ಆವರಿಸುವದು. ಸೊಲೊಮೋನನು ದೇವಾಲಯವನ್ನು ಕಟ್ಟಲು ಆಲೋಚಿಸಿದಾಗ ಅವನು ತನ್ನ ಸ್ವಂತ ಜ್ಞಾನದ ಮೇಲೆ ಆತುಕೊಳ್ಳಲಿಲ್ಲ. ಅವನು ದೇವ ಚಿತ್ತವನ್ನೇ ಆತುಕೊಂಡಿದ್ದನು. ದೇವರ ನಿರ್ದೇಶನದಂತೆಯೇ. ದೇವಾಲಯವನ್ನು ಕಟ್ಟಿ ಮುಗಿಸಿದಾಗ ಪರಲೋಕ ಅದನ್ನು ಆಶೀರ್ವದಿಸಿ ದೇವ ಮಹಿಮೆಯಿಂದ ತುಂಬಿತು. ಯೇಸುಕ್ರಿಸ್ತನ ಜೀವಿತವನ್ನು ನೋಡಿರಿ. ಆತನು ಭೂಮಿಯಲ್ಲಿ ಹುಟ್ಟುವದಕ್ಕೆ ಮೊದಲೇ ಇಗೋ, ದೇವರೇ ನಿನ್ನ ಚಿತ್ತವನ್ನು ನೆರವೇರಿಸುವದಕ್ಕೆ ಬಂದಿದ್ದೇನೆ ಅಂದನು (ಇಬ್ರಿ 10:7). ಹೌದು, ತಂದೆಯ ಚಿತ್ತವನ್ನು ನೆರವೇರಿಸುವದೇ ಆತನ ಭೋಜನವಾಗಿತ್ತು. ಆದ್ದರಿಂದಲೇ, ತನ್ನ ಜೀವಿತದ ಅಂತ್ಯದಲ್ಲಿ ತಂದೆಯನ್ನು ನೋಡಿ – "ಮಾಡಬೇಕೆಂದು ನೀನು ನನಗೆ ಕೊಟ್ಟ ಕೆಲಸವನ್ನು ನಾನು ನೆರವೇರಿಸಿ ನಿನ್ನನ್ನು ಭೂಲೋಕದಲ್ಲಿ ಮಹಿಮೆಪಡಿಸಿದೆನು" (ಯೋಹಾನ 17:4) ಎಂದು ಪ್ರಾರ್ಥಿಸಿದನು. ಕ್ರಿಸ್ತನ ಜೀವಿತವೆಲ್ಲಾ ದೇವಮಹಿಮೆಯಿಂದ ತುಂಬಲ್ಪಡುವ ಅನುಭವವಾಗಿ ಇತ್ತು.

ದೇವಜನರೇ, ಹಳೆಯ ಒಡಂಬಡಿಕೆಯಲ್ಲಿನ ದೇವಭಕ್ತರು. ದೇವ ಮಹಿಮೆಯನ್ನು ಕಂಡರು, ಪ್ರತಿಬಿಂಬಿಸಿದರು. ಆದರೆ ನಮ್ಮೊಳಗೆ ಮಹಿಮೆಯಾದ ಪವಿತ್ರಾತ್ಮನು ಬಂದು ವಾಸ ಮಾಡುವನು. ಅಪರಿಮಿತವಾದ ಅಭಿಷೇಕದಿಂದ ತುಂಬುವನು. ನಿಮ್ಮ ಆಂತರ್ಯದಲ್ಲಿ ಒಂದೊಂದು ದಿನವೂ ನೂತನ ಅಭಿಷೇಕ ತುಂಬುತ್ತಿರಬೇಕು. ಆಗ ನೀವು ಮಹಿಮೆಯ ಮೇಲೆ ಮಹಿಮೆಯನ್ನು ಹೊಂದುವಿರಿ.

*ನೆನಪಿಗೆ : "ನನ್ನ ಕೊಂಬನ್ನು ಕಾಡುಕೋಣದ ಕೊಂಬಿನಂತೆ ಎತ್ತಿದ್ದೀ. ಚೈತನ್ಯ ತೈಲದಿಂದ ನನ್ನನ್ನು ಅಭಿಷೇಕಿಸಿದ್ದೀ" (ಕೀರ್ತನೆ 92:10).*

| ಜುಲೈ 19 | ## ಸ್ತುತಿಯೂ ಮಹಿಮೆಯೂ! | ಬೆಳಗ್ಗೆ : ಕೀರ್ತನೆ 23,24,25<br>ಸಂಜೆ : ಅ.ಕೃ. 21:17-40 |
|---|---|---|

"ಮೋಶೆ ಆ ಕೆಲಸವನ್ನೆಲ್ಲಾ ಮುಗಿಸಿದನು. ಆಗ ಮೇಘವು ದೇವದರ್ಶನ ಗುಡಾರವನ್ನು ಮುಚ್ಚಿತು; ಯೆಹೋವನ ತೇಜಸ್ಸು ಗುಡಾರವನ್ನು ತುಂಬಿತು" (ವಿಮೋ 40:33,34).

ಸೊಲೊಮೋನನು ಕರ್ತನಿಗೆಂದು ಒಂದು ದೇವಾಲಯವನ್ನು ಕಟ್ಟಿ ಮುಗಿಸಿ ಅದನ್ನು ಪ್ರತಿಷ್ಠೆಪಡಿಸುವಾಗ, ಅಲ್ಲಿ ನೆರೆದಿದ್ದ ಯಾಜಕ ವರ್ಗದವರು ಸ್ವರವೆತ್ತಿ ಯೆಹೋವನನ್ನು ಕೀರ್ತಿಸುವದಕ್ಕಾಗಿ ತುತೂರಿ ತಾಳ ಮೊದಲಾದ ವಾದ್ಯಗಳನ್ನು ಊದಿ ಕರ್ತನನ್ನು ಸ್ತುತಿಸಲು ಮೇಘವು ಯೆಹೋವನ ಆಲಯದಲ್ಲಿ ತುಂಬಿಕೊಂಡಿತು. ಯೆಹೋವನ ತೇಜಸ್ಸು ಅಲ್ಲಿ ತುಂಬಿಕೊಂಡದ್ದರಿಂದ ಯಾಜಕರು ಅಲ್ಲಿ ನಿಂತು ಸೇವೆ ಮಾಡಲಾರದೆ ಹೋದರು (2 ಪೂ.ವೃ. 5:13,14).

ದೇವದರ್ಶನ ಗುಡಾರದ ಕೆಲಸವನ್ನು ಮೋಶೆ ಮುಗಿಸಿದಂತೆ ಅವನ ಜೀವಿತವು ಕರ್ತನ ಸೇವೆಯನ್ನು ಮಾಡಿ ಮುಗಿಸಿತು. ಆಗ ಆತನಿಗೆ ನೂರ ಇಪ್ಪತ್ತು ವರುಷ ವಯಸ್ಸಾಗಿತ್ತು. ನೆಬೋ ಬೆಟ್ಟವನ್ನೇರಿ ಕೆಳಗೆ ಕಾಣುತ್ತಿದ್ದ ಕಾನಾನನ್ನು ದೂರದಿಂದ ನೋಡಿದನು. ನಂತರ ಅವನು ಕರ್ತನ ಮಾತಿನಂತೆಯೇ ಮರಣ ಹೊಂದಿದನು. ಕರ್ತನು ತಾನೇ ಅವನ ದೇಹವನ್ನು ಸಮಾಧಿ ಮಾಡಿದನು. ಅವನು ಮರಣಿಸಿದಾಗ ನೂರಿಪ್ಪತ್ತು ವರುಷ ವಯಸ್ಸಾಗಿದ್ದರೂ ಅವನ ಕಣ್ಣುಗಳು ದೃಷ್ಟಿಯನ್ನು ಕಳೆದುಕೊಂಡಿರಲಿಲ್ಲ. ಅವನ ಬಲ ಕುಂದಿರಲಿಲ್ಲ (ಧರ್ಮೋ 34:1,5,7). ಆದರೆ ಸೊಲೊಮೋನನು ಜೀವಾಂತ್ಯದವರೆಗೂ ಕರ್ತನಿಗೆ ನಂಬಿಗಸ್ತನಾಗಿರಲಿಲ್ಲ. ಅನ್ಯ ಜನಾಂಗದ ಹೆಣ್ಣುಗಳನ್ನು ಮದುವೆಯಾಗಿ ಅವರ ದೇವತೆಗಳಿಗಾಗಿ ಬಲಿಪೀಠಗಳನ್ನು ಕಟ್ಟಿಸಿದನು. ನಿಮ್ಮ ಅಂತ್ಯ ಸಂಪೂರ್ಣವಾಗಿರಬೇಕು. ದೇವರ ವಾಕ್ಯದಂತೆ ನೀವು ಜೀವಿಸುವದಾದರೆ, ನಿಮ್ಮ ಶರೀರವೆಂಬ ಆಲಯವನ್ನು ದೇವರ ಮಹಿಮೆ ಆವರಿಸುವದು. ಆಗ ಮಹಿಮೆಯ ಮೇಲೆ ಮಹಿಮೆ ಹೊಂದುವಿರಿ. ಪರಮ ಕಾನಾನಿನೊಳಗೆ ಪ್ರವೇಶಿಸುವಿರಿ.

ದೇವಜನರೇ, ನೀವು ದೇವರ ಆಲಯವಾಗಿರುವಿರಿ. ದೇವರಾತ್ಮನು ನಿಮ್ಮೊಳಗೆ ವಾಸವಾಗಿರುವನು. ಈ ಪ್ರಪಂಚ ಓಟವನ್ನು ಓಡಿ ಮುಗಿಸುವಾಗ, ದೇವದರ್ಶನದ ಗುಡಾರವನ್ನು ಮುಚ್ಚಿದ ಮಹಿಮೆ, ಸೊಲೊಮೋನನ ಆಲಯವನ್ನು ತುಂಬಿದ ಮಹಿಮೆ ನಿಮ್ಮನ್ನೂ ತುಂಬಬೇಕು. ಒಬ್ಬನ ಅಂತ್ಯ ಸಂಪೂರ್ಣವಾಗಿ ಇರಬೇಕು.

***ನೆನಪಿಗೆ : ''ಇಸ್ರಾಯೇಲ್ ದೇವರಾದ ಯೆಹೋವನಿಗೆ ಸ್ತೋತ್ರವಾಗಲಿ; ನನ್ನ ತಂದೆಯಾದ ದಾವೀದನಿಗೆ ಆತನ ಬಾಯಿ ನುಡಿದದ್ದನ್ನು ಆತನ ಹಸ್ತವು ಈಗ ನೆರವೇರಿಸಿಯದೆ'' (2 ಪೂ.ವೃ. 6:4).***

| ಜುಲೈ 20 | ಎದ್ದು ಪ್ರಕಾಶಿಸುವ ಅನುಭವ! | ಬೆಳಿಗ್ಗೆ : ಕೀರ್ತನೆ 26,27,28<br>ಸಂಜೆ : ಅ.ಕೃ. 22 |
|---|---|---|

"ಏಳು ಪ್ರಕಾಶಿಸು, ನಿನಗೆ ಬೆಳಕು ಬಂತು, ಯೆಹೋವನ ತೇಜಸ್ಸು ನಿನ್ನ ಮೇಲೆ ಉದಯಿಸಿದೆ" (ಯೆಶಾ 60:1).

ದೇವಮಹಿಮೆಯ ಮತ್ತೊಂದು ಅನುಭವ. ಎದ್ದು ಪ್ರಕಾಶಿಸುವ ಅನುಭವ. ನೀವು ಮಹಿಮೆಯನ್ನು ಕಂಡರೆ ಸಾಲದು, ಪ್ರತಿಬಿಂಬಿಸಿದರೆ ಸಾಲದು, ನೀವು ಯಾವಾಗಲೂ ಮಹಿಮೆಯ ಅಭಿಷೇಕದಿಂದ ತುಂಬಲ್ಪಡುತ್ತಲೇ ಇರಬೇಕು. ಆಗ, ಮಹಿಮೆಯಿಂದ ಎದ್ದು ಪ್ರಕಾಶಿಸುವಿರಿ.

ನೀವು ಎದ್ದು ಪ್ರಕಾಶಿಸಿ, ಕತ್ತಲೆಯಲ್ಲಿ ಜೀವಿಸುತ್ತಿರುವ ಜನರನ್ನು ದೇವರ ಬಳಿಗೆ ಕರೆತರಬೇಕು. ನೀವು ಲೋಕಕ್ಕೆ ಬೆಳಕಾಗಿದ್ದೀರಲ್ಲವೇ? ನೀವು ಎದ್ದು ಪ್ರಕಾಶಿಸುವಾಗ ನಿಶ್ಚಯವಾಗಿ ಅನ್ಯಜನರು ನಿಮ್ಮ ಬಳಿಗೆ ಬರುವರು. ಜನಾಂಗಗಳು ನಿನ್ನ ಬೆಳಕಿಗೆ ನೆರೆಯುವವು. ಅರಸರು ನಿನ್ನಲ್ಲಿನ ಉದಯ ಪ್ರಕಾಶಕ್ಕೆ ಬರುವರು. (ಯೆಶಾ 60:3) ಎಂದು ಇಗೋ ಕತ್ತಲು ಭೂಮಿಯನ್ನು ಆವರಿಸಿದೆ. ಕಾರ್ಗತ್ತಲು ಜನಾಂಗಗಳನ್ನು ಮುಚ್ಚಿದೆ; ನಿನ್ನ ಮೇಲಾದರೋ ಯೆಹೋವನು ಉದಯಿಸುವನು (ಯೆಶಾ 60:2) ಎಂದು ಸತ್ಯವೇದ ಹೇಳುತ್ತದೆ. ನೀವು ಎಷ್ಟರ ಮಟ್ಟಿಗೆ ನಿಮ್ಮ ಸಮಯವನ್ನೂ, ವರಗಳನ್ನೂ, ತಲಾಂತುಗಳನ್ನು ಕರ್ತನ ಸೇವೆಗೆ ಉಪಯೋಗಿಸುವಿರೋ ಅಷ್ಟರ ಮಟ್ಟಿಗೆ ದೇವ ಮಹಿಮೆ ನಿಮ್ಮನ್ನು ತುಂಬುತ್ತಲೇ ಇರುವದು. ಬೆಟ್ಟದ ಮೇಲಿರುವ ಊರು ಮರೆಯಾಗಿರುವದಿಲ್ಲ. ಆದ್ದರಿಂದ ಕರ್ತನಿಗಾಗಿ ಎದ್ದು ಪ್ರಕಾಶಿಸಿರಿ. ಉಪವಾಸವಿದ್ದು ಪ್ರಾರ್ಥಿಸಿ. ಯಾವಾಗಲೂ ದೇವರಾತ್ಮನಿಂದಲೂ, ಮಹಿಮೆಯಿಂದಲೂ ತುಂಬಲ್ಪಡಿರಿ. "ಯೆಹೋವನನ್ನು ನಿರೀಕ್ಷಿಸುವವರೋ ಹೊಸ ಬಲವನ್ನು ಹೊಂದುವರು; ಹದ್ದುಗಳಂತೆ ರೆಕ್ಕೆಗಳನ್ನು ಚಾಚಿಕೊಂಡು (ಏರುವರು) ಓಡಿ ದಣಿಯರು ನಡೆದು ಬಳಲರು" (ಯೆಶಾ 40:31) ಎಂದು ದೇವರ ವಾಕ್ಯ ಹೇಳುತ್ತದೆ. ಕರ್ತನು ನಿಮ್ಮನ್ನು ಎಬ್ಬಿಸಿ ಪ್ರಕಾಶಿಸುವಂತೆ ಮಾಡುವಾಗ ಸ್ನಾನಿಕನಾದ ಯೋಹಾನನು ಹೇಳಿದಂತೆ ಆತನು ಹೆಚ್ಚಿಸಲ್ಪಡಬೇಕು ನೀವು ತಗ್ಗಿಸಲ್ಪಡಬೇಕು (ಯೋಹಾ 3:30).

ದೇವಜನರೇ, ನೀವು ಆರಿಸಲ್ಪಟ್ಟ ಹಣತೆಗಳಲ್ಲ. ದೀಪಸ್ತಂಭದ ಮೇಲೆ ಇಟ್ಟ ಉರಿಯುವ ಹಣತೆಗಳಾಗುವಿರಿ. ಅದು ಪ್ರಕಾಶಮಾನವಾಗಿ ಉರಿಯಬೇಕಾದರೆ ನಿಮ್ಮ ಆತ್ಮವೆಂಬ ಹಣತೆಯ ಬತ್ತಿ ಪವಿತ್ರಾತ್ಮನೆಂಬ ಎಣ್ಣೆಯೊಳಗೆ ಮುಳುಗಿ ನೆಂದಿರಬೇಕು. ಆದ್ದರಿಂದ ಸದಾ ಪವಿತ್ರಾತ್ಮನ ಅಭಿಷೇಕದಿಂದ ತುಂಬಿದವರಾಗಿರ್ರಿ.

*ನೆನಪಿಗೆ : ''ನನ್ನ ಮನವೇ, ಚುರುಕಾಗು; ಸ್ವರ ಮಂಡಲವೇ, ಕಿನ್ನರಿಯೇ ಎಚ್ಚರವಾಗಿರಿ. ಸಂಕೀರ್ತನೆಯಿಂದ ಉದಯವನ್ನು ಮುಂಗೊಳ್ಳುವೆನು'' (ಕೀರ್ತ 57:8).*

| ಜುಲೈ 21 | ಕರ್ತನ ಮಹಿಮೆ! | ಬೆಳಿಗ್ಗೆ : ಕೀರ್ತನೆ 29,30<br>ಸಂಜೆ : ಅ.ಕೃ. 23:1-11 |
|---|---|---|

"ಇಗೋ ಕತ್ತಲು ಭೂಮಿಯನ್ನು ಆವರಿಸಿದೆ; ಕಾರ್ಗತ್ತಲು ಜನಾಂಗಗಳನ್ನು ಮುಚ್ಚಿದೆ; ನಿನ್ನ ಮೇಲಾದರೋ ಯೆಹೋವನು ಉದಯಿಸುವನು. ಆತನ ತೇಜಸ್ಸು ನಿನ್ನಲ್ಲಿ ಕಾಣಿಸುವದು" (ಯೆಶಾ 60:2).

ದಿನಗಳು ಕಳೆದಂತೆಲ್ಲಾ ಈ ಪ್ರಪಂಚವು ಕತ್ತಲೆಯ ಕಾರ್ಗತ್ತಲೆಯ ಕಡೆಗೆ ಸಾಗುತ್ತಿರುವದು. ಕ್ರಿಸ್ತ ವಿರೋಧಿಯ ಮೃಗೀಯ ಆಳ್ವಿಕೆಯ ಕಡೆಗೆ ಸಾಗುತ್ತಿರುವದು. ಅಂಧಕಾರ ಶಕ್ತಿಗಳು ಬಲಗೊಳ್ಳುತ್ತಿರುವವು. ವಂಚಿಸಲ್ಪಡುವಂಥ ಅದ್ಭುತಕಾರ್ಯಗಳನ್ನು ಸೈತಾನನು ಮಾಡುತ್ತಿರುವನು. ಅದೇ ವೇಳೆಯಲ್ಲಿ ನಾವು, ಕರ್ತನ ಮಹಿಮೆಯಾದ ಬರುವಿಕೆಯನ್ನು ನಿರೀಕ್ಷಿಸುತ್ತಿದ್ದೇವೆ. ಯೇಸುಕ್ರಿಸ್ತನು ತಂದೆಯ ಮಹಿಮೆಯನ್ನು ಪಡೆದವನಾಗಿ ಪ್ರಧಾನ ದೇವದೂತನ ತುತೂರಿ ಶಬ್ದದೊಂದಿಗೆ ಆಕಾಶದಿಂದ ಇಳಿದು ಬರುವನು. ಆಗ ಕ್ರಿಸ್ತನಲ್ಲಿ ಸತ್ತವರು ಮೊದಲು ಏಳುವರು. ನಂತರ ಜೀವದಿಂದಿರುವ ಆತನ ಮಕ್ಕಳು ಮೇಘಗಳ ಮೇಲೆ ತೆಗೆದುಕೊಳ್ಳಲ್ಪಟ್ಟು ಅವರೊಂದಿಗಿರುವರು.

ಇರುಳು ಕಾರಿರುಳು ಪ್ರಪಂಚವನ್ನು ಮುಚ್ಚುವಾಗ ಕರ್ತನ ಮಹಿಮೆ ನಿಮ್ಮ ಮೇಲೆ ಉದಯಿಸುವ ಉದ್ದೇಶವೇನು? ನೀವು ಕರ್ತನಿಗಾಗಿ ಎದ್ದು ಪ್ರಕಾಶಿಸಬೇಕು ಎಂಬುದೇ. ನೀವು ದೇವರಿಗೆಂದು ಮಹಿಮೆಯಾಗಿ ಎದ್ದು ಪ್ರಕಾಶಿಸಬೇಕಾದರೆ, ಈ ಕೃಪೆಯ ಕಾಲವೇ ಒಳ್ಳೆಯ ಕಾಲವಾಗಿದೆ. ಕರ್ತನಿಗಾಗಿ ಎಷ್ಟು ಸಾಧ್ಯವೋ ಅಷ್ಟು ಶ್ರಮಿಸಿರಿ. ಸುವಾರ್ತೆಯನ್ನು ಎಷ್ಟರ ಮಟ್ಟಿಗೆ ಸಾರಲು ಸಾಧ್ಯವೋ ಸಾರಿರಿ. ಆತ್ಮಗಳ ಆದಾಯ ಮಾಡುವದೇ ನಿಮ್ಮ ಧ್ಯೇಯವಾಗಿರಲಿ. ನಿಮ್ಮ ಮೇಲೆ ಉದಯಿಸುವ ಕರ್ತನ ಮಹಿಮೆಯಲ್ಲಿ ಒಂದು ಬೆಳಕು ಉಂಟು. ದೇವರು ನಿಮ್ಮನ್ನು ಲೋಕಕ್ಕೆ ಬೆಳಕನ್ನಾಗಿ ಇಟ್ಟಿರುವನು. ಕತ್ತಲೆಯಿಂದ ಬೆಳಕು ಉಂಟಾಗುವಂತೆ ಮಾಡಿದ ದೇವರು, ನಿಮ್ಮನ್ನು ಜನರ ನಡುವೆ ಪ್ರಕಾಶಿಸುವಂತೆ ಮಾಡುವನು. ರಾತ್ರಿಯಲ್ಲಿ ಬೆಳಕು ನೀಡಲು ಚಂದ್ರ, ನಕ್ಷತ್ರಗಳನ್ನು ಇಟ್ಟಿರುವಂತೆ ದೇವರು ಕತ್ತಲೆಯಾದ ಈ ಪ್ರಪಂಚಕ್ಕೆ ದೀಪವಾಗಿ, ಬೆಳಕಾಗಿ ನಿಮ್ಮನ್ನು ಇಟ್ಟಿರುವನು.

ದೇವಜನರೇ, ಪಾಪವೆಂಬುದು ಕತ್ತಲೆ, ಸುವಾರ್ತೆ ಎಂಬದು ಬೆಳಕು. ಪಾಪವು ಮನುಷ್ಯನ ಆತ್ಮದಲ್ಲಿ ಕತ್ತಲೆಯನ್ನುಂಟು ಮಾಡುವದು. ಅಂಧಕಾರ ಲೋಕಾಧಿಪತಿ ಅನೇಕರ ಮನೋನೇತ್ರಗಳನ್ನು ಕುರುಡಾಗಿಸಿ ಕತ್ತಲೆಯಲ್ಲಿ ಕಟ್ಟಿ ಹಾಕಿರುವನು. ನೀವು ಸುವಾರ್ತೆಯನ್ನು ಪ್ರಸಂಗಿಸುವಾಗ, ಸುವಾರ್ತೆಯ ಬೆಳಕು ಕತ್ತಲೆಯನ್ನು ಓಡಿಸಿ ಪರಲೋಕದ ಬೆಳಕನ್ನು ತರುವದು. ಪ್ರಿಯರೇ, ನಿಮ್ಮೊಳಗಿರುವ ದೇವರ ಪ್ರಕಾಶ ಹೆಚ್ಚುತ್ತಲೇ ಇರಲಿ. ಆಗ ಬೆಳಕಿನ ಮಕ್ಕಳಾಗಿ ನಡೆದುಕೊಳ್ಳಿ. ಸಾಧ್ಯವಾದಷ್ಟು ಮಟ್ಟಿಗೆ ಜನರಿಗೆ ಸುವಾರ್ತೆಯನ್ನು ಸಾರಿರಿ.

***ನೆನಪಿಗೆ : "ನಾವೆಲ್ಲರೂ ಮುಸುಕು ತೆಗೆದಿರುವ ಮುಖದಿಂದ ಕರ್ತನ ಪ್ರಭಾವವನ್ನು ದರ್ಪಣದಲ್ಲಿ ಕಾಣಿಸುತ್ತದೋ ಎಂಬಂತೆ ದೃಷ್ಟಿಸುವವರಾಗಿದ್ದು ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ಹೋಗುತ್ತಾ ಆ ಪ್ರಭಾವದ ಸಾರೂಪ್ಯವುಳ್ಳವರೇ ಆಗುತ್ತೇವೆ (2 ಕೊರಿಂ 3:18)***

| ಜುಲೈ 22 | ರೂಪಾಂತರ ಹೊಂದುವ ಅನುಭವ! | ಬೆಳಿಗ್ಗೆ : ಕೀರ್ತನೆ 31,32<br>ಸಂಜೆ : ಅ.ಕೃ. 23:12-35 |
|---|---|---|

"ನಮಗೆ ಜೀವವಾಗಿರುವ ಕ್ರಿಸ್ತನು ಪ್ರತ್ಯಕ್ಷನಾಗುವಾಗ ನೀವು ಸಹ ಆತನ ಜೊತೆಯಲ್ಲಿ ಪ್ರಭಾವದಿಂದ ಕೂಡಿದವರಾಗಿ, ಪ್ರತ್ಯಕ್ಷರಾಗುವಿರಿ" (ಕೊಲೊ 3:4).

ಕ್ರಿಸ್ತನ ಬರುವಿಕೆ ಎಷ್ಟೊಂದು ದೊಡ್ಡ ಸಂತೋಷದ ದಿನವಾಗಿ ಇರುವದು! ಪ್ರಧಾನ ದೇವದೂತನ ತುತೂರಿಯ ಧ್ವನಿ ಕೇಳಿಸುವಾಗ, ಕಣ್ಣುರೆಪ್ಪೆ ಬಡಿಯುವಷ್ಟರಲ್ಲಿ ನಾವು ರೂಪಾಂತರ ಹೊಂದುವೆವು. ನಾಶವಾಗುವಂಥ ಈ ಶರೀರ ಅಮರತ್ವವನ್ನು ಧರಿಸಿಕೊಳ್ಳುವದು. ಆ ವೇಳೆಯಲ್ಲಿ ನಾವು ಮರಣವನ್ನು ಜಯವಾಗಿಸಿಕೊಳ್ಳುವೆವು. ಆಗ ಕ್ರಿಸ್ತನಲ್ಲಿ ಮರಣ ಹೊಂದಿದ ಭಕ್ತರು ಜೀವದಿಂದ ಎದ್ದೇಳುವರು. ಅವರು ಆಕಾಶಕ್ಕೆ ಒಯ್ಯಲ್ಪಟ್ಟ ನಂತರ, ನಮ್ಮನ್ನು ದೇವರಾತ್ಮನು ಪಾರಿವಾಳದಂತೆ ಮುನ್ನಡೆಸುವಾಗ ನಾವೂ ಗೂಡಿನ ಕಡೆಗೆ ಹಾರಿ ಹೋಗುವ ಪಾರಿವಾಳಗಳಂತೆ ಹಾರಿ ಹೋಗುವೆವು. ನಮ್ಮ ಶರೀರ ಮಹಿಮೆಯ ಮೇಲೆ ಮಹಿಮೆ ಹೊಂದಿ ರೂಪಾಂತರಗೊಳ್ಳುವದು.

ಇದಕ್ಕಿಂತಲೂ ದೊಡ್ಡ ಸಂತೋಷವೆಂದರೆ, ಮಧ್ಯಾಕಾಶದಲ್ಲಿ ಯೇಸುಕ್ರಿಸ್ತನನ್ನು ಮಹಿಮೆಯ ರಾಜನನ್ನಾಗಿ ಸಂಧಿಸುವದಾಗಿದೆ. ಆತನು ತಂದೆಯ ಮಹಿಮೆಯನ್ನು ಧರಿಸಿದವನಾಗಿ ಇರುವನು. ಮಹಿಮೆಯಾದ ದೇವದೂತರೊಂದಿಗೆ ಬರುವನು. ಆ ದಿನದಲ್ಲಿ ಪರಲೋಕವೂ ಭೂಮಿಯೂ ಕೂಡಿ ಆನಂದಿಸುವದು. ಪರಲೋಕದ ದೂತರು, ಭೂಲೋಕದ ಭಕ್ತರು ಒಂದೇ ಕುಟುಂಬವಾಗಿ ಸೇರುವಾಗ, ಸಂತೋಷವು ಕೋಟಿಗಟ್ಟಲೆ ಹೆಚ್ಚುವದು. ಆತನ ಬರುವಿಕೆ, ದೇವರ ಮಕ್ಕಳಾದ ನಮಗೆ ಪ್ರಧಾನ ನಂಬಿಕೆಯಾಗಿದೆ. ಸತ್ಯವೇದ ಪೂರ್ತಿಯಾಗಿ ಆತನ ಬರುವಿಕೆಯ ವಾಗ್ದಾನಗಳಿಂದ ತುಂಬಿರುವದು. ಹೌದು, "ಹಿರೀ ಕುರುಬನು ಪ್ರತ್ಯಕ್ಷನಾಗುವಾಗ ನೀವು ದೇವ ಪ್ರಭಾವವೆಂಬ ಎಂದಿಗೂ ಬಾಡದ ಜಯಮಾಲೆಯನ್ನು ಹೊಂದುವಿರಿ" (1 ಪೇತ್ರ 5:4).

ದೇವಜನರೇ, ನಿಮಗೆ ಮತ್ತೊಮ್ಮೆ ಜ್ಞಾಪಕಪಡಿಸುತ್ತೇನೆ. ಮೊದಲನೆಯದಾಗಿ ಮಹಿಮೆಯನ್ನು ಕಾಣುವ ಅನುಭವ. ಎರಡನೆಯದಾಗಿ, ಮೋಶೆ ದೇವ ಮಹಿಮೆಯನ್ನು ಪ್ರತಿಫಲಿಸುವಂತೆ ನಮ್ಮ ಮುಖವು ಆತನ ಮಹಿಮೆಯ ಪ್ರಕಾಶವನ್ನು ಪ್ರತಿಫಲಿಸುವ ಅನುಭವ. ಮೂರನೆಯದಾಗಿ, ಮಹಿಮೆಯ ಅಭಿಷೇಕದಿಂದ ತುಂಬುವ ಅನುಭವ. ನಾಲ್ಕನೆಯದಾಗಿ ಮಹಿಮೆಯೊಂದಿಗೆ ಎದ್ದು ಪ್ರಕಾಶಿಸುವ ಅನುಭವ. ಐದನೆಯದಾಗಿ ಕರ್ತನು ಬರೋಣದಲ್ಲಿ ಮಹಿಮೆಯಿಂದ ರೂಪಾಂತರ ಹೊಂದುವ ಅನುಭವ. ಈ ಅನುಭವಗಳಿಗಾಗಿಯೇ ಕರ್ತನು ನಿಮ್ಮನ್ನು ಆರಿಸಿಕೊಂಡಿರುವನೆಂಬುದನ್ನು ಮರೆಯದಿರಿ.

*ನೆನಪಿಗೆ : "ನಾವಾದರೋ ಪರಲೋಕ ಸಂಸ್ಥಾನದವರು; ಕರ್ತನಾದ ಯೇಸುಕ್ರಿಸ್ತನು ಅಲ್ಲಿಂದಲೇ ರಕ್ಷಕನಾಗಿ ಬರುವದನ್ನು ಎದುರು ನೋಡುತ್ತಾ ಇದ್ದೇವೆ" (ಫಿಲಿ 3:20).*

| ಜುಲೈ 23 | ಬರುವಿಕೆಯಲ್ಲಿ ಮಹಿಮೆ! | ಬೆಳಗ್ಗೆ : ಕೀರ್ತನೆ 33,34<br>ಸಂಜೆ : ಅ.ಕೃ. 24 |
|---|---|---|

"ಜೀವದಿಂದುಳಿದಿರುವ ನಾವು, ಅಂತರಿಕ್ಷದಲ್ಲಿ ಕರ್ತನನ್ನು ಎದುರುಗೊಳ್ಳುವದಕ್ಕಾಗಿ ಅವರ ಸಂಗಡಲೇ, ಮೇಘ ವಾಹನರಾಗಿ ಫಕ್ಕನೆ ಒಯ್ಯಲ್ಪಡುವೆವು. ಹೀಗಾಗಿ ನಾವು ಸದಾಕಾಲವೂ ಕರ್ತನ ಜೊತೆಯಲ್ಲಿರುವೆವು (1 ಥೆಸ 4:17).

ಪವಿತ್ರಾತ್ಮನಿಂದ ನೀವು ಹೊಂದಿಕೊಂಡ ದೇವ ಮಹಿಮೆಯು, ಒಂದು ಬೀಜದಂತಿರುವದು. ತುತೂರಿ ಶಬ್ದ ಕೇಳುವಾಗ, ಬೀಜದಲ್ಲಿರುವ ಗಿಡ ಮೊಳೆಯುವಂತೆ ನಿಮ್ಮೊಳಗಿರುವ ಮಹಿಮೆಯಾದಾತನು. ನಿಮ್ಮ ಶರೀರವನ್ನು ನಿತ್ಯತ್ವದ ಮಹಿಮೆಯ ಶರೀರವಾಗಿ ರೂಪಾಂತರಗೊಳಿಸುವನು. ಸತ್ತವರಿಗಾಗುವ ಪುನರುತ್ಥಾನವು ಅದೇ ಪ್ರಕಾರವಾಗಿರುವದು. ದೇಹವು ಲಯಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ. ನಿರ್ಲಯಾವಸ್ಥೆಯಲ್ಲಿ ಎದ್ದು ಬರುವದು. ನಾವು ಮಣ್ಣಿನಿಂದ ಹುಟ್ಟಿದವನ ಸಾರೂಪ್ಯವನ್ನು ಧರಿಸಿ ಕೊಂಡಿರುವ ಪ್ರಕಾರ ಪರಲೋಕದಿಂದ ಬಂದಾತನ ಸಾರೂಪ್ಯವನ್ನೂ ಧರಿಸಿಕೊಳ್ಳಬೇಕು (1 ಕೊರಿಂ 15:42,43,49) ಎಂದು ಸತ್ಯವೇದ ಹೇಳುತ್ತದೆ.

ಯೇಸುಕ್ರಿಸ್ತನನ್ನು ಹೂಳಿಡಲು ತೆಗೆದುಕೊಂಡು ಹೋಗುವಾಗ ಆತನ ಶರೀರವನ್ನು ಬಟ್ಟೆಗಳಿಂದ ಸುತ್ತಿದ್ದರು. ಆದರೆ ಪುನರುತ್ಥಾನದ ಮಹಿಮೆ ಆತನಲ್ಲಿ ಇಳಿದು ಬಂದಾಗ ಸತ್ತವರಿಂದ ಜೀವಿತನಾಗಿ ಎದ್ದ ಕ್ರಿಸ್ತನು ಭೂಸಂಬಂಧವಾದ ಬಟ್ಟೆಗಳನ್ನು ತೆಗೆದು ಸಮಾಧಿಯಲ್ಲಿ ಇಟ್ಟು, ಮಹಿಮೆಯೊಂದಿಗೆ ಎದ್ದನು (ಯೋಹಾ 20:7,9). ಕರ್ತನ ಬರೋಣದಲ್ಲಿ ನಮಗೆ ಕೊಡುವ ರಕ್ಷಣೆಯ ವಸ್ತ್ರ, ಸ್ತುತಿಯ ವಸ್ತ್ರಗಳೊಂದಿಗೆ ದೇವ ಮಹಿಮೆಯಿಂದ ತುಂಬಿದವರಾಗಿ ರೂಪಾಂತರಗೊಳ್ಳುವೆವು. ಯೇಸುಕ್ರಿಸ್ತನು ಹೇಗೆ ಜೀವದಿಂದ ಎದ್ದನು? ಆತನನ್ನು ಎಬ್ಬಿಸಿದವನು ಪವಿತ್ರಾತ್ಮನೇ ಸತ್ಯವೇದ ಹೇಳುತ್ತದೆ – "ಯೇಸುವನ್ನು ಸತ್ತವರೊಳಗಿಂದ ಜೀವಿತನಾಗಿ ಎಬ್ಬಿಸಿದಾತನ ಆತ್ಮನು ನಿಮ್ಮಲ್ಲಿ ವಾಸವಾಗಿದ್ದರೆ ಕ್ರಿಸ್ತಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದಾತನು ನಿಮ್ಮಲ್ಲಿ ವಾಸವಾಗಿರುವ ತನ್ನ ಆತ್ಮನ ಮೂಲಕ ನಿಮ್ಮ ಮರ್ತ್ಯ ದೇಹಗಳನ್ನು ಸಹ ಬದುಕಿಸುವನು ಎಂದು (ರೋಮಾ 8:11).

ದೇವಜನರೇ, ಇದುವರೆವಿಗೂ ನೀವು ಪವಿತ್ರಾತ್ಮನನ್ನು ಹೊಂದದೇ ಹೋಗಿದ್ದರೆ, ದಾಹದಿಂದ ಕೇಳಿ ಪಡೆದುಕೊಳ್ಳಿರಿ. ಕರ್ತನ ಬರುವಿಕೆ ಸಮೀಪವಾಗಿರುವದು. ಇನ್ನೂ ತಾಮಸ ಬೇಡ, ಸದಾ ಸಿದ್ಧವಾಗಿರಿ. ಹೇಗೆ, ಮನೆಯ ಯಜಮಾನನಿಗೆ ಕಳ್ಳನು ಬರುವ ಸಮಯ ತಿಳಿದಿರುವದಿಲ್ಲವೋ, ಅದೇ ರೀತಿ ಕರ್ತನ ಬರೋಣವೂ ಇರುವದು.

*ನೆನಪಿಗೆ : "ಲಯವಾಗುವ ಈ ದೇಹವು ನಿರ್ಲಯತ್ವವನ್ನು ಧರಿಸಿಕೊಂಡಾಗ ಮರಣಾಧೀನವಾಗಿರುವ ಈ ದೇಹವು ಅಮರತ್ವವನ್ನು ಧರಿಸಿಕೊಂಡಾಗ ಮರಣವು ನುಂಗಿಯೇ ಹೋಯಿತು, ಜಯವಾಯಿತು ಎಂಬುದೇ' (1 ಕೊರಿಂ 15:54).*

| ಜುಲೈ 24 | ಪ್ರಭಾವದಿಂದ ಅಧಿಕ ಪ್ರಭಾವಕ್ಕೆ! | ಬೆಳಿಗ್ಗೆ : ಕೀರ್ತನೆ 35,36<br>ಸಂಜೆ : ಅ.ಕೃ. 25 |
|---|---|---|

"ನಾವೆಲ್ಲರೂ ಮುಸುಕು ತೆಗೆದಿರುವ ಮುಖದಿಂದ ಕರ್ತನ ಪ್ರಭಾವವನ್ನು ದರ್ಪಣದಲ್ಲಿ ಕಾಣಿಸುತ್ತದೋ ಎಂಬಂತೆ ದೃಷ್ಟಿಸುವವರಾಗಿದ್ದು ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ಹೋಗುತ್ತಾ ಆ ಪ್ರಭಾವದ ಸಾರೂಪ್ಯವುಳ್ಳವರೇ ಆಗುತ್ತೇವೆ (2 ಕೊರಿಂ 3:18).

ಕರ್ತನ ಪ್ರಭಾವವುಳ್ಳ ಬರೋಣದಲ್ಲಿ ನೀವು ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ದಾಟಿ ರೂಪಾಂತರಗೊಳ್ಳುವದು, ಎಷ್ಟೊಂದು ವಿಶೇಷವಾದ ಅನುಭವ! ಆ ದಿನವನ್ನು ದೃಷ್ಟಿಸುತ್ತಾ ನಂಬಿಕೆಯಿಂದ ಓಡಿರಿ.

ನಿಮ್ಮ ಜೀವಿತದ ಕುರಿತು ಸ್ಪಷ್ಟವಾದ ಉದ್ದೇಶವೇನೆಂಬುದು ನಿಮಗೆ ತಿಳಿದಿರುವದಾ? ಯಾವ ಉದ್ದೇಶದಿಂದ ಈ ಭೂಮಿಯಲ್ಲಿ ಜೀವಿಸುತ್ತಿರುವಿರಿ? ದೇವರು ತನ್ನ ಕೃಪೆಯಿಂದ ಈ ಭೂಮಿಯಲ್ಲಿ ಬಾಳಲು ಒಂದು ಅವಕಾಶವನ್ನು ನೀಡಿರುವನು. ನೀವು ಯಾವ ರೀತಿ ಆ ಸದವಕಾಶವನ್ನು ಉಪಯೋಗಿಸಿಕೊಳ್ಳುತ್ತಿರುವಿರಿ? ಎಂಬುದನ್ನು ಕುರಿತು ಚಿಂತನೆ ಮಾಡುವದು ಎಷ್ಟೋ ಅಗತ್ಯವಾದದ್ದು. ಒಬ್ಬ ಬೋಧಕರು ತನ್ನ ವಿದ್ಯಾರ್ಥಿಯನ್ನು ನೋಡಿ, ತಮ್ಮ, ನಿನ್ನ ಜೀವಿತದ ಗುರಿ ಏನು? ಎಂದು ಕೇಳಿದರು. ಅದಕ್ಕೆ ಅವನು ಹೇಳಿದನು – ನಾನು ಓದಿ ದೊಡ್ಡವನಾಗಬೇಕು ಅಂದನು. ಅನಂತರ ಎಂದು ಬೋಧಕರು ಕೇಳಿದರು. ಅದಕ್ಕೆ ಅವನು ಒಳ್ಳೇ ಕೆಲಸಕ್ಕೆ ಸೇರಬೇಕು. ನಂತರ ಸುಂದರವಾದ ಹೆಣ್ಣನ್ನು ಮದುವೆಯಾಗಿ ಮಕ್ಕಳನ್ನು ಪಡೆಯಬೇಕು. ನಂತರ ನನಗಾಗಿ ಒಂದು ಮನೆ ಕಟ್ಟಬೇಕು. ಹೀಗೆ ಬೋಧಕರು ನಂತರ ನಂತರ ಎಂದು ಕೇಳುತ್ತಿರಲು, ಕೊನೆಗೆ ಅವನಿಗೆ ಏನೂ ಹೇಳಲು ತಿಳಿಯದೆ, ಎಲ್ಲರಂತೆ ಒಂದು ದಿನ ನಾನು ಸಾಯುತ್ತೇನೆ ಎಂದು ಹೇಳಿದನು. ಸತ್ತ ನಂತರ ಏನೆಂಬ ಅರಿವು ಅವನಿಗಿಲ್ಲ. ಇದೇ ರೀತಿ ಅನೇಕರು ಈ ಲೋಕದಲ್ಲಿ ಶಾರೀರಿಕ ಮರಣವನ್ನು ಅರಿತಿರುವರೇ ಹೊರತು ಎರಡನೆಯ ಮರಣವಾದ ಆತ್ಮೀಕ ಮರಣದ ಕುರಿತು ಚಿಂತನೆ ಇಲ್ಲದೆ ಜೀವಿಸುತ್ತಿರುವರು. ಇದಕ್ಕೆ ಕ್ರೈಸ್ತರೇನೂ ಹೊರತಲ್ಲ. ಈ ಆತ್ಮೀಕ ಮರಣದ ಕುರಿತಾದ ಅರಿವಿರುವವರೂ ಈ ಲೋಕದ ಮಾಯೆಯಿಂದ ಬಂಧಿಸಲ್ಪಟ್ಟವರಾಗಿ ಆತ್ಮೀಕ ಕುರುಡುತನದಿಂದ ಜೀವಿಸುತ್ತಿರುವರು.

ದೇವಜನರೇ, ನೀವು ಮಣ್ಣಲ್ಲಿ ಮಣ್ಣಾಗಿ ಹೋಗಲು ಕರ್ತನು ನಿಮ್ಮನ್ನು ಕರೆದಿಲ್ಲ. ಕ್ರಿಸ್ತನ ಪುನರುತ್ಥಾನದ ಶಕ್ತಿಯಿಂದ ಒಂದು ದಿನ ನೀವೂ ಸಹ ಜೀವದಿಂದ ಎಬ್ಬಿಸಲ್ಪಡುವಿರಿ. ಲಯವಾಗುವ ಈ ದೇಹ ನಿರ್ಲಯತ್ವ ಪಡೆದು ಕರ್ತನ ಸಾನ್ನಿಧ್ಯದಲ್ಲಿ ಸದಾ ಕಾಲಕ್ಕೂ ಜೀವಿಸಬೇಕೆಂಬುದೇ ಕರ್ತನ ಉದ್ದೇಶವಾಗಿದೆ. ಆದುದರಿಂದ ನಿಮ್ಮ ಜೀವಿತದ ಓಟದ ಗುರಿ, ನಿತ್ಯಜೀವವನ್ನು ಪಡೆಯುವುದಾಗಿ ಇರಲಿ.

*ನೆನಪಿಗೆ : "ಕ್ರಿಸ್ತನು ಪ್ರತ್ಯಕ್ಷನಾದರೆ ನಾವು ಆತನ ಹಾಗಿರುವೆವೆಂದು ಬಲ್ಲೆವು; ಯಾಕೆಂದರೆ ಆತನಿರುವ ಪ್ರಕಾರವೇ ಆತನನ್ನು ನೋಡುವೆವು" (1 ಯೋಹಾ 3:2).*

| ಜುಲೈ 25 | ರೂಪಾಂತರಗೊಳ್ಳುವೆವು! | ಬೆಳಿಗ್ಗೆ : ಕೀರ್ತನೆ 37,38,39<br>ಸಂಜೆ : ಅ.ಕೃ. 26 |
|---|---|---|

"ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ಹೋಗುತ್ತಾ ಆ ಪ್ರಭಾವದ ಸಾರೂಪ್ಯವುಳ್ಳವರೇ ಆಗುತ್ತೇವೆ" (2 ಕೊರಿಂ 3:18).

ನಿಮ್ಮ ಜೀವಿತದ ಉದ್ದೇಶ ಅಥವ ಗುರಿ ಏನು? ಒಂದು ದಿನ ಕರ್ತನು ಅಬ್ರಹಾಮನನ್ನು ಹೊರಗೆ ಕರೆದುಕೊಂಡು ಹೋಗಿ "ಆಕಾಶದ ಕಡೆಗೆ ನೋಡು, ನಕ್ಷತ್ರಗಳನ್ನು ಲೆಕ್ಕಿಸುವದು ನಿನ್ನಿಂದಾದರೆ ಲೆಕ್ಕಿಸು. ನಿನ್ನ ಸಂತಾನವು ಅಷ್ಟಾಗುವದು" ಎಂದು ಹೇಳಿದನು (ಆದಿ 15:5). ಕರ್ತನ ಮಾತಿನಲ್ಲಿ ಅಬ್ರಹಾಮನು ಯಾವದೇ ಸಂಶಯ ವ್ಯಕ್ತಪಡಿಸದೆ ಹಾಗೆಯೇ ನಂಬಿದನು.

ಆಕಾಶದಲ್ಲಿನ ಕೋಟ್ಯಾನುಕೋಟಿ ನಕ್ಷತ್ರಗಳೊಂದಿಗೆ ಯೇಸುಕ್ರಿಸ್ತನು ಉದಯಸೂಚಕ ನಕ್ಷತ್ರವಾಗಿ ಕಾಣಿಸಿದನು. ಆತನು ದಾವೀದನ ವಂಶವೆಂಬ ಬುಡದಿಂದ ಹುಟ್ಟಿದ ಚಿಗುರೂ, ಅವನ ಸಂತತಿಯೂ ಉದಯಸೂಚಕವಾದ ಪ್ರಕಾಶವುಳ್ಳ ನಕ್ಷತ್ರವೂ ಆಗಿರುವನು (ಪ್ರಕ 22:16). ಯಾಕೆಂದರೆ, ಸಮಸ್ತವು ಯಾವನಿಗೋಸ್ಕರವೂ ಯಾವನಿಂದಲೂ ಉಂಟಾಯಿತೋ ಆತನು ಬಹು ಮಂದಿ ಪುತ್ರರನ್ನು ಪ್ರಭಾವಕ್ಕೆ ಸೇರಿಸುವಲ್ಲಿ ಅವರ ರಕ್ಷಣಾಕರ್ತನನ್ನು ಬಾಧೆಗಳ ಮೂಲಕ ಸಿದ್ಧಿಗೆ ತರುವದು ಆತನಿಗೆ ಯುಕ್ತವಾಗಿತ್ತು (ಇಬ್ರಿ 2:10) ಎಂದು ದೇವರ ವಾಕ್ಯ ಹೇಳುತ್ತದೆ. ಇನ್ನು ಪ್ರಸಂಗಿಸಲ್ಪಡುವ ಹಲವು ಬೋಧನೆಗಳು ಸುವಾರ್ತೆಗಳಾಗಿವೆ. ಜನರನ್ನು ಪಾಪದಿಂದಲೂ ಅಂಧಕಾರ ಶಕ್ತಿಗಳಿಂದಲೂ ಹೊರಕ್ಕೆ ಎಳೆದು ತರುವಂಥವುಗಳಾಗಿವೆ. ಕೆಲವು ಬೋಧನೆಗಳು ಆತ್ಮಾವಲೋಕನ ಮಾಡಿಕೊಳ್ಳಲು ಸಹಾಯ ಮಾಡುವವು. ಇನ್ನು ಕೆಲವು ಬೋಧನೆಗಳು ನಿಮ್ಮನ್ನು ಪವಿತ್ರತೆಯ ಕಡೆಗೆ ನಡೆಸಿ ಆಳವಾದ ಆತ್ಮೀಕ ಅನುಭವದೊಳಗೆ ನಡೆಸುವದು. ಕೆಲವು ಬೋಧನೆಗಳು ನಿಮ್ಮನ್ನು ಪ್ರಭಾವದಿಂದ ಆಧಿಕ ಪ್ರಭಾವಕ್ಕೆ ನಡೆಸುವದು.

ದೇವಜನರೇ, ಸತ್ಯವೇದದಲ್ಲಿ ನಾಲ್ಕು ಮಾತುಗಳು ಪುನಃ ಪುನಃ ಹೇಳಲ್ಪಟ್ಟಿದೆ. 1) ಕೃಪೆಯ ಮೇಲೆ ಕೃಪೆ (ಯೋಹಾ 1:17). 2) ಬಲದ ಮೇಲೆ ಬಲ (ಕೀರ್ತ 84:7). 3) ಪರಿಶುದ್ಧತೆಯ ಮೇಲೆ ಪರಿಶುದ್ಧತೆ (ಪ್ರಕ 22:11). 4) ಪ್ರಭಾವದಿಂದ ಅಧಿಕ ಪ್ರಭಾವಕ್ಕೆ (2 ಕೊರಿಂ 3:18). ಆತ್ಮೀಕ ಜೀವಿತದಲ್ಲಿ ಹಂತ ಹಂತವಾಗಿ ಮೇಲೆ ಏರಲು ಹಲವು ಶ್ರೇಷ್ಠವಾದ ಅನುಭವಗಳುಂಟು. ಆ ಅನುಭವಗಳೆಲ್ಲಾ ಪೂರ್ಣಕೃಪೆಯೊಳಗೆ, ಪೂರ್ಣ ಬಲದೊಳಗೆ, ಪೂರ್ಣ ಪವಿತ್ರತೆಯೊಳಗೆ, ಪೂರ್ಣಪ್ರಭಾವದೊಳಗೆ ನಿಮ್ಮನ್ನು ನಡೆಸುವದು ಮದುವಣಗಿತ್ತಿ ಪೂರ್ಣ ಪ್ರಭಾವವುಳ್ಳವಳಾಗಿ ಕಾಣಿಸಲ್ಪಡುವದು ಅವಶ್ಯವಲ್ಲವಾ? (ಕೀರ್ತ 45:13). ಪ್ರಿಯರೇ ಬರಲಿರುವ ಪ್ರಭಾವದ ಅರಸನನ್ನು ಸಂಧಿಸಲು ಸಿದ್ಧಪಡಿಸಿಕೊಳ್ಳಿರಿ.

***ನೆನಪಿಗೆ : ''ದ್ವಾರಗಳೇ, ಉನ್ನತವಾಗಿರ್ರಿ. ಪುರಾತನ ಕದಗಳೇ ತೆರೆದುಕೊಂಡಿರ್ರಿ; ಮಹಾ ಪ್ರಭಾವವುಳ್ಳ ಅರಸನು ಆಗಮಿಸುತ್ತಾನೆ'' (ಕೀರ್ತ 24:7).***

| ಜುಲೈ 26 | ನಿತ್ಯ ಪ್ರಭಾವ! | ಬೆಳಿಗ್ಗೆ : ಕೀರ್ತನೆ 40,41,42<br>ಸಂಜೆ : ಅ.ಕೃ. 27:1-26 |
|---|---|---|

"ಕ್ರಿಸ್ತನಲ್ಲಿ ನಿಮ್ಮನ್ನು ತನ್ನ ನಿತ್ಯ ಪ್ರಭಾವಕ್ಕೆ ಕರೆದ ಕೃಪಾಪೂರ್ಣನಾದ ದೇವರು ........ ನಿಮ್ಮನ್ನು ಯೋಗ್ಯ ಸ್ಥಿತಿಗೆ ತಂದು ನೆಲೆಗೊಳಿಸಿ ಬಲಪಡಿಸುವನು" (1 ಪೇತ್ರ 5:10).

ದೇವರು ಮಹಿಮೆಯ ಅಥವಾ ದೇವ ಪ್ರಭಾವದ ಮುಖ್ಯವಾದ ಆರನೆಯ ಅನುಭವ ನಾವು ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ಮುನ್ನಡೆಯುತ್ತಾ ದೇವರ ನಿತ್ಯರಾಜ್ಯವನ್ನು ನಮ್ಮ ಸ್ವಾಸ್ತ್ಯವಾಗಿಸಿಕೊಳ್ಳುವದಾಗಿದೆ. ನಿತ್ಯ ಪ್ರಭಾವಕ್ಕಾಗಿಯೇ ಕರ್ತನು ನಿಮ್ಮನ್ನು ಕರೆದಿರುವನು. ಕರೆದಂಥ ದೇವರು ಸತ್ಯವಂತನು.

ಕರ್ತನು ನಿಮ್ಮನ್ನು ಲೌಕೀಕವಾದ ಆಶೀರ್ವಾದಗಳನ್ನು ಕೊಡಲು ಮಾತ್ರ ಕರೆಯಲಿಲ್ಲ ನಿತ್ಯತ್ವದ ಆಶೀರ್ವಾದಕ್ಕೆಂದೂ ಕರೆದಿರುವನು. ನಿಮ್ಮನ್ನು ನಿತ್ಯ ನಿತ್ಯವಾಗಿ ಮಹಿಮೆಪಡಿಸ ಬೇಕೆಂಬುದೇ ಆತನ ಅನಾದಿ ಸಂಕಲ್ಪವಾಗಿದೆ. ಒಂದು ಕಾಲದಲ್ಲಿ ನೀವು ಕರ್ತನಿಗೆ ಅನ್ಯರೂ ಪರದೇಶಿಗಳೂ ಆಗಿದ್ದಿರಿ. ಆತನು ನಿಮ್ಮನ್ನು ತನ್ನ ಮಕ್ಕಳಾಗಿ ಅಂಗೀಕರಿಸಿ ತನ್ನ ರಕ್ತದಿಂದ ಶುದ್ಧೀಕರಿಸಿ, ನಿತ್ಯ ಮಹಿಮೆಗೆಂದು ಕರೆದಿರುವನು. ನಿಮ್ಮ ಹೆಸರುಗಳನ್ನು ಜೀವಬಾಧ್ಯರ ಪುಸ್ತಕದಲ್ಲಿ ಬರೆದಿರುವನು. ಆತನೇ ನಿಮ್ಮನ್ನು ಪ್ರಭಾವದಿಂದ ಪ್ರಭಾವಕ್ಕೆ ನಡೆಸುತ್ತಾ ನಿಮ್ಮೊಳಗೆ ವಾಸವಾಗಿರುವನು. ಕ್ರಿಸ್ತನು ಮಹಿಮೆಯ ನಂಬಿಕೆಯಾಗಿ ನಿಮ್ಮೊಳಗೆ ಇರುವದೇ ಆ ರಹಸ್ಯ. ಹೌದು ನಿಮ್ಮೊಳಗೆ ಒಂದು ಮಹಿಮೆಯಾದ ಬೀಜ ಬಿತ್ತಲ್ಪಟ್ಟಿರುವದು ಕ್ರಿಸ್ತನೇ. ಆ ಮಹಿಮೆಯಾದ ಸ್ತ್ರೀಯ ಬೀಜವಾದ ಕ್ರಿಸ್ತನು (ಆದಿ 3:15). ನಿಮ್ಮ ಶರೀರವಾದ ಮಣ್ಣಿನ ಘಟದಲ್ಲಿ ನಿಕ್ಷೇಪವಾಗಿ ವಾಸಿಸುತ್ತಿರುವನು (2 ಕೊರಿಂ 4:7). ನಿಮ್ಮೊಳಗೆ ಬಿತ್ತಲ್ಪಟ್ಟಿರುವ ಆ ಮಹಿಮೆಯಾದ ಬೀಜವು ಪರಿಶುದ್ಧವಾದ ಬೀಜ. ಜಾಗ್ರತೆಯಿಂದ ಆ ಮಹಿಮೆಯನ್ನು ಕಾಪಾಡಿಕೊಳ್ಳಿರಿ. ಕ್ರಿಸ್ತನೆಂಬ ಬೀಜ ನಿಮ್ಮಲ್ಲಿ ಮಹಿಮೆಯಾಗಿ ದೇವರ ಸಾರೂಪ್ಯದಲ್ಲಿ ಬೆಳೆಯಲಿ ಕರ್ತನ ಬರುವಿಕೆಯಲ್ಲಿ ನಿಮ್ಮೊಳಗೆ ವಾಸಿಸುವ ಆ ಪವಿತ್ರ ಬೀಜವಾದಾತನು, ನಿಮ್ಮನ್ನು ರೂಪಾಂತರಗೊಳಿಸುವನು. ಅದುವೇ ಮಹಿಮೆಯಾದ ನಂಬಿಕೆ.

ದೇವಜನರೇ, ನಿಮ್ಮನ್ನು ರೂಪಾಂತರಗೊಳಿಸುವದಕ್ಕಾಗಿಯೇ, ಕ್ರಿಸ್ತನೂ, ಪವಿತ್ರಾತ್ಮನೂ ನಿಮ್ಮೊಳಗೆ ತಂಗಿರುವರು. ಅವರೇ ನಿಮ್ಮನ್ನು ನಿತ್ಯ ರಾಜ್ಯದೊಳಗೆ ಕರೆದುಕೊಂಡು ಹೋಗುವವರು ಅಲ್ಲಿ ನಿಮಗೆ ಘನವೂ, ಮಹಿಮೆಯೂ ಕಾದಿರಿಸಲ್ಪಟ್ಟಿದೆ. ನೀವು ಕರೆಯಲ್ಪಟ್ಟ ಕರೆಗೆ ಯೋಗ್ಯರಾಗಿ ನಡೆದುಕೊಳ್ಳಿರಿ.

*ನೆನಪಿಗೆ : ''ಪ್ರಭಾವ ಹೊಂದುವದಕ್ಕೆ ತಾನು ಮುಂದಾಗಿ ಸಿದ್ಧ ಮಾಡಿದ ಕರುಣಾಪಾತ್ರರಲ್ಲಿ ತನ್ನ ಮಹಿಮಾತಿಶಯವನ್ನು ತೋರ್ಪಡಿಸಿದ್ದಾನೆ'' (ರೋಮಾ 9:23).*

| ಜುಲೈ 27 | ಸ್ತುತಿಸುವಾಗ! | ಬೆಳಿಗ್ಗೆ : ಕೀರ್ತನೆ 43,44,45<br>ಸಂಜೆ : ಅ.ಕೃ. 27:27-44 |
|---|---|---|

"ಯೆಹೋವನು ಒಳ್ಳೆಯವನು, ಆತನ ಕೃಪೆಯು ಶಾಶ್ವತವಾಗಿರುವದು ಎಂದು ಕೃತಜ್ಞತಾಸ್ತುತಿ ಮಾಡುವವರ ಸ್ವರವೂ ಕೇಳಿಸಿದೊಡನೆ ಮೇಘವು ಯೆಹೋವನ ಆಲಯದಲ್ಲಿ ತುಂಬಿಕೊಂಡಿತು" (2 ಪೂ.ವೃ. 5:13).

ದೇವ ಮಹಿಮೆಯನ್ನು ಕಾಣುವದು ಹೇಗೆ? ಹೌದು, ಸ್ತುತಿಸುವಾಗ, ಸ್ತುತಿಗಳ ಮಧ್ಯದಲ್ಲಿ ವಾಸ ಮಾಡುವಾತನು ತನ್ನ ಮಹಿಮೆಯೊಂದಿಗೆ ಇಳಿದು ಬರುವನು. ಆತನ ಮಹಿಮೆ ನಿಮ್ಮ ಆಂತರ್ಯವನ್ನು ತುಂಬುವದು. ಆದ್ದರಿಂದ ಕರ್ತನನ್ನು ಪೂರ್ಣ ಹೃದಯದಿಂದ ಆರಾಧಿಸಿ ಆನಂದಿಸಿರಿ.

ಸೊಲೊಮೋನ ರಾಜನು, ದೇವಮಹಿಮೆಯನ್ನು ಪಡೆಯುವ ಮಾರ್ಗ ಕರ್ತನನ್ನು ಸ್ತುತಿಸುವದೇ ಎಂದು ನಿರ್ಧಿಷ್ಟವಾಗಿ ತಿಳಿದಿದ್ದನು. ಆದ್ದರಿಂದ ತಾನು ಕಟ್ಟಿದ ದೇವಾಲಯದಲ್ಲಿ ಸಂಗೀತ ವಾದ್ಯಗಾರರನ್ನು ಸಂಗೀತಗಾರರನ್ನು ನೇಮಿಸಿದನು. ಅವರು ತಮ್ಮನ್ನು ಪರಿಶುದ್ಧಪಡಿಸಿಕೊಂಡರು. 120 ಮಂದಿ ತುತೂರಿ ಊದುವವರಿದ್ದರು (2 ಪೂ.ವೃ. 5:11,12,13). ಅವರು ತುತೂರಿಗಳನ್ನು ಊದಿ ಏಕಕಾಲದಲ್ಲಿ ಕರ್ತನು ಒಳ್ಳೆಯವನು; ಆತನ ಕೃಪೆಯು ಎಂದೆಂದಿಗೂ ಇರುವದು ಎಂದು ಸ್ತುತಿಸಿ ಹಾಡಿದಾಗ ದೇವಾಲಯವು ಮೇಘದಿಂದ ಮುಚ್ಚಲ್ಪಟ್ಟಿತು. ನಿಮ್ಮ ಜೀವಿತದಲ್ಲಿ ಕರ್ತನನ್ನು ಸ್ತುತಿಸುವ ತೀರ್ಮಾನವನ್ನು ತೆಗೆದುಕೊಳ್ಳಿರಿ. ನಿಮ್ಮಿಂದ ಕರ್ತನು ಅದನ್ನೇ ನಿರೀಕ್ಷಿಸುವನು. ನನ್ನ ಸ್ತೋತ್ರವನ್ನು ಪ್ರಚಾರಪಡಿಸಲಿ ಎಂದು ನಾನು ಸೃಷ್ಟಿಸಿಕೊಂಡ ಆಪ್ತಜನರೆಂದು ಕರ್ತನು ಹೇಳುತ್ತಾನೆ (ಯೆಶಾ 43:20). ಪರಲೋಕದಲ್ಲಿ ಹಗಲಿರುಳು ಸ್ತುತಿ ಕೇಳಲ್ಪಡುತ್ತಲೇ ಇರುವದು. ಆದ್ದರಿಂದಲೇ, ಪರಲೋಕವು ದೇವ ಮಹಿಮೆಯಿಂದ ತುಂಬಿ ಇರುವದು. ಅಲ್ಲಿ ಕೆರೂಬಿಗಳು ಸೆರಾಫಿಗಳು ಕರ್ತನನ್ನು ಸ್ತುತಿಸುತ್ತಲೇ ಇರುವರು. ಕರ್ತನೇ ನಮ್ಮ ದೇವರು ನೀನು ಪ್ರಭಾವ ಮಾನ ಬಲಗಳನ್ನು ಹೊಂದಲು ಯೋಗ್ಯನು. ಸಮಸ್ತವನ್ನೂ ಸೃಷ್ಟಿಸಿದಾತನು ನೀನೇ. ಎಲ್ಲವೂ ನಿನ್ನ ಚಿತ್ತದಿಂದಲೇ ನಿರ್ಮಿತವಾದವು ಎಂದು ಹೇಳಿ ಸ್ತುತಿಸಿ ಹೊಗಳುತ್ತಿರುವರು (ಪ್ರಕ 4:11). ಮನುಷ್ಯರನ್ನು ಎಂದಿಗೂ ಹಾಡಿ ಹೊಗಳಿ ಮುಖಸ್ತುತಿ ಮಾಡದಿರಿ.

ದೇವಜನರೇ, ಕರ್ತನನ್ನು ಸ್ತುತಿಸಿ ಆರಾಧಿಸುವಾಗ ಆ ಆರಾಧನೆಗಳ ಮೂಲಕ ಕರ್ತನು ನಿಮ್ಮ ಮಧ್ಯದಲ್ಲಿ ಇಳಿದು ಬರುವನು. ಆದ್ದರಿಂದಲೇ ಕೀರ್ತನೆಗಾರನು ಇಸ್ರಾಯೇಲ್ಯರ ಸ್ತೋತ್ರ ಸಿಂಹಾಸನದಲ್ಲಿರುವಾತನೇ, ನೀನು ಪವಿತ್ರ ಸ್ವರೂಪನು (ಕೀರ್ತ 22:3) ಎಂದು ಹಾಡಿ ಹೊಗಳುತ್ತಾನೆ. ಪ್ರಿಯರೇ, ಕರ್ತನನ್ನು ಸ್ತುತಿಸುವಿರಾ? ಆತನನ್ನು ಆರಾಧಿಸುವಿರಾ? ಕರ್ತನ ಬರುವಿಕೆ ಬಹು ಸಮೀಪವಾಗಿರುವದು. ದೇವಮಹಿಮೆ ನಿಮ್ಮನ್ನು ತುಂಬುವ ಕಾಲ ಬಂದಿದೆ.

***ನೆನಪಿಗೆ : "ಕೃತಜ್ಞತಾಸ್ತುತಿಯೊಡನೆ ಆತನ ಮಂದಿರ ದ್ವಾರಗಳಿಗೂ ಕೀರ್ತನೆಯೊಡನೆ ಆತನ ಅಂಗಳಗಳಿಗೂ ಬನ್ನಿರಿ. ಆತನ ಉಪಕಾರ ಸ್ಮರಿಸಿರಿ. ಆತನ ನಾಮವನ್ನು ಕೊಂಡಾಡಿರಿ" (ಕೀರ್ತ 100:4).***

| ಜುಲೈ 28 | ## ಪ್ರಾರ್ಥಿಸುವಾಗ! | ಬೆಳಗ್ಗೆ : ಕೀರ್ತನೆ 46,47,48<br>ಸಂಜೆ : ಅ.ಕೃ. 28 |
|---|---|---|

"ಸೊಲೊಮೋನನು ಪ್ರಾರ್ಥಿಸುವದನ್ನು ಮುಗಿಸಿದ ಕೂಡಲೆ ಆಕಾಶದಿಂದ ಬೆಂಕಿಬಿದ್ದು ಸರ್ವಾಂಗಹೋಮ ದ್ರವ್ಯಗಳನ್ನೂ ಯಜ್ಞಮಾಂಸವನ್ನೂ ದಹಿಸಿಬಿಟ್ಟಿತು. ಯೆಹೋವನ ತೇಜಸ್ಸು ಆಲಯದಲ್ಲಿ ತುಂಬಿಕೊಂಡಿತು (2 ಪೂ.ವೃ. 7:1).

ದೇವಮಹಿಮೆಯನ್ನು ಯಾವಾಗ ಕಾಣಲು ಸಾಧ್ಯ? ಹೌದು, ಪ್ರಾರ್ಥಿಸುವಾಗ, ದೇವಮಹಿಮೆ ಇಳಿದು ಬರುವದು. ಅರಸನಾದ ಸೊಲೊಮೋನನ ಕಾಲದಲ್ಲಿ ಅವನು ದೇವಾಲಯವನ್ನು ಪ್ರತಿಷ್ಠಿಸಿದಾಗ, ಹೇರಳವಾದ ಸರ್ವಾಂಗಹೋಮಗಳನ್ನೂ, ಯಜ್ಞಗಳನ್ನೂ ಕರ್ತನಿಗೆ ಅರ್ಪಿಸಿ ಪ್ರಾರ್ಥಿಸಿದನು. ಕರ್ತನು ಯಜ್ಞದ ಹೋಮಗಳಿಂದ ಮೇಲೇರಿದ ಸುಗಂಧ ವಾಸನೆಯನ್ನು ಆಘ್ರಾಣಿಸಿ ಪ್ರಾರ್ಥನೆಯನ್ನು ಕೇಳಿ, ತನ್ನ ತೇಜಸ್ಸಿನೊಂದಿಗೆ ಇಳಿದು ಬಂದನು.

ಕರ್ತನಿಗೆಂದು ಯಜ್ಞವೇದಿಯನ್ನು ಮೊಟ್ಟ ಮೊದಲು ಕಟ್ಟಿದವನು ನೋಹನನೇ, ಪ್ರಪಂಚವೆಲ್ಲಾ ಜಲಪ್ರಳಯದಿಂದ ನಾಶವಾದಾಗ, ತನ್ನ ಕುಟುಂಬ ರಕ್ಷಿಸಲ್ಪಟ್ಟಿದ್ದರಿಂದ, ಕೃತಜ್ಞತೆಯಿಂದ, ಶುದ್ಧವಾದ ಸಕಲ ಮೃಗಗಳಲ್ಲಿ ಶುದ್ಧವಾದ ಸಕಲ ಪಕ್ಷಿಗಳಲ್ಲಿ ಕೆಲವನ್ನು ಕರ್ತನಿಗೆಂದು ಯಜ್ಞವಾಗಿ ಅರ್ಪಿಸಿದನು. ಆ ಯಜ್ಞದಿಂದ ಹೊರಟ ಸುವಾಸನೆಯಿಂದ ಕರ್ತನ ಹೃದಯ ಕರಗಿ – ನಾನು ಇನ್ನು ಮೇಲೆ ಮನುಷ್ಯನ ನಿಮಿತ್ತ ಭೂಮಿಯನ್ನು ಶಪಿಸುವದಿಲ್ಲ. ನಾನು ಎಲ್ಲಾ ಜೀವಿಗಳನ್ನು ಈಗ ಸಂಹರಿಸಿದಂತೆ ಇನ್ನು ಮೇಲೆ ಸಂಹರಿಸುವದಿಲ್ಲ ಎಂದು ಒಡಂಬಡಿಕೆ ಮಾಡಿದನು (ಆದಿ 8:21) ಹೊಸ ಒಡಂಬಡಿಕೆಯ ದೇವಜನರಾದ ನಾವು ನಾಲ್ಕು ರೀತಿಯಲ್ಲಿ ಯಜ್ಞವನ್ನು ಸಮರ್ಪಿಸಬೇಕು. 1) ತುಟಿಗಳ ಫಲವಾದ ಸ್ತೋತ್ರಯಜ್ಞ. 2) ನಮ್ಮನ್ನೇ ಯಜ್ಞಾರ್ಪಣೆ ಮಾಡುವದು. 3) ಕರ್ತನಿಗೆ ಒಪ್ಪುವ ಜಜ್ಜಿದ ಹೃದಯ. 4) ಶಿಲುಬೆಯಲ್ಲಿ ಕ್ರಿಸ್ತನೊಂದಿಗೆ ಜಜ್ಜಲು ಒಪ್ಪಿಸಿಕೊಡುವದು. ಹಳೆಯ ಒಡಂಬಡಿಕೆಯಲ್ಲಿ ದೇವಮಹಿಮೆಯನ್ನು ಕಾಣುವ ಸ್ಥಳ ದೇವಾಲಯವಾಗಿತ್ತು. ಯೆಶಾಯ, ದಾವೀದ, ಸೊಲೊಮೋನ ಇವರೆಲ್ಲರು ದೇವಮಹಿಮೆಯನ್ನು ಕಂಡದ್ದು ದೇವಾಲಯದಲ್ಲಿ (ಯೆಶಾ 6:1, ಕೀರ್ತ 63:2, 2 ಪೂ.ವೃ 7:1). ಆದರೆ ಹೊಸ ಒಡಂಬಡಿಕೆಯಲ್ಲಿ ನಾನೂ ನೀವೂ ಕರ್ತನ ಆಲಯವಾಗಿರುವೆವು (1 ಕೊರಿಂ 3:16).

ದೇವಜನರೇ, ಯೇಸುಕ್ರಿಸ್ತನ ಅನುಭವವೂ ಇದೇ ಆಗಿತ್ತು. ಆತನು ಪ್ರಾರ್ಥಿಸುವಾಗ ಆತನ ಮುಖಭಾವ ಬದಲಾಯಿತು. ಆತನ ವಸ್ತ್ರ ಹಿಮದಂತೆ ಬೆಳ್ಳಗೆ ಪ್ರಕಾಶಿಸಿತು. ಪ್ರಿಯರೇ, ನಿಮ್ಮ ಪ್ರಾರ್ಥನಾ ವೇಳೆಯನ್ನು ಅಧಿಕಗೊಳಿಸಿರಿ. ನಿಮ್ಮ ಜೀವಿತವು ಪ್ರಕಾಶಿಸುವ ರಹಸ್ಯ ಅದುವೇ.

*ನೆನಪಿಗೆ : ''ದೇವರೇ, ನನ್ನ ಹೃದಯವು ಸ್ಥಿರವಾಗಿದೆ, ನಾನು ಬಾರಿಸುತ್ತಾ ಹಾಡುವೆನು; ನನ್ನ ಅಂತರಂಗವೂ ಸಹ' (ಕೀರ್ತ 108:1).*

| ಜುಲೈ 29 | ಮಹಿಮೆಗಾಗಿ ಕರೆದನು! | ಬೆಳಗ್ಗೆ : ಕೀರ್ತನೆ 49,50<br>ಸಂಜೆ : ರೋಮಾ 1 |
|---|---|---|

"ನೀವು ಹೀಗೆ ರಕ್ಷಿಸಲ್ಪಟ್ಟು ನಮ್ಮ ಕರ್ತನಾದ ಯೇಸುಕ್ರಿಸ್ತನ ಪ್ರಭಾವವನ್ನು ಸಂಪಾದಿಸಿಕೊಳ್ಳಬೇಕೆಂದು ದೇವರು ನಮ್ಮ ಸುವಾರ್ತೆಯ ಮೂಲಕವಾಗಿ ನಿಮ್ಮನ್ನು ಕರೆದನು" (2 ಥೆಸ 2:14).

ಸುವಾರ್ತೆಯಿಂದ ಕರ್ತನು ನಿಮ್ಮನ್ನು ರಕ್ಷಣೆಗೆ ಕರೆದನು. ದೇವರ ಮಹಿಮೆಯನ್ನು ಪಡೆಯಲು ಕರೆದನು. ಸ್ನಾನಿಕನಾದ ಯೋಹಾನನಾದರೂ ಸರಿ, ಯೇಸುಕ್ರಿಸ್ತನಾದರೂ ಸರಿ, ಶಿಷ್ಯರಾದರೂ ಸರಿ, ದೇವರ ಕಡೆಗೆ ತಿರುಗಿರಿ. ಪರಲೋಕರಾಜ್ಯ ಸಮೀಪ ವಾಗಿರುವದು" ಎಂದು ಹೇಳಿ ಸುವಾರ್ತೆಯನ್ನು ಸಾರಿದರು. ಆ ಸುವಾರ್ತೆಯನ್ನು ನಂಬಿದವರು, ರಕ್ಷಿಸಲ್ಪಟ್ಟರು. ದೀಕ್ಷಾಸ್ನಾನ ಪಡೆದರು. ಪವಿತ್ರಾತ್ಮನನ್ನು ಪಡೆದರು. ಅವರ ಸ್ವಭಾವಗಳು ಮಾರ್ಪಟ್ಟವು. ದೇವ ಸೇವಕರಾಗಿ ತಲೆ ಎತ್ತಿ ನಡೆದರು.

ಭಾರತ ದೇಶ ಸ್ವತಂತ್ರ ಗಳಿಸಿದಾಗ ಎಲ್ಲರೂ ಭಾರತದ ಪ್ರಜೆಗಳೆಂದು ಕರೆಯಲ್ಪಟ್ಟರು. ಪ್ರತಿಯೊಬ್ಬರಿಗೂ, ಮಾತನಾಡುವ ಹಕ್ಕು ಸಿಕ್ಕಿತು. ಯಾರಾದರೂ ಸರಿ. ಚುನಾವಣೆಯಲ್ಲಿ ಪಾಲ್ಗೊಳ್ಳುವ ಹಕ್ಕು ಇರುವದು. ಗುಡಿಸಲಿನಲ್ಲಿ ವಾಸಿಸುವವನೂ ದೇಶದ ಎಂ.ಎಲ್.ಎ., ಎಂ.ಪಿ., ಮಂತ್ರಿ, ಮುಖ್ಯಮಂತ್ರಿ, ಪ್ರಧಾನ ಮಂತ್ರಿ, ರಾಷ್ಟ್ರಪತಿ ಆಗುವ ಸ್ವಾತಂತ್ರ್ಯ ವಿರುವದು. ಗುಡಿಸಲಿನಲ್ಲಿರುವವನು ಈ ರೀತಿಯ ಪದವಿಗಳಿಗೆ ಆರಿಸಿ ಬರುವಾಗ ಅವನು ತನ್ನ ಹಳೆಯ ರೀತಿ, ನೀತಿಗಳನ್ನು, ಮಾತುಗಳನ್ನು ಬದಲಾಯಿಸಿಕೊಳ್ಳಲೇಬೇಕು. ಯಾಕೆಂದರೆ ಅವನಿಗೆ ದೇಶದ ಕಾನೂನನ್ನು ಕಾಪಾಡುವ ಹಂಗು ಜವಾಬ್ದಾರಿ ಇರುತ್ತದೆ. ಹಾಗೆಯೇ, ಕರ್ತನ ಕರೆಯುವಿಕೆ ನಂತರ ನಿಮಗೆ ಬಾಧ್ಯತೆ ಕರ್ತವ್ಯ ಬರುವದು. ನಿಮ್ಮಲ್ಲಿ ಕರ್ತವ್ಯ, ಕಟ್ಟುಪಾಡು, ಗಣ್ಯತೆ ಇರಬೇಕೆಂದು ಕರ್ತನು ನಿರೀಕ್ಷಿಸುವನು. ಅಪೊ. ಪೌಲನು – "ನಾನು ಯಾವದನ್ನು ಹೊಂದುವದಕ್ಕಾಗಿ ಕ್ರಿಸ್ತಯೇಸು ನನ್ನನ್ನು ಹಿಡಿದುಕೊಂಡನೋ ಅದನ್ನು ಹಿಡಿದುಕೊಳ್ಳುವದಕ್ಕೋಸ್ಕರ ಓಡುತ್ತಾ ಇದ್ದೇನೆ" (ಫಿಲಿ 3:12) ಎಂದು ಹೇಳುತ್ತಾನೆ.

ದೇವಜನರೇ, ಕರ್ತನು ನಿಮ್ಮನ್ನು ತನ್ನ ಮಹಿಮೆಗೆಂದು ಕರೆದಿರುವನು. ಆದ್ದರಿಂದ ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ಮುಂದೆ ಸಾಗಲು ಪ್ರಯತ್ನಪಡಿರಿ. ಕ್ರಿಸ್ತನ ಸ್ವಭಾವದಲ್ಲಿ ಪಾಲುಗಾರರಾಗುವಂತೆ ನೀವು ಮಾರ್ಪಡಬೇಕೆಂಬುದೇ ನಿಮ್ಮ ಕರೆ. ಅಬ್ರಹಾಮನನ್ನು ಮಹಿಮೆಪಡಿಸಿದಾತನು ನಿಮ್ಮನ್ನೂ ಮಹಿಮೆಪಡಿಸುವನು. ನಿಮ್ಮ ಕರೆಯನ್ನೋ ಆರಿಸಿಕೊಳ್ಳುವಿಕೆಯನ್ನೂ ದೃಢಪಡಿಸಿಕೊಳ್ಳಿರಿ.

***ನೆನಪಿಗೆ : "ನೀವೆಲ್ಲರೂ ಒಂದೇ ದೇಹಕ್ಕೆ ಸೇರಿದವರು. ಒಬ್ಬನೇ ಆತ್ಮನನ್ನು ಹೊಂದಿದವರು. ಒಂದೇ ಪದವಿಯನ್ನು ನಿರೀಕ್ಷಿಸುವದಕ್ಕೆ ಕರೆಯಲ್ಪಟ್ಟವರು" (ಎಫೆ 4:4,5).***

| ಜುಲೈ 30 | ಪವಿತ್ರತೆಯನ್ನು ಕಾಯ್ದುಕೊಳ್ಳಿರಿ! | ಬೆಳಿಗ್ಗೆ : ಕೀರ್ತನೆ 51,52,53<br>ಸಂಜೆ : ರೋಮಾ 2 |
|---|---|---|

"ಅದನ್ನು ಕಳಂಕ, ಸುಕ್ಕು ಮುಂತಾದದ್ದೊಂದೂ ಇಲ್ಲದ ಕನ್ನಿಕೆಯೋ ಎಂಬಂತೆ ಪರಿಶುದ್ಧವೂ ನಿರ್ದೋಷವೂ, ಮಹಿಮೆಯುಳ್ಳದ್ದೂ ಆಗಿರುವ ಸಭೆಯನ್ನಾಗಿ ತನ್ನೆದುರಿನಲ್ಲಿ ನಿಲ್ಲಿಸಿಕೊಳ್ಳಬೇಕೆಂದು.... (ಎಫೆ 5:27).

ನೀವು ಪಡೆದ ಮಹಿಮೆಯನ್ನು ಕಾಯ್ದುಕೊಳ್ಳಬೇಕೆಂದರೆ, ಪವಿತ್ರತೆಯನ್ನು ಕಾಪಾಡಿಕೊಳ್ಳಬೇಕು. ಪವಿತ್ರತೆಗೂ ಮಹಿಮೆಗೂ ನಡುವೆ ಆಳವಾದ ಸಂಬಂಧ ಬೇರ್ಪಡಿಸಲಾರದ ಅನ್ಯೋನ್ಯತೆ ಇರುವದು. ಪವಿತ್ರತೆಯ ಮೇಲೆ ಪವಿತ್ರತೆ ಹೊಂದಿದರೆ ಮಾತ್ರ ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ಸಾಗಲು ಅಂದರೆ ಮಹಿಮೆಯ ಮೇಲೆ ಮಹಿಮೆ ಹೊಂದಲು ಸಾಧ್ಯವಾಗುವದು.

ಸಭೆ ಎಂಬುದು ಯೇಸುಕ್ರಿಸ್ತನಿಗಾಗಿ ಸಿದ್ಧಪಡಿಸಿದ ಸುಕ್ಕು ಕಳಂಕಗಳಿಲ್ಲದ ಕನ್ಯೆ ಅಥವಾ ಮದುವಣಗಿತ್ತಿ ಎಂದು ಸತ್ಯವೇದ ತಿಳಿಸುತ್ತದೆ. ಸಭೆ ಯಾವಾಗ ಮಹಿಮೆಯುಳ್ಳ ಸಭೆಯಾಗಿ ಕಾಣಲ್ಪಡುವದು? ಸುಕ್ಕು ಕಳಂಕಗಳೊಂದೂ ಇಲ್ಲದ ಪರಿಶುದ್ಧವಾಗಿರುವಾಗ ಮಾತ್ರವೇ (ಎಫೆ 5:27). ಅದುವೇ, ಮದುವಣಗಿತ್ತಿ ಸಭೆ, ಸುಕ್ಕು ಕಳಂಕ ಎಂಬುದು ಆಂತರ್ಯ, ಮನಸ್ಸಿನಲ್ಲಿ ಶರೀರದಲ್ಲಿ ಬರುವ ಇಚ್ಛೆಗಳು, ಹೆಮ್ಮೆ, ಹೊಟ್ಟೆಕಿಚ್ಚು ಮುಂತಾದವುಗಳೇ ಯೇಸುಕ್ರಿಸ್ತನ ರಕ್ತದ ಹೊರತು ಈ ಪಾಪದ ಕರೆಯನ್ನು ನೀಗಿಸಲು ಬೇರೆ ದಾರಿಯಿಲ್ಲ. ನೀವು ಶರೀರಭಾವವನ್ನು ಅನುಸರಿಸಿ ಬದುಕಿದರೆ ಸಾಯುವದು ನಿಶ್ಚಯ, ನೀವು ಪವಿತ್ರಾತ್ಮನಿಂದ ದೇಹದ ದುರಭ್ಯಾಸಗಳನ್ನು ನಾಶ ಮಾಡುವದಾದರೆ ಜೀವಿಸುವಿರಿ" ಎಂದು ಅಪೊ. ಪೌಲನು ಬರೆಯುತ್ತಾನೆ (ರೋಮಾ 8:13). ನೀವು ದೇವರ ಮುಂದೆ ಮಹಿಮೆಯುಳ್ಳವರಾಗಿ ನಿಲ್ಲುವಂತೆ ಪಾಪಗಳನ್ನು ಮಾತ್ರವಲ್ಲ. ದುರ್ಮಾರ್ಗತನವನ್ನು ದುರಭ್ಯಾಸಗಳನ್ನು ವಿಸರ್ಜಿಸಿರಿ. ದೇವರು ಮೋಶೆಗೆ – ಅಲ್ಲಿಯೇ ನಾನು ಇಸ್ರಾಯೇಲ್ಯರಿಗೆ ದರ್ಶನವನ್ನು ಕೊಡುವೆನು; ಅಲ್ಲಿ ಕಾಣಿಸುವ ನನ್ನ ಪ್ರಭಾವದಿಂದ ಆ ಸ್ಥಳವು ಪರಿಶುದ್ಧವಾಗಿರುವದು ಎಂದು ಹೇಳಿದನು (ವಿಮೋ 29:43). ಪರಿಶುದ್ಧತೆ ಇಲ್ಲದ ಸ್ಥಳದಲ್ಲಿ ದೇವ ಮಹಿಮೆ ಪ್ರಕಟವಾಗುವದಿಲ್ಲ.

ದೇವಜನರೇ, ಯೇಸುಕ್ರಿಸ್ತನ ರಕ್ತ ನಿಮ್ಮನ್ನು ಪರಿಶುದ್ಧಪಡಿಸಲಿ! ಸತ್ಯವೇದವನ್ನು ಓದಿ, ಧ್ಯಾನಿಸಿ ನಿಮ್ಮ ಜೀವಿತವನ್ನು ಸತ್ಯವೇದ ವಾಕ್ಯದಂತೆ ಕಟ್ಟಿ ಎಬ್ಬಿಸಿರಿ. ಪವಿತ್ರಾತ್ಮನಿಗೆ ನಿಮ್ಮನ್ನು ಪೂರ್ಣವಾಗಿ ಒಪ್ಪಿಸಿಕೊಡುವಿರಾದರೆ, ದೇವರಾತ್ಮನು ನಿಮ್ಮನ್ನು ಪರಿಶುದ್ಧಪಡಿಸುವನು. ಕ್ರಿಸ್ತನ ರಕ್ತ, ಸತ್ಯವೇದ ವಾಕ್ಯಗಳು, ಪವಿತ್ರಾತ್ಮನು ಈ ಮೂರೂ ನಿಮ್ಮನ್ನು ಪರಿಶುದ್ಧಪಡಿಸಿ ಮಹಿಮೆಪಡಿಸುವದು. ಪವಿತ್ರತೆಗೆ ನೀವು ಮುಖ್ಯತ್ವವನ್ನು ಕೊಡುವಾಗ, ಅದು ದೇವರ ಕೃಪೆಯನ್ನೂ ಕಾರುಣ್ಯವನ್ನೂ ನಿಮಗೆ ದೊರಕಿಸಿಕೊಡುವದು. ಪವಿತ್ರತೆ ಹೊಂದುವಲ್ಲಿ ಎಂದಿಗೂ ತೃಪ್ತಿಗೊಳ್ಳದಿರಿ. ಅದುವೇ ಮಹಿಮೆ ಹೊಂದುವ ರಹಸ್ಯ.

*ನೆನಪಿಗೆ : ''ಯಾವನು ಅಯೋಗ್ಯ ಕಾರ್ಯಗಳಲ್ಲಿ ಮನಸ್ಸಿಡದೆ, ಮೋಸ ಪ್ರಮಾಣ ಮಾಡದೆ ಶುದ್ಧ ಹಸ್ತವೂ ನಿರ್ಮಲ ಮನಸ್ಸೂ ಉಳ್ಳವನಾಗಿದ್ದಾನೋ ಅವನೇ ಯೆಹೋವನಿಂದ ಶುಭವನ್ನು ಹೊಂದುವನು (ಕೀರ್ತ 24:4–5).*

| ಜುಲೈ 31 | ಈಕಾಬೋದ್! | ಬೆಳಿಗ್ಗೆ : ಕೀರ್ತನೆ 54,55,56<br>ಸಂಜೆ : ರೋಮಾ 3 |
|---|---|---|

"ದೇವ ಮಹಿಮೆಯು ಇಸ್ರಾಯೇಲ್ಯರನ್ನು ಬಿಟ್ಟು ಹೋಯಿತೆಂದು ಹೇಳಿ ಆ ಕೂಸಿಗೆ ಈಕಾಬೋದ್ ಎಂದು ಹೆಸರಿಟ್ಟಳು" (1 ಸಮು 4:21).

ಏಲಿಯ ಮಗನಾದ ಫಿನೇಹಾಸನ ಹೆಂಡತಿ ತುಂಬು ಗರ್ಭಿಣಿಯಾಗಿದ್ದಳು. ಆ ಸಮಯದಲ್ಲಿ ಫಿಲಿಷ್ಟಿಯರು ಇಸ್ರಾಯೇಲ್ಯರನ್ನು ಜಯಿಸಿ, ಅವರ ಬಳಿ ಇದ್ದ ದೇವ ಮಂಜೂಷವನ್ನು ವಶಪಡಿಸಿಕೊಂಡರೆಂಬುದನ್ನೂ ತನ್ನ ಮಕ್ಕಳಾದ ಹೊಫ್ನಿಫಿನೇಹಾಸರು. ಯುದ್ಧದಲ್ಲಿ ಮಡಿದರೆಂಬ ಸಂಗತಿಯನ್ನು ಏಲಿಯು ಕೇಳಿ ಕುಳಿತಿದ್ದ ಪೀಠದಿಂದ ಹಿಂದಕ್ಕೆ ಬಿದ್ದು ಕತ್ತು ಮುರಿದು ಸತ್ತನು. ಈ ಎಲ್ಲಾ ಸಂಗತಿಗಳನ್ನು ಕೇಳಿದ ತುಂಬು ಗರ್ಭಿಣಿಯಾದ ಫಿನೇಹಾಸನ ಹೆಂಡತಿಗೆ ಪ್ರಸವ ವೇದನೆಯಾಗಿ ಮಗುವನ್ನು ಹೆತ್ತಳು. ದೇವ ಮಹಿಮೆಯು ಇಸ್ರಾಯೇಲ್ಯರನ್ನು ಬಿಟ್ಟು ಹೋಯಿತೆಂದು ಹೇಳಿ ಆ ಮಗುವಿಗೆ ಈಕಾಬೋದ್ ಎಂದು ಹೆಸರಿಟ್ಟಳು.

ಇಂದು ಅನೇಕ ವಿಶ್ವಾಸಿಗಳೂ, ದೇವಸೇವಕರೂ, ಈಕಾಬೋದ್ ಆಗಿ ಪರಿತಾಪಕರವಾಗಿ ಜೀವಿಸುತ್ತಿರುವರು. ಕರೆಯುವಿಕೆಯನ್ನು ಮರೆತು ದೇವ ಮಹಿಮೆಯು ತಮ್ಮನ್ನು ಬಿಟ್ಟು ಹೋಗುವದನ್ನು ಅರಿಯದೆ ಹೊರ ನೋಟಕ್ಕೆ ವಿಶ್ವಾಸಿಗಳಂತೆ ದೇವ ಸೇವಕರಂತೆ ನಟಿಸುತ್ತಿರುವರು. ಪರಲೋಕವು ಅವರಿಗೆ ಈಕಾಬೋದ್ ಎಂದು ಹೆಸರಿಡುವದು. ನೀನು ಮಹಿಮೆಯನ್ನು ಕಾಪಾಡಿಕೊಳ್ಳಲಿಲ್ಲವೇ, ಅಭಿಷೇಕದ ಬೆಲೆಯನ್ನು ನೀನು ತಿಳಿಯಲಿಲ್ಲವಲ್ಲಾ. ಪಾಪದೊಂದಿಗೆ ಆಟವಾಡಿ, ಇಚ್ಛೆಗಳನ್ನು ಬಯಸಿ ಈಕಾಬೋದಾಗಿ ನಿಂತಿರುವಿಯಲ್ಲಾ ಎಂದು ಕರ್ತನು ದುಃಖಿಸುವನು. ಅನೇಕರು ಸೇವೆಗಾಗಿ ಕರೆಯಲ್ಪಟ್ಟರು. ಸ್ವಲ್ಪ ಕಾಲ ಪ್ರಕಾಶಿಸಿದರು. ಅವರ ಜೀವಿತದಲ್ಲಿ ಚಿಕ್ಕ ಚಿಕ್ಕ ತಪ್ಪುಗಳು ಪ್ರವೇಶಿಸಿದವು. ಆದರೂ ಕರ್ತನ ಕೃಪೆ ಬಿಟ್ಟು ಅಗಲಲಿಲ್ಲ. ಇದರಿಂದ ಅವರು ಕೃಪೆ ಇನ್ನೂ ಹೆಚ್ಚಾಗುವಂತೆ ಪಾಪದಲ್ಲೇ ಜೀವಿಸುವೆನೆಂದು ಕರ್ತನನ್ನು ಅಸಡ್ಡೆ ಮಾಡಿದರು. ಇದರಿಂದ ಕೊನೆಯಲ್ಲಿ ದೇವ ಮಹಿಮೆ ಅವರನ್ನು ಬಿಟ್ಟು ಹೋಯಿತು. ದೇವ ಪ್ರಸನ್ನತೆ ತೆಗೆಯಲ್ಪಟ್ಟಿತು. ಸಂಸೋನನ ಪರಿಸ್ಥಿತಿಯೂ ಇದೇ ರೀತಿಯದು.

ದೇವಜನರೇ, "ಒಂದು ಸಾರಿ ಜ್ಞಾನಪ್ರಕಾಶದಲ್ಲಿ ಸೇರಿ, ಪರಲೋಕದಿಂದಾದ ದಾನದ ಅನುಭವವನ್ನು ಹೊಂದಿ ಪವಿತ್ರಾತ್ಮವರದಲ್ಲಿ ಪಾಲುಗಾರರಾಗಿ ದೇವರ ವಾಕ್ಯದ ಶ್ರೇಷ್ಠತೆಯನ್ನೂ ಮುಂದಣ ಯುಗದ ಮಹತ್ವವನ್ನೂ ಅನುಭವಿಸಿದವರು ಭ್ರಷ್ಟರಾದರೆ, ಅವರಲ್ಲಿ ತಿರಿಗಿ ಮಾನಸಾಂತರ ಹುಟ್ಟಿಸುವದು ಅಸಾಧ್ಯ" (ಇಬ್ರಿ 6:4,5,6). ಯಾಕೆಂದರೆ ಅವರು ಕ್ರಿಸ್ತನನ್ನು ಪುನಃ ಶಿಲುಬೆಗೆ ಹಾಕುವವರೂ ಆತನನ್ನು ಎಲ್ಲರ ಮುಂದೆ ಅವಮಾನಪಡಿಸುವವರೂ ಆಗಿದ್ದಾರೆ (ಇಬ್ರಿ 6:6). ಪ್ರಿಯರೇ, ಎಚ್ಚರಿಕೆಯಿಂದ ನಿಮ್ಮ ಹೃದಯವನ್ನು ಕಾಯ್ದುಕೊಳ್ಳಿರಿ.

***ನೆನಪಿಗೆ : "ಸದುಪದೇಶವನ್ನು ಹಿಡಿ, ಸಡಿಲ ಬಿಡಬೇಡ; ಅದನ್ನು ಕಾಪಾಡಿಕೋ. ಅದೇ ನಿನ್ನ ಜೀವವು (ಜ್ಞಾನೋ 4:13).***